
ಯಕ್ಷಗಾನ ಮಾಲಿಕೆ - ೩



ಯಕ್ಷಗಾನ

ಅನುಸಾಲ್ವ ಗರ್ವಭಂಗ

ಮತ್ತು

ನೀಲಧ್ವಜ ಕಾಳಗ

2007

ಬೆಲೆ: ರೂ. 20-00

ಯಕ್ಷಗಾನ ಮಾಲಿಕೆ - ೩



ಯಕ್ಷಗಾನ

ಅನುಸಾಲ್ವ ಗರ್ವಭಂಗ

ಮತ್ತು

ನೀಲಧ್ವಜ ಕಾಳಗ

ಯಕ್ಷಗಾನ ಕಲಾವಿದರಿಂದ ಹಾಗೂ
ಯಕ್ಷಗಾನ ಪ್ರೋತ್ಸಾಹಕರಿಂದ ಸಂಗ್ರಹಿತ ಹಾಗೂ
ಪರಿಶೋಧಿಸಲ್ಪಟ್ಟ ಪುಸ್ತಕ

2007 ಬೆಲೆ: ರೂ. 20-00

ಯಕ್ಷಗಾನ ಕಲಾವಿದರಿಂದ ಹಾಗೂ ಯಕ್ಷಗಾನ ಪ್ರೋತ್ಸಾಹಕರಿಂದ ಸಂಗ್ರಹಿತ ಹಾಗೂ ಪರಿಶೋಧಿಸಲ್ಪಟ್ಟ ಪುಸ್ತಕ

ಕೃತಿಯ ಹೆಸರು	:	ಯಕ್ಷಗಾನ ಮಾಲಿಕೆ - ೩
ಪ್ರಸಂಗ	:	ಅನುಸಾಲ್ವ ಗರ್ವಭಂಗ ಮತ್ತು ನೀಲಧ್ವಜ ಕಾಳಗ
ಪುಟಗಳು	:	೬೦
ಬೆಲೆ	:	೨೦.೦೦

ಪಾತ್ರ ವರ್ಗ

೧. ಧರ್ಮರಾಯ
೨. ಭೀಮ
೩. ಅರ್ಜುನ
೪. ವೃಷಕೇತು
೫. ಮೇಘನಾದ
೬. ಯೌವ್ವನಾಶ್ವ
೭. ಶ್ರೀ ಕೃಷ್ಣ
೮. ಸತ್ಯಭಾಮೆ
೯. ದ್ರೌಪದಿ
೧೦. ಸುವೇಗ
೧೧. ಬಾದರಾಯಣ
೧೨. ದೇವಕಿ
೧೩. ಅನುಸಾಲ್ವ
೧೪. ಪ್ರದ್ಯುಮ್ನ
೧೫. ನೀಲಧ್ವಜ
೧೬. ಪ್ರವೀರ
೧೭. ಜ್ವಾಲೆ
೧೮. ಮದನಮಂಜರಿ
೧೯. ಸಖಿಯರು
೨೦. ಸೈರಂಧ್ರಿ
೨೧. ಗಂಗೆ
೨೨. ಅಗ್ನಿ
೨೩. ಉನ್ಮುಖ
೨೪. ಚಾರಕರು - ಇತ್ಯಾದಿ

ಶ್ರೀಃ

ಯಕ್ಷಗಾನ

ಅನುಸಾಲ್ವ ಗರ್ವಭಂಗ ಮತ್ತು ನೀಲಧ್ವಜ ಕಾಳಗ

॥ ಭಾಮಿನಿ ॥

ಶ್ರೀಯರಸನನು ಭಜಿಸಿ ಗೌರೀ । ಪ್ರೀಯನಂಘ್ರಿಯ ದ್ಯಾನಿಸುತ ಗಣ । ನಾಯಕಂಗಭಿನಮಿಸಿ ವಾಗೀಶ್ವರಿಯ ಬಲಗೊಂಡು ॥ ತೋಯಜೋದ್ಭವ ಮುಖ್ಯಸುರಸಮು। ದಾಯಕಾನತನಾಗಿ ಯದುಕುಲ । ರಾಯ ಕೃಷ್ಣನ ದಯದಿ ಪೇಳುವೆನೀ ಕಥಾಮೃತವ ॥೧॥

॥ ದ್ವಿಪದಿ ॥

ಶ್ರೀಲಲನೆಯನು ಸ್ತುತಿಸಿ ಸುಜನರಿಗೆ ನಮಿಸೀ ॥ ಬಾಲದುರ್ಗಾಂಬಿಕೆಯ ಮನದಿ ನೆಲೆಗೊಳಿಸೀ ॥೧॥ ಶೀಲನಿಧಿಮದ್ಗುರು ಕೃಪಾಪ್ರಸರವೆರಸೀ ॥ ಮೂಲೋಕಭರಿತ ಚಿದ್ರೂಪನನು ಸ್ಮರಿಸೀ ॥೨॥ ವರಮಹಾಭಾರತ ಪುರಾಣಕಥನದಲಿ ॥ ಅರಸ ಧರ್ಮಜನಶ್ವಮೇಧ ತೊಡಗುತಲಿ ॥೩॥ ಧರಣಿಪತಿ ಯೌವನಾಶ್ವನ ಹಯವ ತರಿಸೀ ॥ ದುರುಳನನುಸಾಲ್ವನನು ಹರಿಪದಕೆಮಣಿಸೀ ॥೪॥ ನೀಲಧ್ವಜನ ಜೈಸಿ ಪಾರ್ಥ ಕಪ್ಪವನೂ ॥ ಭೂಲೋಲಧರ್ಮಜಂಗಿತ್ತ ಚರಿತೆಯನೂ ॥೫॥ ಪೇಳುವೆನು ತಿಳಿದಂತೆ ಯಕ್ಷಗಾನದಲೀ ॥ ಶೀಲರಿದತಿದ್ದಿ ಮೆರೆಸುವದು ಮೋದದಲೀ ॥೬॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ಭಾಗವತ ಜನಮೌಳಿವರಗುಣ । ಸಾಗರಗೆ ಜನಮೇಜಯಗೆ ಮಹ। ಯೋಗಿ ಜೈಮಿನಿ ಪೇಳುತಿರೆ ಸೊಗ । ಸಾಗಿ ಕಥನ ॥೧॥ ಯತಿಕುಲೋತ್ತಮ ಗೆಂದ ಪೃಥ್ವೀ । ಪತಿಯ ಮಜತಾನಶ್ವಮೇಧವ । ನತಿ ಮುದದಿ ಕೈಗೊಂಡು ಲಕ್ಷ್ಮೀ । ಪತಿಯ ದಯದಿ ॥೨॥ ಖೂಳನನು ಸಾಲ್ವಕನ ಧುರದಲಿ । ಸೋಲಿಸುತ ರವಿಮೊಮ್ಮಮತ್ತಾ । ಶ್ರೀ ಲಲಾಮನ ಪದದಿ ಕೆಡಹಿದ । ಮೇಲೆ ಭರದಿ ॥೩॥ ನೀಲಕೇತಾದ್ಯವನಿಪಾಲರ । ಕಾಳಗದಿ ನರಜೈಸಿದಂದವ । ಪೇಳಬೇಹುದೆನಲ್ಕೆ ವರ ಮುನಿ । ಪಾಲನುಡಿದ॥೪॥

ರಾಗ ॥ ಕಾಂಭೋದಿ ॥ ಝುಂಪೆತಾಳ

ಇಂದುವಂಶಜಧರ್ಮ । ನಂದನನು ಹರಿಯ ದಯ । ದಿಂದ ರಾಜ್ಯವ ನಾಳುತಿರಲು ॥ ಬಂಧುಬಾಂಧವರು ತ । ಮ್ಮಂದ್ಯರೊಡಗೂಡಿ ಸುಖ ।ದಿಂದ ಹಸ್ತಿನಪುರದ ಮುದದಿ ॥೧॥ ಅತಿ ಮನೋಹರವಾಗಿ । ಕ್ಷಿತಿಯ ಪಾಲಿಸುತಿರಲು । ಶತಮ ಖಾದ್ಯರು ಮೆಚ್ಚುವಂತೆ ॥ ಮತಿಯುತನು ಜಾನಕಿಯ । ಪತಿಯವೊಲು ಸಂತಸದಿ । ಕ್ಷಿತಿಪ ನಳನಹುಷರಿಂ ಮಿಗಿಲು ॥೨॥ ಗುರು ಭೀಷ್ಮ ಕರ್ಣ ಕೌರವ ಮುಖ್ಯ ಬಾಂಧವರ । ಧುರದೊಳೆಚ್ಚಾಡಿ ಸಂಹರಿಸಿ ॥ ದೊರಕಿದ ಘಮಂ ನೆನೆದು । ಧರಣಿಪತಿಯೊಂದುದಿನ । ಮರುಗಿದನು ತನ್ನ ಮನದೊಳಗೆ ॥೩॥

॥ ಭಾಮಿನಿ ॥

ಅಕಟಕಟ ಬಾಂದವರ ಕೊಂದೀ । ಸಕಲ ವೈಭವವೇಕೆ ಕುಲಕಂ । ಟಕನು ತಾನಾದೆ ನಲಪಿರಿದಪಕೀರ್ತಿಯಾಯಿತಲಾ ॥ ಸುಖವದೆಲ್ಲಿಹುದೆನಗೆ ಮಹ ಪಾ । ತಕವ ಪೊತ್ತಿಹ ಮೇಲೆ ಸಂತತ । ಮುಕುತಿಯಾಗದೆನುತ್ತ ಚಿಂತಿಸುತಿರ್ದನವನೀಶ ॥೧॥

ರಾಗ ॥ ಮಧ್ಯಮಾವತಿ ॥ ತ್ರಿವುಡೆತಾಳ

ಅರಸನೀಪರಿ ಚಿಂತಿಸುತ್ತಿರ । ಲರಿತುವೇದವ್ಯಾಸ ಹಸ್ತಿನ । ಪುರಕೆ ಬರಲಿದಿರ್ಗೊಂಡು ಮನ್ನಿಸೆ । ಹರುಷದಿಂ ಕುಳ್ಳಿರ್ದನೂ ॥ ವರಮುನೀಂದ್ರ ॥೧॥ ಧರೆಯಧಿಪನನುತಾಪದಲಿ ನಿಜ । ಶಿರವತಗ್ಗಿಸಿ ಮೌನದಲಿ ತಾ । ನಿರಲುಕಂಡವನಿಪನ ಭಾವವ । ಪರಮಋಷಿ ಬೆಸಗೊಂಡನೂ ॥ ನರಪತಿಯನೂ ॥೨॥

ರಾಗ ॥ ತೋಡಿ ॥ ತ್ರಿವುಡೆತಾಳ

ಎಲೆಮಹೀಪತಿ ಚಿಂತೆಯೇಕೈ । ಜಲಜನಾಭನಕರುಣದಿಂದಲೀ ಕಲಹ ಕಾನುವರಿಲ್ಲ ನಿನ್ನಲ್ಲಿ॥ ಇಳೆಯ ಪಾಲಿಪ ಹರುಷದೇಳ್ಗೆಗೆ । ಕಳೆಯಗುಂದಿದೆ ತವ ಮುಖಾಂಬುಜ । ತಿಳುಹುನಿಜ ಮರೆ ಮಾಚದೆನ್ನಲ್ಲಿ ॥೧॥ ವರ ಯಮಿಪನೀಕೇಳು ಲಕ್ಷ್ಮೀ । ವರನ ಕರುಣದಿ ಭಾಗ್ಯವಿದೆಮ । ತ್ತರಿಗಳುಪಹತಿಯಿಲ್ಲ ಚಿತ್ತವನೂ ॥ ಸೆರೆವಿಡಿದುದನವರತ ಶೋಕದೊ। ಳುರಿದುದೆನ್ನೊಡಲಿನ್ನು ಸೈರಿಸ ।ಲರಿಯೆನೆನೆ ಮುನಿನಾಥ ನಿಂತೆಂದ ॥೨॥

ವಾರಿನಿಧಿರವಿಕಿರಣದುರಿಯಿಂ । ದಾರಿಪೋದರೆ ಬಳಿಕಲದಕೇ । ನೀರ ನಿತ್ತ್ಪರಾರು ತ್ರೈಜಗದಿ ॥ ಧಾರಿಣಿಪನೀ ಚಿಂತಿಸಿದಡಿ । ನ್ನಾರು ಪರಿಹರಿಸು ವರು ಪೇಳೆನೆ । ಭೂರಮಣ ತಾಪಸನೊಳಿಂತೆಂದ ॥೩॥

॥ ಭಾಮಿನಿ ॥

ತಂದೆಮುನಿಚಿತ್ತೈಸು ಶಿಶುತನ । ದಿಂದ ನಮ್ಮನುಕಾಯ್ದ ಗಂಗಾ । ನಂದನಂಗನುಚಿತವನೆನೆದೆವು ಕರ್ಣನನುರಣದಿ ॥ ಕೊಂದೆವಗ್ರಜನೆಂದರಿಯದೆ ಮ । ದಾಂಧರಂದದೊಳಖಿಳರನುಸ । ದ್ಬಾಂಧವರನುಳಿದಿಹುದರಿಂವ ನವಾಸಲೇಸೆಂದ ॥೧॥

ರಾಗ ॥ ಸಾಂಗತ್ಯ ॥ ರೂಪಕತಾಳ

ಅರಸನಿಂತೆನೆ ಮೌನಿ । ವರನೆಂದನೆಲೆಯುಧಿ । ಷ್ಟಿರ ಶಾಸ್ತ್ರಾಗಮ ಪುರಾಣಗಳ ॥ ಅರಿಯದ ಪ್ರೌಢನೇ । ಧರೆ ನಿನ್ನ ವಶವಾಯ್ತು । ಹರುಷದಿ ಪಾಲಿಸಿನ್ನಿಳೆಯ ॥೧॥ ದುರಿತವ ಪೊತ್ತಿಹೆ ।ಧರೆವಶವಾಯ್ತೆಂಬ। ಹರುಷವದೆನಗಿಲ್ಲವಿನ್ನು॥ ಮರುತಜಗಿತ್ತೊಡೆತನವ ಕಾಂತಾರಕ್ಕೆ । ತೆರಳಿ ಶ್ರೀ ಹರಿಯಧ್ಯಾನಿಪೆನೂ ॥೨॥ ಧಾತ್ರೀಶ ಲಾಲಿಸು । ಕ್ಷಾತ್ರಧರ್ಮವನೋಡೆ। ಗೋತ್ರನಾಶನದಿಂದದುರಿತ ॥ ಪಾರ್ಥಿವರಿಗೆ ಬಪ್ಪ । ವಾರ್ತೆಯೆಳ್ಳನಿತನಾ। ನೀತ್ರಿಜಗದಲಿ ಕೇಳ್ದರಿಯೇ ॥೩॥ ಧರೆಯನೀ ಪಾಲಿಸ । ದಿರಲುನಿರ್ದೋಷಿಯೆ । ಹರಹರಾ ಭೂಪನೀಬನಕೇ । ತೆರಳಲಪ್ಪುದೆ ಲೇಸು । ತೆರಳಯ್ಯ ಪಟ್ಟವ । ಮರುತಜಗೀವೆವಾವಿನ್ನು ॥೪॥

॥ ಭಾಮಿನಿ ॥

ಧರಣಿಪತಿ ಮರುಳಹೆಯ ಶಶಿಕುಲ । ದರಸುಗಳು ಸತ್ಕ್ರತುವ ವಿರಚಿಸ । ದಿರಲುಸಲರದರಿಂ ಮಹಾಯಜ್ಞಾದಿ ಕರ್ಮಗಳ ॥ ಭರದಿ ನೀನೆಸಗಿದರೆ ಕುಲಸಂ । ಹರಣಕಿಲ್ಬಿಷಪೋಗಿ ಶುಚಿಯಹೆ। ತ್ವರಿತದಿಂ ನೀತುರಗಮೇಧವ ಗೈವುದೆನಲೆಂದ ॥೧॥

ರಾಗ ॥ ॥ ಏಕತಾಳ ॥

ಪರಮ ತಾಪನೇಂದ್ರಕೇಳು । ಮೆರೆವವಾಜಿಮೇಧಪಿಂತೆ । ವಿರಚಿಸಿದರ‍್ಯಾರೆಂಬುದ । ನರುಹೆನಲೆಂದ ॥೧॥ ಧರಣಿಪಕೇಳ್ಪಿಂತೆ ರಾಮ । ಧುರದಿದ ಶಶಿರನ್ನ ಕೊಂದ । ದುರಿತಹರಣಕಾಗಿ ಗೈದ । ತುರಗಮೇಧವ॥೨॥

॥ ವಾರ್ಧಿಕ್ಯ ॥

ಹೇದಯಾನಿಧಿಯೆ ಕಲುಷೋದಧಿಯಪೀರ್ವಹಯ । ಮೇಧವಡಬನ ಸೃಜಿಪ ವಿಧಿಯ ಪೇಳೆನೆ ಭೋಜ । ನಾದಿ ದ್ರವ್ಯಗಳದ್ವಿಜರಿಂಗಿತ್ತು ಮಖಹಯದ ಪಣೆಗೆ ಲಿಖಿತವಬಂಧಿಸೀ ॥ ಮೇದಿನಿಯ ಚರಿಸಿನೃಪರಂ ಗೆಲ್ದು ಕಪ್ಪಸಹಿ । ತೈದಿಬಹುದೊಂದು ವರುಷದೊಳನಿತು ದಿವಸ ನೀ । ಸಾಧಿಪುದು ಸತಿಯೊತ್ತಿನಿಂದೀರ್ದು ಕಾಮೇಚ್ಛೆಮರೆಯು ತಸಿಪತ್ರವ್ರತವ ॥೧॥ ಭೂರಮಣ ಲಾಲಿಸೈ ಗೌರಾಂಗಮಸಿತ ಪ್ರ । ಭಾರಾಜಿತೈಕ ಶ್ರವಣೋರು ಪೀತಸು ಪುಚ್ಛ । ಭೂರಿಗಮನ ವಿದಿನಿತುವಾರುಹದ ಲಕ್ಷಣವಿದೆಂದು ಮುನಿನುಡಿಯೆ ಕೇಳ್ದು ॥ ಈ ರೀತಿಯಿಂದ ಮಖವೆಸಗುವಡೆ ಧನವಿಲ್ಲ ಧಾರಿಣಿಯೊಳರಸುವಡೆ ಕುರುನೃಪತಿಯಿಂದ ಮಿತಿ । ಮೀರಿದಣೆದಿಹುದಿಳೆಯದೇ ಗೈವೆ ಶ್ರೀವರಂ ಸಹಿತಿಲ್ಲವೆಂದನೃಪನೂ ॥೨॥

ರಾಗ ॥ ಕಾಂಭೋದಿ ॥ ಝಂಪೆತಾಳ

ಋಷಿವರನೆ ಕೇಳು ನೀ । ನುಸುರಿದಂದದ ಹಯವು । ವಸುಧೆಯೊಳಗೆಲ್ಲಿಹುದೊಕಾಣೇ ॥ ಬಸವಳಿದರೆನ್ನನುಜ । ರಸಮಸಂಗರದೊಳೆನ । ಉಸುರಿದನು ಬಾದರಾಯಣನು ॥೧॥ ಧರಣೀಶ ಕೇಳ್ಸಿಂತೆ । ಮರುತ ನೃಪಹಯಮೇಧ । ವಿರಚಿಸಿದ್ವಿಜರ್ಗೀಯೆಧನವ । ಪೊರಲಾರದವರಂದು । ತೊರೆದ ದನವಿಹುದು ಹಿಮ । ಗಿರಿಯೊಳದ ತರಿಸುನೀನರಸ ॥೨॥ ಅಹಹ ಯತಿಪಾಲ ಮರ್ಕಟಗೆ ಮದ್ಯವನಿತ್ತ । ಡಹುದೆಕುಲಹತ್ಯಭವವನವ ॥ ದಹಿಸಲೆಸಗುವ ಮಖವದ್ವಿಜರೊಡವೆಯಿಂ ಗೈದ । ರಹುದೆ ಸದ್ಗತಿ ಕೀರ್ತಿಯೆನಗೇ ॥೩॥ ಪರಶುಧರ ಪೂರ್ವದೊಳು । ತರಿದು ನೃಪರನುಧರೆಯ । ವರವಿಪ್ರರಿಂಗಿತ್ತುದಲ್ಲೈ ॥ ಭರಿತ ಬಲರಹರುಧರೆ । ಗರಸರದರಿಂಧನವ । ತರಿಸಯ್ಯ ಗಿರಿಯ ತಟದಿಂದ ॥೪॥

॥ ವಾರ್ಧಿಕ್ಯ ॥

ಧರೆಯಧಿಪಲಾಲಿಸೈ ಭದ್ರಾವತೀ ನಗರ । ದರಸನಾಯೌವನಾಶ್ವನೊಳಿಹುದು ತುರಗವದ । ತರಿಸುವುದು ಕಳುಹುನಿನ್ನನುಜನಹಭೀಮನಂ ಘನ ಪರಾಕ್ರಮಿಯಲ್ಲವೇ ॥ ವರಕರ್ಣಸೂನು ವೃಷಕೇತುತಾಂ ಕಿರುಬಲನೆ । ಭರಿತ ಬಲನಾ ಘಟೋತ್ಕಚತನಯನಿಲ್ಲವೇ । ಹರಿನೆನಸಿದರೆ ಬಾರನೇಕೈಕೊಳ ಧ್ವರವನೆನೆ ಭೀಮನಿಂತೆಂದನೂ ॥೧॥

ರಾಗ ॥ ಭೈರವಿ ॥ ಏಕತಾಳ

ಜನಪತಿ ತೊಡಗಧ್ವರವ । ಬಿಡು । ಮನಸಿನೊಳಿಹ ಸಂಶಯವ ॥ ಘನವಲ್ಲಿದು ವರಹಯವ । ತಹ । ರೆನಗೀವುದು ವೀಳಯವ ॥೧॥ ಕ್ಷಣದಲಿ ಭದ್ರಾವತಿಯ । ಭೂ । ಪನಗೆಲಿದಾತನ ಪಡೆಯ ॥ ರಣದಲಿ ತರಿದಾಡುವೆನು ತರು । ವೆನು । ತುರಗವ ನೋಡಿನ್ನು ॥೨॥ ತಂದೀಯ ದಡಶ್ವವನು । ಖತಿ । ಯಿಂದಲಿಧರೆಯಮರರನು ॥ ಕೊಂದ ದುರಿತ ಬರಲೆನಗೇ । ಸುರ ವೃಂದವೆ ಸಾಕ್ಷಿಯಿನುಡಿಗೇ ॥೩॥

॥ ವಾರ್ಧಿಕ್ಯ ॥

ಅಗ್ರಭವಲಾಲಿಸಿನ್ನೇತರದು ಸಂದೇಹ । ಶೀಘ್ರದಿಂ ಕಾರ್ಯಕುಜ್ಜುಗಿಸು ಸಾಹಾಯವ ಸ । ಮಗ್ರಧನ ಮಖಹಯವ ಸಹತೋರಿದಂ ಬಾದರಾಯಣಂ ನಮಗೆನ್ನಲು ॥ ತಾಗ್ರಹಿಸುತಿನಿತ ವೃಷಕೇತು ತಾನಿದಿರೆದ್ದು । ವಿಗ್ರಹಂ ತನಗೊದಗಿ ತಿನ್ನೆನುತಲುಬ್ಬಿವಾ । ಜಿ ಗ್ರಹಣಕನುವಾಗಿ ನಿಂದು ಧರ್ಮಜ ಗೆರಗಿ ಪೌರುಷದೊಳಿಂತೆಂದನೂ ॥೧॥

ರಾಗ ॥ ಮಾರವಿ ॥ ಏಕತಾಳ

ಬಿಡುಬಿಡುಯೋಚನೆ । ಕೊಡುತನಗಪ್ಪಣೆ । ಪೊಡವಿಪತಿಗಳೊಡೆಯ ॥ ನಡೆವೆಮರುತಸುತ । ನೊಡನೆ ಮೆರೆವಹಯ । ಪಿಡಿದೈತಹೆನಯ್ಯ ॥೧॥ ಗಂಧವಹಾತ್ಮಜ । ನೆಂದ ನುಡಿಗೆಡರು । ಬಂದರೆರವಿಸುತಗೇ ॥ ಕಂದನ ಕೇಳರಿ । ವೃಂದವರಿದು ಬಹೆ । ನಿಂದಾಂನಿನ್ನೆಡೆಗೇ ॥೨॥

ರಾಗ ॥ ॥ ಏಕತಾಳ

ನಂದನ ಕೇಳ್ನೀನಿನ್ನೆಮಗೆ । ಮುಂದೆ ಸೋಮಕುಲದೇಳಿಗೆಗೆ । ಕಂದ ನಿನ್ನ ಕಳುಹಲಾರೆ । ನಿಂದು ಸಮರಕೆ ॥ ಹಿಂದೆ ಕೇಳ್ನಿನ್ನಯ್ಯಜ್ಯೇಷ್ಟ। ನೆಂದರಿಯದೆ ತರಿದೆವವನ । ನೆಂದರೇ ವೃಷಧ್ವಜತಾ । ನಂದು ನುಡಿದನೂ ॥೧॥

॥ ವಾರ್ಧಿಕ್ಯ ॥

ತಂದೆಕೇಳನುಜರಾಗಿರ್ಪ ನಿಮ್ಮೈವರಂ । ಪೊಂದಿರದೆ ಮಜ್ಜನಕ ಕಡುದ್ರೋಹಗೈದನದ । ರಿಂದಾತನೆಸಗಿದ ಪರಾಧಮಂ ಪರಿಹರಿಸದಿರಲು ದಾರಿಣಿಯೊಳವನ ॥ ಕಂದನಾನಿರ್ದೇನುಫಲವೆನ್ನ ಕಳುಹುಧುರ । ಕಿಂದು

ಪವನಜಗೆ ಬೆಂಬಲವಾಗಿ ರಿಪುಗಳಂ । ಕೊಂದುನಿಜ ಶೌರ್ಯ ಮಂತೋರ್ಪೆ ಕೊಡು ವೀಳಯವನೆಂದುಮಣಿ ದಂಪದದೊಳು ॥೧॥

॥ ಕಂದಪದ್ಯ ॥

ಪರಿಕಿಸುತವರೀರ್ವರ ಮನ । ದಿರವಂ ವರಮೇಘನಾದನಾಕ್ಷಣ ಬರುತಂ ॥ ಶಿರವಂ ಚಾಚುತ ಧರ್ಮಜ । ಗಿರದೊಯ್ಯನೆತಾನಿಂತೆಂದಂ ಭರದಿಂದಂ ॥೧॥

ರಾಗ ॥ ಸೌರಾಷ್ಟ ॥ ತ್ರಿವುಡೆತಾಳ

ಅರಸಕೇಳ್ಸಂಗರದಿರಿಪುಗಳ । ತರಿವೆನಾನೆಂ ಬಾಳುತನವೆನ । ಗಿರದು ಮದ್ಭಿನ್ನಪವ ಲಾಲಿಸು । ಕರುಣದಿಂದ ॥೧॥ ಆವಪರಿಯಿಂದಾದರಿನ್ನೀ । ಪಾವಮಾನಿಗೆ ವಾರುಹವನೀ । ಭೂವಳಯದೊಳಗೆಲ್ಲಿರಲು ತಂ । ದೀವೆ ಜವದಿ ॥೨॥ ಈ ನುಡಿಗೆ ತಪ್ಪಿದರೆ ತವಪದ । ದಾಣೆಸರಿದಪೆನುಗ್ರ ನರಕಕೆ । ನೀನೆನಗೆ ವೀಳಯವನೀಯ್ಯೆ । ಮಾನವೇಂದ್ರ ॥೩॥

॥ ಭಾಮಿನಿ ॥

ಮರುತಸಂಭವ ಮೊಮ್ಮನೆಂದುದ । ಕರಸಹರುಷಿಸಲೆಂದ ಪವನಜ । ಹರಿಯ ದಯವಿರೆಗೆಲ್ವೆನೆನ ಲಿಂತೆಂದ ಮುನಿವರನು ॥ ಧರಣಿಪತಿತವ ಭಾಗ್ಯಕೆಣೆಯಹ । ರಿರುವರೇಕೈ ಸೇರಿತಿನ್ನಾ । ತುರಗವೀ ಮಾರುತಿಯು ಪೇಳಿದ ಮೇಲೆ ಬಿಡುಭಯವ ॥೧॥

ರಾಗ ॥ ಕೇತಾರಗೌಳ ॥ ಅಷ್ಟತಾಳ

ಮೇದಿನೀಪತಿ ಕೇಳು । ಮಾಧವನನು ನೀವಿ । ನೋದದಿ ಬರಿಸಿ ಕೊಂಡು ॥ ಆದಯಾಬ್ಧಿಯನುಜ್ಞೆ । ಯಾದಂತೆ ಮುಂದಿನ್ನು । ಸಾಧಿಸು ಕಾರ್ಯವನು ॥೧॥ ತುರಗವ ತಂದನಂ । ತರದಿ ಧನವತೋರ್ಪೆ। ಬರುವೆ ನಿಶ್ಚಯ ನಿಮ್ಮನು ॥ ಹರಿಯೆಪಾಲಿಸಲೆಂದು । ತೆರಳಲು ಮುನಿಯತ್ತ । ಧರಣಿಪನಿರ್ದನಿತ್ತ ॥೨॥ ಶತಮಖನುತ ಲಕ್ಷ್ಮೀ । ಪತಿಯಿಲ್ಲದ ಧ್ವರ । ಹಿತಮಾಹುದೇ ಮನಕೆ ॥ ಅತಿಜವದಿಂ ಕಿರೀಟಿಯ ಕಳುಹುವೆನೆಂಬ । ಮತದಿ ಧ್ಯಾನಿಸುತಿರ್ದನು ॥೩॥ ಶ್ರೀರಮಾಧವ ಭಕ್ತೋ । ದ್ಧಾರಪಾಲಿಪುದೆನೆ ದ್ವಾರಕಿಯೊಳಗರಿತು ॥ ಭೂರಿಸಂಭ್ರಮದಿಂದ। ಗಾರುಡಧ್ವಜನಾಗಿ। ಸಾರಸಾಂಬಕ ಬಂದನೂ ॥೪॥

ರಾಗ ॥ ಆರಭಿ ॥ ಏಕತಾಳ

ಬಂದ । ಗೋವಿಂದನು ನಿತ್ಯಾ । ನಂದ ॥ಪಲ್ಲ॥ ಬಂದನು ಭರದಿ ಮು । ಕುಂದತಾನಾಗಿ ಖ । ಗೇಂದ್ರನನೇರಿ ಭಕ್ತ । ವೃಂದವ ಪೊರೆವರೆ ॥ಅನುಪಲ್ಲ॥ ಶ್ರೀಶಂ । ಮನಮೋಹನ । ವೇಷಂ । ಶತಭಾಸ್ಕರ ಸಂ । ಕಾಶಂ । ಮನ್ಮಥ ಪಿತಸುವಿ । ಲಾಸಂ । ನಗೆಮೊಗದ ಸ । ರ್ವೇಶಂ॥ ವಾಸವಾರ್ಚಿತನು ಕೈ । ವೀಸುತ ಭಯಹಸ್ತ । ಲೇಸ ಪಾಲಿಸಲು ಮ । ಹೀಶನೆಡೆಗೆ ಹರಿ ॥೧॥

॥ ಕಂದಪದ್ಯ ॥

ಭೂಮಿಪ ಕೇಳಾ ಮುರಹರ । ಸಾಮಜಪುರದೆಡೆಗೈತರೆ ಕಂಡೋರ್ವ ಚರಂ ॥ ತಾ ಮುದದಿಂದಲಿ ನಡೆತಂ । ದಾಮಹಿಪತಿಗೆರಗುತ ಪೇಳಿದನೀ ತೆರನಂ ॥೧॥

ರಾಗ ॥ ಮುಖಾರಿ ॥ ಏಕತಾಳ

ಇಳೆಯಪಾಲಕ ಲಾಲಿಸಯ್ಯಾ । ನಾನೆಂಬ ನುಡಿಯ । ನೊಲಿದು ಸಂತಸದಿಂದ ಜೀಯ ॥ ನೆಲನೊಡೆಯರ ಕುಲ । ತಿಲಕ ನಿನ್ನಯ ಮೇ। ಲಿರಿಸಿ ದಯವನಾ । ಜಲಜಾಂಬಕ ಯದು । ಕುಲದರೆಯನು ಯಿ ಪೊಳಲ ಪೊರೆಗೆ ನಿಜ । ಲಲನೆಯರೆಲ್ಲರ । ನುಳಿದೈತಂದಿಹ ॥೧॥ ಸಿರಿಯರಸನ ನಿದಿರ್ಗೊಳಲು । ಬೇಗ ನೀನೇಳು । ಬರಿದೆ ತಡವ್ಯಾಕೆ ಕೃಪಾಳು ॥ ಪರಿಪರಿ ತೊಳಲು । ತ್ತರಸುವ ಬಳ್ಳಿ ಕಾ । ಲ್ಗೆರದೆ ತೊಡಕಿ ದಂ । ತೊರೆವದೇನು ಶ್ರೀ । ಹರಿ ತಾ ಬಂದಿಹ । ಕರುಣಾಕರ ಶರ । ಣರ ಧೊರೆ ಕೇಳೆಂ । ದೆರಗಿದ ಚರಣಕೆ ॥೨॥

॥ ಭಾಮಿನಿ ॥

ಚರರ ನುಡಿಯನು ಕೇಳಿ ಧರ್ಮಜ । ಭರಿತ ಸಂತಸದಿಂದಲಾತಗೆ। ಹಿರಿದುಚಿತವಿತ್ತವನ ಕಳುಹಿಸಿ ಬಳಿಕ ಶ್ರೀ ವರಗೆ ॥ ಶರಣಜನರಾವಳಿಯ ಸಲಹುವ । ಕರುಣವೆಂತುಟೊಯೆನುತ ತನ್ನನು । ಜರುಸಹಿತಲೈತಂದ ಹರಿಯನು ಕಾಂಬ ತವಕದಲಿ ॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ಬಂದರಸ ಭಕ್ತಿಯಲಿ ಶ್ರೀ ಗೋ । ವಿಂದ ನಡಿಗಭಿನಮಿಸೆ ಕರುಣಾ। ಸಿಂಧು ತೆಗೆದಪ್ಪಿದನು ಸಂತಸ । ದಿಂದ ನೃಪನ ॥೧॥ ಚರಣಕಾನತರಾದಮರು

ತಜ । ನರ ನಕುಲಸಹದೇವರನು ಮೃದು । ಕರದಿ ಪಿಡಿದೆತ್ತಿದನು ಲಕ್ಷ್ಮೀ । ವರನುದಯದಿ ॥೨॥ ಫಣಿಶಯನ ಗೋವರ್ಧನೋದ್ಧರ । ಣನೆ ಚಿನುಮಯನೆ ಪಾಲಿಸೆಂದಾ । ವನಜಮುಖಿ ದ್ರೌಪದಿ ಮಣಿಯೆ ಶಿರ ।ವನು ನೆಗಹಿದ ॥೩॥ ಬಳಿಕ ನೃಪತಿಗೆ ಕರವಗೊಟ್ಟಾ । ಬಲಿಮಥನ ನಡೆತಂದ ಹರಿಯೊಳು । ಸಲುಗೆಯೆಂತುಟೊ ಪಾಂಡುಸುತರಿಗೆ । ತಿಳಿವರಾರೈ ॥೪॥ ಸಿರಿಯರಸನಾಸ್ಥಾನ ಕೈತರ ।ಲಿರುಳು ನೃಪನೋಲಗವನಿತ್ತನು । ಧರಣಿಪತಿ ಕೇಳೇನನೆಂಬೆನು । ಮೆರೆವ ಸಭೆಯ ॥೫॥

॥ ವಾರ್ಧಿಕ್ಯ ॥

ಹರಿಯಂತೆ ಶ್ರೀಯುತಂ ನಭದಂತೆ ಕವಿಯುತಂ । ಸರಸಿರುಹ ಸಖನಂತಮಿತಸುತೇಜಾನ್ವಿತಂ । ವರಸರಿತ್ಪತಿಯಂತೆ ಹರಿದರುಶನೋತ್ಸಾಹದಿಂ ಘೋಷಭರಿತಮಾಗಿ ॥ ಸುರಲೋಕದಂತೆ ಸುಮನಸಯುತಂ ಕೈಲಾಸ । ಗಿರಿಯಂತೆ ಶಿವಯುತಂ ತಾನಾಗಿ ಸೊಬಗಿನಿಂ ।ಮೆರೆವ ನೃಪನಾಸ್ಥಾನ ಮಂಟಪಂ ಕಂಡು ಹರಿ ನಗುತ ಭೂಮಿಪಗೆಂದನು ॥೧॥

ರಾಗ ॥ ಕೇತಾರಗೌಳ ॥ ಅಷ್ಟತಾಳ

ಧರಣೀಶ ಕೇಳ್ನಿನ್ನ ।ಸಿರಿಗೆಣೆಯುಂಟೆ ಯಿ ।ನ್ನರಸು ಧರ್ಮಕ್ರಿಯೆಗೇ॥ ಕುರು ಪುರೂರವರ್ಯೆದೆ ಸೋಲುವರಾ ವಿನಿ । ತರೊಳಿನ್ನು ಧನ್ಯರೆಂದ ॥೧॥ ಅಹುದುನಿಜಾಶ್ರಿತನಿವಹದ ಘನತೆಯೊ ।ಳಹಿತಲ್ಪ ಧನ್ಯರಿನ್ನು ॥ ವಿಹಿತವೀ ನುಡಿ ಭಕ್ತವತ್ಸಲನೆಂಬುದ । ಕಿಹುದೆ ಸಂದೇಹ ಮೇಣು ॥೨॥ ಧರೆಯೊಳುಪಾಂಡವಸ್ಥಾಪನಾಚಾರ್ಯರೆಂ । ದೊರೆಯದಿರ್ಪರೆ ನಿನ್ನನು॥ ಮುರಹರ ನಿನ್ನಯ ಮಹಿಮೆಯು ಘನವೆನು । ತರುಹಲು ಮಗುಳೆಂದನು॥೩॥

ರಾಗ ॥ ಸಾಂಗತ್ಯ ॥ ರೂಪಕತಾಳ

ಅರಸ ಲಾಲಿಪುದೆನ್ನ ।ಬರಿಸಿದೆಯೇಕೆ ಕೇ ।ಳರಿಗಳ ಸುಳಿವಿನಿಸಿಲ್ಲ ಧರೆಗೆ ಮತ್ಸರಪದಾಯಾಧ್ಯರಿನ್ನಿಲ್ಲ ವ । ಸರದ ದಿಗ್ವಿಜಯ ಮುನ್ನಿಲ್ಲ ॥೧॥ ನರವೃಕೋದರ ಮಾದ್ರಿ । ತರಳರೊಳೆರವಿಲ್ಲ । ಧರಣಿಪಾಲಕ ನಿನಗಿನ್ನು ॥ ವಿರಚಿಪ ರಾಜಕಾರಿಯವೇನದರುಹೆನೆ । ಸಿರಿಯರಸನೊಳೆಂದ ನೃಪನು ॥೨॥ ಹರಿಯೆ ಕೇಳೀ ಚರಾ । ಚರದೊಳಗಿಹ ನಿನ । ಗರಿ ಯದೆ ಮನ್ಮನದಿರವು ॥ ನರನಾಟಕದ ನುಡಿ ಸಾಕದಂತಿರಲದ । ನೊರೆವೆ

ಕಾರುಣ್ಯಾಬ್ಧಿ ಕೆಲವು ॥೩॥ ಬಾದರಾಯಣನಿಲ್ಲಿ ನಡೆತಂದೆನಗೆ ಹಯ । ಮೇಧಾಧ್ವರದ ವಿಧಿಗಳನು ॥ ಬೋಧಿಸಲದಕಶ್ವತಹೆನಿಂದು ನುಡಿದವ್ರ । ಕೋದರನೆನೆ ಹರಿನುಡಿದ ॥೪॥

॥ ವಾರ್ಧಿಕ್ಯ ॥

ಯೆಲೆ ಮಹೀಪಾಲ ಮರುಳಹೆಯ ಮುನಿವರ ನಿಟ್ಟ । ಬಲೆಗಿಂತು ಸಿಲುಕವರೆ ಯೌವನಾಶ್ವಾದ್ಯರತಿ । ಬಲರು ಹಿಂದಣ ಧೊರೆಗಳಂತಲ್ಲ ಕೈಯಿಕ್ಕಲರಿದು ಭೂಮಂಡಲದೊಳು ॥ ಹುಲುಮೃಗಾಳಿಯ ತರಿದ ಮದವನಿಭ ಮೃಗರಾಜ । ನೊಳು ತೋರ್ದಡಹುದೆ ಪೇಳಿದ ಕುಮತಿ ಭೀಮನೇಂ । ತಿಳಿವನೀತನಮತದೊಳುದ್ಯೋಗಿಪರೆ ಮಖಕೆಯೆನುತ ಮತ್ತಿಂತೆಂದನು ॥೧॥

ರಾಗ ॥ ತೋಡಿ ॥ ಏಕತಾಳ

ಧಾತ್ರಿಪಾಲ ಕೇಳು ಪವನ । ಪುತ್ರಗಿನಿತು ಮತಿಯದಿರಲು । ಧೂರ್ತಬಕನಿಗಿಟ್ಟಕೂಳ । ತುತ್ತುಗೊಂಬನೇ ॥೧॥ ಯೆಂದ ಮಾತ ಕೇಳಿ ವಾಯು । ಕಂದನೆಂದ ಗೋವಳರ । ಮಂದಿರದಿ ಕದ್ದು ಕೂಳ । ತಿಂದಾತನ್ಯಾರೈ ॥೨॥ ತೋಚದೇ ನೀತಿಯದೆಲಾ ನಿ । ಶಾಚರಿಯ ನೊಲಿಸುತಾಳ್ವ । ನೀಚ ಕೃತ್ಯವಾರದೆಂದು । ನಾಚದರುಹಯ್ಯ ॥೩॥ ನರಕದೈತ್ಯನೆಡೆಯೊಳಿರ್ದ । ತರಳೆಯರುದುರುಳೆಯರೆಂ । ದರಿಯೆಯ ನೀ ಕರಡಿಸುತೆಯ । ವರಿಸೆ ನೀತಿಯ್ಯೆ ॥೪॥

॥ ಭಾಮಿನಿ ॥

ಸಾಕುಸಾಕಚ್ಯುತನೆ ಬಲ್ಲೆನು । ಕಾಕುನುಡಿಗಳ ಬರಿದೆಯನ್ನೊಡ । ನೇಕೆ ಪೇಳುವೆ ನಿನ್ನೊಳವನಾನರಿಯದಿರ್ಪವನೆ ॥ ಪಾಕ ಶಾಸನ ಮುಖ್ಯ ಸುರರುಪಿ । ನಾಕಿಸಹಿತಡ್ಡೈಸಿದರು ತಹೆ । ನಾಕುದುರೆಯ ನುಡಿಗೆತಪ್ಪೆನೆನಲ್ಕೆ ಹರಿ ನುಡಿದ ॥೧॥

ರಾಗ ॥ ಕಾಂಬೋದಿ ॥ ಝಂಪೆತಾಳ

ನುಡಿದ ಭಾಷೆಯ ತಪ್ಪಿ । ನಡೆವನಲ್ಲದ ಬಲ್ಲೆ । ಮಡಿದ ದುಃಶ್ಶಾಸನನು ಬಗಿದು ॥ ಬಿಡದೆ ಪೈಶಾಚರಂ । ತೊಡಲರಕ್ತವ ಕುಡಿದ । ಕಡು ಪರಾಕ್ರಮಿಯ್ಯೆಸೆ ಬಿರಿದು ॥೧॥ ಚಿನ್ಮಯಾತ್ಮಕನೆ ಕೇಳ್ । ಸ್ತನ್ಯ

ಗೊಟ್ಟಾಕೆಯ ಸು ।ವನ್ನೀಂಟಿ ಬಿಡದೆ ರಕ್ಕಸಿಯ ॥ ನಿರ್ನಾಮಗೈದ ಸಂ। ಪನ್ನ ಶೌರ್ಯಾ ಧಿಕರು । ನಿನ್ನಂತೆ ಜಗದೊಳ್ಯಾರಯ್ಯ ॥೨॥ ಭಂಡತನದಿಂದ ತಿರಿ ।ದುಂಡು ಬಾಣಸವ ಕೈ । ಕೊಂಡು ದೂಷಣ ಗಂಜದಿರುವ ॥ಚಂಡ ವಿಕ್ರಮಿ ನಿನ್ನ । ಗಂಡುತನ ಸುಡುಸುಡನೆ। ಪುಂಡರೀಕಾಕ್ಷಗಿಂ ತೆಂದ ॥೩॥

ರಾಗ ॥ ಕೇತಾರಗೌಳ ॥ ಅಷ್ಟತಾಳ

ಹರಹರ ದೂಷಣಕಂಜಿ ಜಾರತ್ವವ । ವಿರಚಿಸಿದೆಯ ಹೆಣ್ಣಾಗಿ ॥ ಅರಿದುದಿಲ್ಲವೆ ಬಾಣಸದ ಪರಿದ್ವಿಜನಾಗಿ । ತಿರಿದು ನೀನುಣಲಿಲ್ಲವೆ ॥೧॥ ಧರಣಿಪಾಲರ ಕೂಡೆ ಗೋವಳರಿಂಗೆಲ್ಲಿ । ಸರಿಯಪ್ಪಕಾಲವುಂಟೆ ॥ ಅರುಹಲಂಜುವೆ ನಶ್ವವನುತಹೆನೆಮ್ಮನು । ಪೊರೆಯೊ ಯಜ್ಞವ ನಡೆಸಿ ॥೨॥ ಮುರಹರ ನಗುತೆಂದ । ತುರಗವತಹ ಸತ್ವ । ವಿರುವದಾದರೆ ತಹುದು ॥ ಬರಿದೆಗಳಹಬೇಡ । ಕೊರತೆಯಪ್ಪುದೆನಲ್ಕೆ । ವರಧರ್ಮಸುತನೆಂದನು ॥೩॥

॥ ಭಾಮಿನಿ ॥

ಪರಮಪಾವನ ಮೂರ್ತಿತವಪದ । ಸರಸಿಜಕೆ ತಲೆವಾಗುವೆನು ನಾ। ಶರಣವತ್ಸಲ ನಿನ್ನ ಭಕ್ತರಿಗುಂಟೆ ಅಪಜಯವು ॥ ಕರುಣಿ ನೀ ದಯವಾದರೆ ಮಗಹ । ಸರಿಯದಾರ್ರೈ ಪೇಳೆನುತ ಭೂ । ವರನೆರಗೆಶಿರ ನೆಗಹಿ ಮತ್ತಿಂತೆಂದನ ಸುರಾರಿ ॥೧॥

ರಾಗ ॥ ಸುರುಟ ॥ ಏಕತಾಳ

ಕೇಳೆಲೆ ಯಮಜಾತ । ಧಾತ್ರೀ । ಪಾಲಕ ವಿಖ್ಯಾತ ॥ ಪಾಲಿಪೆ ಶಶಿಕುಲ। ಮೂಲ ಶಿರೋಮಣಿ । ಜಾಲವಲ್ಲಿದು ಚೆಂ । ತಾಲಲನೆಯ ಬಿಡು ॥೧॥ ಅರುಹುವದೇನಿನ್ನು । ನಿಮ್ಮೊ। ರ್ವರ ಮನದಿರವನ್ನು ॥ ಪರಿಕಿಸಲೀಪರಿ । ಯೊರೆದಿಹೆನಲ್ಲದೆ । ಪರಮಾಪ್ತರು ನಿಮ । ಗೆರಡೆಣಿಸುವೆನೇ ॥೨॥ ಘನವೇನೈ ನಿನಗೇ । ಯಿೂ ಮಖ । ತೃಣವಿದು ನೀ ಹರಿಗೇ ॥ ಅನಿಲಜನನು ಕಳು । ಹೆನುತುಸುರುತ ಶ್ರೀ । ಚಿನುಮ ಯನಿರ್ದನು । ಜನಪತಿ ಸಹಿತ ॥೩॥

॥ ವಾರ್ಧಿಕ್ಯ ॥

ಜನಮೇಜಯಾಖ್ಯ ನೃಪ ಲಾಲಿಸೈ ಪಾಂಡವರ । ದೆನಿತು ಪುಣ್ಯೋದಯವೊ ಜಲರುಹಭವಾಮರರು । ಮುನಿಗಣಂ ಸಹಿತ ನಿರಶನದಿಂದ

ತಪವಿರ್ದಡಂ ನಿರತಬಳಿಕವರ್ಗೆ ॥ ಚಿನುಮಯಾತ್ಮಕ ಹರಿಯ ಕಾಂಬಡಸದಳ ಪಾಂಡು । ತನಯರೆಡೆಯೊಳಗನಿಶ ವಾಸವಾ ಗಿರ್ಪನಾ । ವನಜನಾಭನ ಮಹಿಮೆಯಂ ಬಲ್ಲರಾರು ಮುಂಗಧೆಯಕೆಳೇಂದ ಮುನಿಪ ॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ಮರುದಿವಸದುದಯದಲಿ ಧರಣಿಪ । ಹರಿ ಮುಕುಂದನೆ ರಕ್ಷಿಸೆನುತಲಿ । ಭರದಿ ಬಂದೋಲಗವನಿತ್ತ ಶ್ರೀ । ವರನು ಸಹಿತ ॥೧॥ ಅನಿತರೊಳಗನಿಲಜನು ಭೂಪಗೆ । ಚಿನುಮಯಗೆ ಸಹ ಮಣಿದು ವೀಳ್ಯವ। ನೆನಗೆ ಕೊಡುವುದು ತಹೆನು ಹಯವನು । ಕ್ಷಣದೊಳೆಂದ ॥೨॥ ಮತ್ತೆ ಕರ್ಣಜ ಮೇಘನಾದ ಭ । ಟೋತ್ತಮರು ಹರಿ ಧರ್ಮಜರಿ ಗೆರ । ಗುತ್ತನಿಂದಿರೆ ವೀಳ್ಯವನು ನೃಪ । ನಿತ್ತನಂದು ॥೩॥ ಅರಸುಗಾವಲನರನೊಳಿರಿಸುತ । ತರಿಸಿರಥಗಳನೇರಿ ಘೋಷದಿ । ಪೊರಟುಬರೆ ಹೈಡಿಂಬಿ ಕರ್ಣಜ। ಮರುತಸುತರು ॥೪॥

॥ ವಾರ್ಧಿಕ್ಯ ॥

ಬರೆಮುಂದೆ ನಿರತ ಸದ್ಭುಜಗಧರನಾಗಿ ಸಸಿ । ಧರನಾಗಿ ಹರಿಗತಿ ಪ್ರಿಯನಾಗಿ ದಕ್ಷಜಾ । ವರನಂತಿರುವೆನೆಂಬ ಪೆಂಪಿನಿಂದೆಸೆವ ಭದ್ರಾವತಿಗೆ ನಡೆತಂದರು ॥ ಸರಸದಿಂದುಲಿವುತಿರ್ಪಳಿಗಳಿಂ ಗಿಳಿಗಳಿಂ । ಮಿರುಪ ನವಶಶಿಕಾಂತ ಶಿಲೆಗಳಿಂ ಕೊಳಗಳಿಂ । ಪರಿನಿರ್ಮಲ ಸರೋವರಗಳಿಂ ತೊರೆಗಳಿಂದಾಸೀಮೆ ಚೆಲ್ವಾಂತುದು ॥೧॥

॥ ಭಾಮಿನಿ ॥

ಇಂತೆಸೆವ ಭದ್ರಾವತಿಯ ಪುರ । ದಂತರದ ಗಿರಿಶಿಖರದೆಡೆಗಾ । ಕುಂತಿಸುತ ನಡೆತಂದುನಗರ ಸಿರಿಗೆಮನಮೆಚ್ಚಿ ॥ ನಿಂತು ಕರ್ಣಜಗಿರದೆ ತೋರಿದ । ಸಂತಸದಿ ವಿಸ್ತಾರದಿಂ ಚೆ । ಲ್ವಾಂತು ಕಾಣುವ ಪರಿಯನೆಲ್ಲವ ಪೂರ್ವಭಾಗದಲಿ ॥೧॥

ರಾಗ ॥ ಕಾಂಭೋದಿ ॥ ಝಂಪೆತಾಳ

ಕಂದ ವೃಷಕೇತು ಕೇ । ಳಿಂದೆಮ್ಮ ಕಣ್ಗೆಮುದ । ವಂದೋರ್ವ ಪರಿಯೊಳಿಹ ನಗರ ॥ ಮುಂದೆಸೆವುದಹಹ ವರ । ನಂದನೋದ್ಯಾನ

ಸೊಬ ।ಗಿಂದ ನೋಟವನು ಚಲಿಸುತ್ತ ॥೧॥ ಬಕುಳ ಮಂದಾರ ಪಾ । ದರಿ ಕರ್ಣಿಕಾರ ಚಂ ।ಪಕ ಕೋವಿದಾ ಪ್ರಿಯಂಗು ॥ ಸಕಲ ತರುನಿ ಚಯಂಗಳಂಗಜನ ವಿವಿಧ ಸಾ ।ಯಕದ ಮೂಡಿಗೆಯ ಮುಗುಳುಗಳ ॥೨॥ ಅಂಬರವ ಚುಂಬಿಸುವ ನಗರದಾಸೌಧಗಳ । ಅಂಬುಜಾಕ್ಷಿಯರ ತಂಡಗಳ । ಸಂಭ್ರಮದೊಳಿಕ್ಕೆಲದಿ ಮೆರೆವ ವೀಧಿಯ ಸೋಡು । ತುಂಬಿಹುದು ಸಕಲ ಸೌಭಾಗ್ಯ ॥೩॥ ಮದಗಜಂಗಳ ಸಾಲತೇಜಿಗಳ ಬಳಗಗಳ । ವಿಧ ವಿಧದ ಜನರ ತಿಂಥಿಣಿಯ॥ ಕದನಗಲಿಗಳ ನಿವಹ । ವದನೆಲ್ಲ ತೋರಿಸುತ । ಹದನಗಳ ಯೋಚಿಸುತಲಿರ್ದ ॥೪॥

॥ ವಾರ್ಧಿಕ್ಯ ॥

ಜನಪಕೇಳಾವೇಳೆಯೊಳು ದಿನಪತನ್ನಾತ್ಮ । ಜನಸುತಂಗ್ಯೆವ ಮಖಿಕಶ್ವಮಂ ಕೊಂಡೊಯ್ಯ ।ಲೆನುತೆನ್ನ ಮೊಮ್ಮನೈತಂದೀರ್ಪನ ಮಲಹಯಮಂ ತೋರಿದಿಹ ನೃಪಾಲ ॥ ಯೆನುತ ಕಡುಗೋಪ ದಿಂದುರಿಯುಗುಳ್ದಪನೊ ತಾ । ನೆನಲಾತಪಂ ಪೆರ್ಚುತಿರಲನಿಲ ಸಂಭ್ರಂವಂ। ಮನದಿ ಬಹು ಚಿಂತೆಯಂ ತಳೆದು ಕರ್ಣಜನ ಮೊಗಮಂ ನೋಡು ತಿಂತೆಂದನು ॥೧॥

ರಾಗ ॥ ಸಾಂಗತ್ಯ ॥ ರೂಪಕತಾಳ

ತರಳಕೇಳಾದಿತ್ಯ । ಸರಿದ ಮಧ್ಯಾಹ್ನಕೀ । ಪುರದಿಂದ ಸರಸಿಗೈ ತರುವ ॥ ತುರಗನಿಕಾಯವ । ಪರಿಕಿಸುಮುನಿಯೆಂದ ॥ ಗುರುತಿನ ಹಯವ ನಾಕಾಣೆ ॥೧॥ ನಗರದೊಳಿಲ್ಲವೊ । ಮಿಗೆ ಪೊರಮಡಿ ಸರೋಬಗೆಯ ದೇನೆನಗೆ ಕಾಣಿಸದೆ । ಜಗತಿಪಾಲಕಗೆಂತು ॥ ಮೊಗದೋರ್ವೆನಮರರು । ನಗುವರಶ್ವಮನೊಯ್ಯದಿರಲು ॥೨॥ ಋಷಿಪುಸಿನುಡಿವನೆ। ಪುಸಿದೊಡೆ ಹರಿತಾ ಸೈ । ರಿಸುವನೆಸಹಿಸಲು ಭಾಗ್ಯ॥ ವಸುದೆಯಾಣ ನ ಬಾಗ ನಾಗಲೀ ಶಶಿಕುಲ । ಜನವದು ಕಲೆಗುಂದಲುಂತೆ

ಚತುರ್ವಿಧಂ ತಿಳಿಯಲಾನು ॥ ವಿರಚಿಸಿದ ವೀರಪ್ರತಿಜ್ಞೆಯಂ ಪೂರೈಸ । ಲರಿಯದಾತ್ಮದ್ರೋಹಮಿಂತೈದು ದ್ರೋಹವೈ । ತರದೆಯೆನಗಿನ್ನು ತುರಗವನು ಕೊಂಡೊಯ್ಯದಡೆ ಕಾಂಬೆನೆಂತವರನೆಂದ ॥೧॥

॥ ಭಾಮಿನಿ ॥

ಆ ಸಮಯದಲಿ ಯೌವನಾಶ್ವ ಮ । ಹೀಶನಾಳುಗಳಾಹಯವನತಿ ತೋಷದಿಂ ನೀರ್ಗುಡಿಸೆನಗರವ ಪೊರಡಿಸುತ ಬರಲು ॥ ಆಸಮೀರಜನೀಕ್ಷಿಸು ತಲಿ । ನ್ನೇಸುಧನ್ಯನೊತಾನೆನುತಲಿರ । ಲಾಸಹಸಿಯಡಿಗೆರಗಿ ನುಡಿದನು ಮೇಘನಾದಭಟ ॥೧॥

ರಾಗ ॥ ಕೇತಾರಗೌಳ ॥ ಝಂಪೆತಾಳ

ಜೀಯ ಬಿಡುಮನದೆಣಿಕೆಯ । ಮದ್ಬಲುಹಿ । ನಾಯತವ ಪರಿಕಿ ಸಯ್ಯ ॥ ನೋಯದೆಳ್ಳಿನಿತು ಮನದೀ । ಸಂತಸದಿ । ನೀಯೆನ್ನ ಕಳುಹ ಜವದೀ ॥೧॥ ತುರಗವನುತಂದು ನಿನ್ನ । ಪಾದಪಂ । ಕರುಹ ಕೊಪ್ಪಿಸದು ಡೆನ್ನ । ಪಿರಿದುಶಪಥವನು ಕೇಳು । ಬರಲೆನಗೆ । ವರಪಂಚಪಾತಕಗಳು॥೨॥ ಗಗನಪಥಮಂ ಪಿಡಿಯುವೆ । ಮಾಯೆಗಳ । ನುಗಿದಶ್ವಮಂ ಸೆಳೆಯುವೆ॥ ನಗಧರನೆ ಸಾಕ್ಷಿಯೆನುತ । ತಾಕ್ಷೈಯ । ಮುಗಿದು ಬೀಳ್ಕೊಂಡನತ್ತ ॥೩॥

॥ ವಾರ್ಧಿಕ್ಯ ॥

ಅರಸ ಕೇಳಾ ಮೇಘನಾದನಿಂತಲ್ಲಿಂದ । ಭರದಿಚಿಗಿದಂಬರಕೆ ಮಾಯೆಯಂ ಬೀಸಿಘನ । ತರವರುಷ ಸುರಿಸಿದಂ ಕವಿಸಿದಂ ಹರಿಯಕಾಹಿನ ವರ್ಗೆ ಕತ್ತಲೆಯನು ॥ ತರಹರಿಸಿ ಬಲಬೆದರಿ ಪರಿದುದೇಣ್ದೆಸೆಗಾಗ । ಧರೆಗಿಳಿದು ಹೈಡಿಂಬದಿವ್ಯಾಶ್ವಮಂ ಕೊಂಡು । ಸರಿದನಾಗಸಕದಂ ಕಂಡು ಕಡುಗಲಿ ಭಟರು ತಡೆದೆಂದ ರತಿರೌದ್ರದಿ ॥೧॥

ರಾಗ ॥ ಮಾರವಿ ॥ ಏಕತಾಳ

ಘಡಘಡನಿಲುನಿಲು । ಕೆಡುಕ ಖಳಾಧಮ । ಅಡಿಯಿಡದಿರು

ಫಣಿಕುಲ ಗರುಡನ । ಕೆಣಕಿದೊಲಾಯ್ತಿಂ । ದಿನ ನಿಮ್ಮಯ ಮಾತೇ॥೨॥ ದುರುಳನೆ ನೀನೀ । ಬರಿ ಮಾಯೆಗಳನು । ವಿರಚಿ ಉತೆಮ್ಮಿರವ ॥ ಅರಿಯದೆ ಬಂದಿಹೆ । ಸರಸವೆ ಧುರವೆಂ । ದಿರದೆಚ್ಚರು ಶರವ ॥೩॥ ಬುರವಶರಂ ಗಳ । ತರಿದೆಂದನು ನಿ । ಮ್ಮರಸನ ಭಟರೊಳಗೆ ॥ ಧುರಧೀರರು ಮೇ। ಣೆರುವರೊ ನೀವೆದಿ । ಟ್ಟರೊ ಪೇಳುವದೆನಗೆ ॥೪॥

ರಾಗ ॥ ಕಾಂಬೋದಿ ॥ ಝಂಪೆತಾಳ

ಯೆಂದು ಹೈಡಿಂಬಿತಾ । ಮುಂದ್ವರಿಯಲೆಂದರೆಲೊ । ಮಂದಮತಿ ನೀಕಪಟದಿಂದ ॥ ಬಂದೆಮ್ಮಹಯವ ಕಳ । ವಿಂದಲೊಯ್ದಿಹೆ ನಿನ್ನ । ನಿಂದುಳು ಹೆವೆಂದೆಚ್ಚ ರಾಗ ॥೧॥ ಪೊಡೆದ ಶರಗಡಣವನು । ಕಡಿದೊಡನೆ ಕೂರಸಿಯ । ಪಿಡಿದು ಬಹುಭಟರುಗಳ ಸದೆದು ॥ ಎಡಗೈಯ ಹಯವ ನಳ । ವಡಿಸಿ ಬಂದನಿಲಸುತ । ನಡಿಗೊಪ್ಪಿಸಿದನು ಕೇಳಿತ್ತ ॥೨॥ ಹರಿಯ ಕಾಹಿನ ಚರರು । ತರಹರಿಸಿ ಮನದಿ ಪರಿ । ಪರಿಯ ಭಂಗದಿನೊಂದು ಬಳಿಕ । ದೊರೆ ಯೌವನಾಶ್ವಗಿದ । ನರುಹುವೆವೆನುತ್ತ ಬಂ । ದರು ಪಟ್ಟಣಕ್ಕೆ ದುಃಖಿಸುತ ॥೩॥

॥ ಭಾಮಿನಿ ॥

ಇತ್ತ ಭದ್ರಾವತಿ ಮರದಿ ವರ । ಧಾತ್ರಿ ಪತಿಯಹ ಯೌವನಾಶ್ವನು। ಅತ್ಯಧಿಕ ವೈಭವದಿ ಸಂತಸದೊಳಗಿರುವ ಸಮಯ ॥ ಮತ್ತೆ ನಡನಡುಗುತ್ತ ಬಂದು ಚ । ರರ್ತವಕದಿಂ ಗೋಳಿಡುತಮಣಿ । ಯುತ್ತ ಬಿನ್ನೈಸಿದರು ನಡೆದಿಹ ಪರಿಯ ನರಸಂಗೆ ॥೧॥

ರಾಗ ॥ ॥ ಅಷ್ಟತಾಳ

ಲಾಲಿಸಿ ಕೇಳೊಡೆಯ । ನಾವೆಂಬುದ । ಏಳು ಸಂಗರಕೆ ಜೀಯ ॥ ಪೇಳಲೇ ನರಿಗಳ । ಧಾಳಿಯಾಗಿದೆ ಬಂದು । ಗಾಳಿಯಂದದೊಳಿಂದು । ಖೂಳನೋರ್ವನು ನಿಂದು ॥೧॥ ಅವನಿಪನೀ ಮೋಹದಿ । ಪಾಲಿಪತುರ। ಗವನು ನೀರ್ಗುಡಿಸಲ್ಕೈದಿ ॥ ಬವರವಾಗಿಹುದುದಾ । ನವಗೆ ಸೋತೆವು ನಾವು । ಕವಿಸಿಮಾಯವನು ಹ । ಯವನೊಯ್ದ ನಿಮಿಷದಿ ॥೨॥

|| ಭಾಮಿನಿ ||

ಭೃತ್ಯರೆಂದುದ ಕೇಳಿ ಮನದಲಿ । ಪೃಥ್ವಿಪಗೆ ರೋಷಾಗ್ನಿ ಧಗಧಗಿ। ಸುತ್ತ ಬರೆಕೊನೆ ಮೀಸೆಯಲುಗಿಸು ತೌಡನೊಡಗಚ್ಚಿ || ಮತ್ತೆ ಖಡ್ಗವ ಜಡಿದು ಹೂಂಕರಿ । ಸುತ್ತ ಪೊಸತಿದು ಬಂತೆನುತಸಚಿ । ವೋತ್ತಮರ ಕರೆಸುತ್ತ ತಾನಿಂತೆಂದನಾಕ್ಷಣದಿ ||೧||

ರಾಗ || ಸೌರಾಷ್ಟ್ರ || ತ್ರಿವುಡೆತಾಳ

ಏನಿದಚ್ಚರಿ ಪೊಸತಿದಹನ । ಮ್ಮೊ ನಗರ ಕೈತಂದನಾವನು । ಕಾಣದಂದದೊಳೆಯ್ದನಶ್ವವ । ಹೀನ ಬಲನು ||೧|| ಹುಲುಭಟನ ಕಲಹದಲಿ ಸೋತರು । ನೆಲನಧಿಪರೆನುತಾಡಿ ನಗುವರು । ಫಲವಿಹುದೆ ನಾವ್ ಕ್ಷತ್ರಿಯರ ಕುಲ । ದೊಳಗೆ ಜನಿಸಿ ||೨|| ತುಂಬಿಮರಿ ಸಂಪಿಗೆಯ ಸೌರಭ। ಕಂಬಯಸಿ ಬಂದುದಿದು ನಾನೇ । ನೆಂಚೆಪರಿಕಿಸ ಬೇಹುದವನಾ। ಡಂಬರವನು ||೩|| ಹರವಿರಿಂಚಿ ಬಲಾರಿ ಮುಖ್ಯರ। ಮರೆಯ ಹೊಕ್ಕರು ಬಿಡೆನು ಖೂಳನ । ತರಿದು ಶೈಮಿನಿ ಗಟ್ಟುವೆನುನಾ । ನರೆನಿಮಿಷದಿ ||೪|| ವೀರ ಕುವರಸುವೇಗತ್ವರಿತದಿ । ನೀರಣಾಗ್ರಕೆ ಪೊರಡೆನು ತಲಾ । ಧಾರಿಣೀಪತಿ ಹೊಯ್ಸಿ ದುಂದುಭಿ । ಭೇರಿಗಳನು ||೫||

|| ಭಾಮಿನಿ ||

ಧುರಕೆ ಪೊರಡಿಸಿ ಸರ್ವಸೇನೆಯ । ಕರಿತುರಗ ರಥಸಹಿತಲಾ ಕ್ಷಣ । ಪರಿಕಿಸುವೆ ಹಯಚೋರನಾತನ ತೋರ್ಪುದೆಂದೆನುತ । ಭರದಿಧನುಶರ ವಿಡಿದು ರಥದೊಳು । ಬರಲು ಕಂಡಾ ಕರ್ಣಸುತ ಬಿ। ಲ್ಲಿರುವ ನೊದರಿಸಿ ಸಮರಕನುವಾಗಲ್ಕೆ ನೃಪನುಡಿದ ||೧||

ರಾಗ || ಭೈರವಿ || ಅಷ್ಟತಾಳ

ಧುರಕೆ ಬಂದಿದಿರಾಗಿರ್ಪೆ । ನೀನಾರೆಲೊ । ತರಳ ರಂದದಲಿ ತೋರ್ಪೆ|| ತರವಲ್ಲನಿನಗೆ ಸಂ ।ಗರ ಬೇಡಸಾರಿದೆ । ತುರಗ ಬಿಟ್ಟಿತ್ತ ಸಾರು ||೧|| ಸೆಣಸಲಾರಾದಡೇನು । ಬಿಡುವನಲ್ಲ । ಕರಿ ಹಿರಿದಾದಡೇನು|| ಮರಿ ಸಿಂಹ ವಂಜಿ ಹಿಂ । ಜರಿಯುವುದೇ ನಿನ್ನ । ಪರಿಕಿಸಿ ಬೆದರುವೆನೆ ||೨|| ಅನುವರಕೆನ್ನೊಡನೆ । ನಿಲ್ಲುವ ಭಟ ।ರನು ಜಗದೊಳಗೆ ಕಾಣೆ||

ವಿನಯದಿ ಶಿಶು ವೆಂದ ।ಡಿ ನಿತುಗರ್ವವೆಯೆಂದು । ಜನ ಪಶರವನೆಚ್ಚನು ॥೩॥ ತರಿದು ಶರೌಘವನು । ಭೂಪನ ರಥ । ತುರಗ ಸಾರಥಿಗಳನು॥ ಭರದಿ ಕೆಡಹೆ ಪೊಸರಥ ವೇರುತಸ್ತ್ರವ ।ಸುರಿಸೆ ಕರ್ಣಜ ಖಂಡಿಸೆ ॥೪॥

॥ ವಾರ್ಧಿಕ್ಯ ॥

ಜನಪಾಲ ಬಳಿಕ ಕಲಿಕರ್ಣಜನ ಮೇಲೆ ಮಹ । ಮುನಿಸಿನಿಂದನ ಲಾಸ್ತ್ರವೆಸೆಯೆ ಮರುಣಾಸ್ತ್ರದಿಂ ॥ ತಣಿಸಲುರಗ ಕಳಂಬ ವೆಚ್ಚಡದ ತರಿದ ಗರುಡ ಕಳಂಬದಿಂತ್ವರಿತದಿಂ ॥ಕ್ಷಣದಿ ತಿಮಿರವ ಮುಸುಕೆ ದಿನಪನಿಂ ಪರಿಹರಿಸೆ। ಘನಶರವ ನೆಸೆಯಲದ ನನಿಲನಿಂ ಚದರಿಸುತ । ಧನುವ ಝೇಂಕರಿಸುತಿಹರವಿ ಮೊಮ್ಮನಂ ಕಂಡು ಕ್ಷಿತಿ ಪಗರ್ಜಿಸುತೆಂದನು ॥೧॥

ರಾಗ ॥ ಕಾಂಭೋದಿ ॥ ಝಂಪೆತಾಳ

ಪೂತುರೇತರುಣ ಮಂತ್ರಾಸ್ತ್ರ ಪ್ರತೀಕಾರ । ಚಾತುರ್ಯ ಮುಂಟೆಲಾ ನಿನಗೆ ॥ ಆತುರವಿದೇಕೆ ತವ । ತಾತ ಮುತ್ತಾತರ್ಯಾ ।ರೈತಿಳುಹು ಮೆಚ್ಚಿದೆನು ಕೊನೆಗೆ ॥೧॥ ಶರಮುಖದಿ ಕಾಣಲಿಲ್ಲವೆ ಕರ್ಣ ಕಮಲ ಹಿತ ।ಕರರವರ ನಾನುಸುರಬಹುದೆ ॥ ಧುರದಿ ಪಿತ ಮುತ್ತಯ್ಯರನು ಕೇಳ್ವೆ ಪ್ರಾಜ್ಞನೀ । ನರಿತು ಕೊಪರೋಕ್ಷದಿಂ ಮುಂದೆ ॥೨॥ ಭಾಪುರೇ ಬಾಲಕ ಪ್ರ ।ತಾಪಿ ನೀನಪ್ಪೆಲೇ । ಸೀ ಪ್ರಕಾರದ ಶರಾವಳಿಯ ॥ ನೀ ಪ್ರಯೋಗಿಸಲು ದಿಟ । ವೈಪರೀಕ್ಷಿಸೆನುತ್ತ । ಭೂಪತೆಗದೆಚ್ಚ ಕೂರ್ಗಣೆಯ ॥೩॥ ಸಾಕಾಗದೀಶರಂ । ನಾಕಡಿದೆನದ ನೋಡು । ನೂ ಕಸ್ತ್ರನಿ ಕರವನು ಭರದಿ । ಯಿೂ ಕಠಿಣ ಕಣೆಯ ಕೊಳ್ಳೆಂದೆಚ್ಚಡಾಕ್ಷಣದಿ । ಭೂಕಾಂತ ಮೂರ್ಛೆಯಂ ತಳೆದ ॥೪॥

॥ ಭಾಮಿನಿ ॥

ಧರಣಿಪತಿ ಮೂರ್ಛೆಯೊಳಿರಲು ಕಂ ।ಡರಿ ನಿವಹ ಮುಸುಕಲು ವೃಷಧ್ವಜ ॥ ತರಿತರಿದು ತಾನೊಟ್ಟಿ ನಿಂದಿರೆ ಬಸವಳಿದ ನೃಪನ ॥ ಪರಿಕಿಸುತ ರಥವಿಳಿದು ಧನುಶರ। ವಿರಿಸು ತವನೆಡೆಗೈದಿ ತಾನು ಪ । ಚರಿಸಿ ನುಡಿಯಲು ನುಡಿಯದಿರಲಿಂತೆಂದ ತನ್ನೊಳಗೆ ॥೧॥

ರಾಗ ||ಕೇತಾರ ಗೌಳ || ಅಷ್ಟತಾಳ

ಅರಸ ನೇಳನಿದ್ಯಾಕೆ । ಧುರಪರಿಶ್ರಮದಿಂದ । ಧರೆಯೊಳಗೊರ ಗಿರುವ || ವಿರಚಿಸಿದೆನು ಮೂರ್ಛೆ । ಪರಿಹಾರ ವಪ್ಪಂತೆ। ಪರಿಪರಿಯುಪ ಚಾರವ ||೧|| ಸತ್ಯವದೆನಗಿರ್ದೊಡಾಂ ಧೀರನಾದ ಡಾ ।ದಿತ್ಯಂಗೆ ಪೌತ್ರ ನಾಗಿ || ಮತ್ತೆನ್ನತಾತಂಗ ಪತ್ಯತಾನಾದೊಡೀ । ಧಾತ್ರೀಶನೇಳಲೆಂದ ||೨|| ಚಿತ್ತದಿ ಪಗೆಮಾಳ್ಪ । ಕೃತ್ಯವ ಬಿಟ್ಟು ಬ ।ಳಲ್ಕೆ ಗೌಚಿತ್ಯಮಾದ || ಉತ್ತಮ ರೀತಿಯಿಂ । ದಪ್ಪಂತೆ ಸಂತೈಸೆ । ಪೃಥ್ವಿಪಾಲಕನನಂದು ||೩||

||ವಾರ್ಧಿಕ್ಯ ||

ಪೊಡವಿಪತಿ ಬಳಿಕ ಕಣ್ದೆರೆದು ಮೈಮುರಿದೆದ್ದು । ಎಡಬಲವ ನೋಡುತಂ ಚೇತರಿಸು ತಿರ್ಪಡೆಯೊ ।ಳೊಡನೆ ಕಾರ್ಣಾತ್ಮಜಂ ಮುನ್ನತಾನಿರ್ದ ಪ್ರದೇಶ ಕೈತಂದು ನಿಂದು|| ಎಡಗೈಯ ಕಾರ್ಮುಕ ವನೊದರಿಸುತ ಬಾಣ ಮಂ ।ಪಿಡಿದು ತಿರುವುತ್ತಲಾರ್ದೆಸೆವ ತೆರದಿಂದ ಗುಡು । ಗುಡಿಸುತಿರೆ ನೃಪನಿತ್ತ ತನ್ನವರ ಕಾಣದಿಂತೆಂದ ಮನನಾಚು ತಂದು ||೧||

ರಾಗ ||ಸಾಂಗತ್ಯ || ರೂಪಕತಾಳ

ಸಾಕಿನ್ನುಧುರದ ಹಂಬಲವೆನಗೇಕೆ ಮ ।ತ್ತೀ ಕುಮಾರನೊಳು ಪೌರುಷವು || ಸೋಕಲರಿಯದೆನ್ನ ।ಲೋಕದಿ ಜೈಸಿದ । ರಂಕಾಣೆ ನಿಂದಿನ ವರೆಗೆ ||೧|| ಜನಿಸಿ ಕ್ಷತ್ರಿಯರೊಳು । ರಣಕೆ ಹಿಮ್ಮೆಟ್ಟಲು । ಘನವಾದ ಕೊರತೆಯಾದ ಪುದುಧನುವೆತ್ತಲೆಂತುಯಿ । ನ್ನನುವರ ಗೊಡಲೆಂತು । ಯೆನಗೀತನೊಳು ಸಾಧ್ಯಾವಹುದೆ ||೨|| ಕಂದನೀತನು ಗುಣ । ವೃಂದನಾಗಿಹ ತೇಜ ।ದಿಂದೊಪ್ಪುತಿಹ ರವಿಯಂತೆ || ಮುಂದೀತ ನೊಳು ವೈರ ||ವೆಂದಿಗು ಸಲದೆನು । ತಂದು ವೃಷಧ್ವಜಗೆಂದ ||೩||

ರಾಗ ||ರೇಗುಪ್ತಿ || ತ್ರಿವುಡೆತಾಳ

ಭಳಿರೆ ಮೆಚ್ಚಿದೆನು ವೀರ । ಕರಚಮತ್ಕಾರ । ಗಳಿಗಾಹ ಸರಳ ಸಾರ || ಬಲುಭುಜ ಸತ್ವಕಿ । ನ್ನಿಳೆಯೊಳೆಣೆಯಗಾಣೆ । ಕಲಹದೊಳೆನ್ನನು।

ಗೆಲಿದ ಕಾರಣದಿಂದ ॥೧॥ ಪೆಸರದೇನುಸುರೆನ್ನೊಳು । ತಾತನಾದಾವ । ವಸುಧೇ ಶರಿರ್ಷನೊಳು ॥ ಪುಸಿಯಲ್ಲ ತವಶೀಲ । ಕೆಸೆವ ವಿಕ್ರಮಗಳ। ಪಸರಿಸಿ ಲೋಕದಿ । ಜಸವ ಪಡೆವಬಾಲ ॥೨॥ ಧರೆಯೊಳಗತಿ ಖ್ಯಾತಿಯ। ಪೊಂದಿಹಚೆಲ್ವ ।ತುರಗವೇತಕೆ ಪೇಳಯ್ಯ ।ಭರಿತ ಸಾಹಸಿನಿನ್ನೊ ।ಅರಿ ಯದೆ ಹಳಚಿದೆ । ಮರೆದುಗೈದಿಹ ತಪ್ಪ । ನಿರದೆ ಕ್ಷಮಿಸುಕ್ಷಿಪ್ರ ॥೩॥

ರಾಗ ॥ ॥ ಅಷ್ಟತಾಳ

ಧರಣೀಶ ಕೇಳನ್ನ ನುಡಿಯ । ಸರ। ಸಿರುಹ ಬಾಂಧವ ದಿನ ಮಣಿಯ ॥ ತರಳನು ಕರ್ಣನಾತನನು ಕೇಳ್ದರಿವೆಯ ॥ ಧುರಪರಾಕ್ರಮಿಯ ವನನಿಜಸುತ । ವರ ವೃಷಧ್ವಜನಹೆನು ಲೋಕದಿ ॥೧॥ ಭರತವಂಶಜ ಧರ್ಮ ಸುತನು । ಮಖ । ವಿರಚಿಪನದಕೆ ಶ್ರೀ ವರನು । ಮರುತನಂದನನ ಈ । ಹರಿಗೆಂದು ಕಳುಹಲು ॥ ಹರುಷದಿಂದವನೊಡನೆ ಬಂದಿಹೆ । ಸರಸವಲ್ಲಿದು ಹದನ ವಿನಿತೈ ॥೨॥

ರಾಗ ॥ ॥ ಏಕತಾಳ

ದಿನಪತಿ ಮೊಮ್ಮಮು ।ನ್ನೆನಗರುಹಿಸದಾದೆ ಮನವಿಟ್ಟನೇ ಧರ್ಮ । ಜನು ಘನ ಮಖಕೆ ॥ ಜನರು ಧರ್ಮದ ರೂಪ । ನೆನು ವರವನನಿನ್ನು । ಜನಪಗೆ ಹಯವಿದೊಂ ।ದನು ನೀನೊಯ್ಯುವುದೆ ॥೧॥ ಇಂದಿರೆಯರ ಸನಪದಕೆ ಸರ್ವಸ್ವವ । ತಂದೊಪ್ಪಿಸುವೆ ನಾನೆ । ಬಂಧುಗಳೊಡನೆ ॥ಸಂದೇಹ ಬಿಡುವಾಯು । ನಂದನನೆಲ್ಲಿಹ । ನೆಂದರೆ ವೃಷಕೇತ । ನಂದು ಪೇಳಿದನು ॥೨॥

॥ವಾರ್ಧಿಕ್ಯ ॥

ಧರಣಿಪತಿ ಕೇಳಚ್ಯುತನ ಪದಕೆ ಮನವಿಟ್ಟು । ಸರ್ವಸ್ವಮೊಪ್ಪಿಸುವ ನಾವನವಗಾ ಪಾಂಡು । ತರಳರೊಳಗೆರಡಿಲ್ಲವವರ ಸಖ್ಯವದಾಗೆ ಹರಿ ಯೊಲಿದ ನದರಿಂದ ನೀಂ ॥ ಮರುತ ಸುತನಂ ಕಾಂಬುದೊಳಿತೆನಲು ಸಮ್ಮತಿಸೆ । ತರಣಿ ಮೊಮ್ಮಂ ಸಹಿತರಥವಡರಿ ಭೀಮನಿಹ । ಪೊರೆಗಾಗಿ ಬರುತಿರೆ ವೃಷಧ್ವಜನ ಪೊಗಳಿ ಸುಮನಸರು ಸುಮಮಳೆಗರೆದರು॥೧॥

|| ಕಂದಪದ್ಯ ||

ಇತ್ತಲುಧುರಕೆನುತಲಿ ಖತಿ । ವೆತ್ತೈತರುವ ಸುವೇಗನ ಕಾಣುತ ಲಾಗಂ || ಚಿತ್ತದಿ ನಲಿವುತ ಮಾರುತಿ । ಸತ್ವದಿ ತಡೆಯಲ್ಕವ ಗರ್ಜಿಸು ತಿಂತೆಂದಂ ||೧||

ರಾಗ || ಮಾರವಿ || ಏಕತಾಳ

ಆರೆಲೊ ಹುಲುಭಟ । ಚೋರತನದಿ ಮಮ । ವಾರುಹವದ ನೊಯ್ದ || ಭೂರಿಪರಾಕ್ರಮಿ । ತೋರಾತನ ಶಿರ । ಹಾರಿಸುವೆನು ಕ್ಷಣದಿ ||೧|| ತೋರುವೆನ್ನೈ ಯಮ । ನೂರನು ನಡೆನಡೆ । ಸಾರ್ದೈತವ ಪುರಕೆ || ಸಾರವಹುದೆ ಸುಕು । ಮಾರನೆಧುರವಿದು । ಪೌರುಷವಿನಿತೇಕೆ ||೨|| ಧಿರುರೆ ತರಳತನ । ವಿರದು ಶರಕೆತವ । ಕೊರಳರಿದೀಕ್ಷಣದಿ || ಮರುಳುಗಣಂ ಗಳ । ನೆರವಿಗೆ ಹಬ್ಬವ । ವಿರಚಿಸುವೆನು ಭರದಿ ||೩|| ಇದಕೊ ಗದಾ ದಂ । ಡದ ಹತಿಯಂ ಗೊಂ । ಬದಕಿದು ಸುಮುಹೂರ್ತ|| ಮದಮುಖತನ ನಡೆ । ಯದು ಬುದ್ಧಿಯ ಕೇ । ಳದೆ ನಿಲುವೆಯಾ ಧೂರ್ತ ||೪|| ಕನಲಿಸುವೇಗನು । ಕಣೆಗಳನೆಚ್ಚಡೆ । ಗಣಿಸದೆ ಮರುತಜನು|| ಘನಗದೆ ಯಿಂ ಪ್ಪೊ । ದನು ನೃಪಸುತನನು । ಸೆಣಸಿದವರಿನ್ನು ||೫||

|| ವಾರ್ಧಿಕ್ಯ ||

ನರನಾಥ ಲಾಲಿಸೀತೆರದಿ ಪವನಜಸು ವೇ । ಗರು ಕಾದಿ ಜರೆದಾಡು ತಿರೆ ಕಂಡು ವೃಷಕೇತ । ವರಯೌವನಾಶ್ವಂಗೆ ಹರುಷದಿಂ ತೋರಿದಂ ಧರಣೀಶ ನೋಡು ನಿನ್ನ || ತರಳನೊಡನುಗ್ರದಿಂದಲಿ ಕಾಳಗದೊಳಿರ್ಪ। ವರಸುಧಾಕರವಂಶಶರಧಿಶಶಿಯೆನಿಪ ಭೂ । ವರ ಯಮಜನನುಜಸುಗು ಣೋದ್ದಾಮರಣ ಭೀಮ ಭೀಮನೀತನೆಯೆಂದನು ||೧||

ರಾಗ || ಮಧ್ಯಮಾವತಿ || ಏಕತಾಳ

ತರಣಿಪೌತ್ರನಮಾತಿಗಿಳಿದು ರಥವನು । ಧರಣಿಪಸುತನೆಡೆಗೈದಿ ಪೇಳಿದನು || ಹರಿತಾನಟ್ಟಿದನಿವರನು ಮಖಹಯಕೆ । ಧುರಬೇಡ ಬಿಡು ಸಾಕು ರೋಷವಿನ್ನೇಕೆ ||೧|| ಇಂದಿರೆಯರಸಗೆಮ್ಮಯ ಸರ್ವಸ್ವವನು ।

ಚಂದದೊಳೊಪ್ಪಿಸೆ ಕಂದ ಕೇಳಿನ್ನು ॥ ಸಂದೇಹವಿಲ್ಲೆನುತನಿಲಜಗಂದು । ವಂದಿಸೆ ವೃಷಕೇತನೆಂದನು ಬಂದು ॥೨॥

ರಾಗ ॥ ಸುರುಟ ॥ ಏಕತಾಳ

ಲಾಲಿಪುದೆಲೆ ತಾತಾ । ಸದ್ಗುಣ । ಲೋಲಪ ವನಜಾತ ॥ ಪಾಲಿಸೆ ನುತತವ । ಕಾಲಿಗೆ ತನ್ನಯ । ಮೌಳಿಯ ಚಾಚಿಹ । ಭೂಲೋಲನಪರಿ ॥೧॥ ನೀ ಮೊದಲೆನಗೊಲಿದು । ತೋರಿದ । ಸೀಮೆಯಧಿಪನಿಂದು ॥ ಕಾಮಪಿತನ ಕಾಂ । ಬಾಮನವಿಟ್ಟಿಹ । ಪ್ರೇಮದ ಸುತನಿವ । ನೈ ಮನ್ನಿಸುನೀ ॥೨॥ ತರಳನ ನುಡಿಕೇಳಿ । ಮತ್ತಾ । ಮರುತಜ ಮುದತಾಳಿ ॥ ಧರೆಯಧಿಪ ನನುಪ । ಚರಿಸುತ ನಗೆಹಲು। ಸರಸದೊಳಾನೃಪ । ವರನಿಂತೆದನು ॥೩॥

ರಾಗ ॥ ಬೇಗಡೆ ॥ ಏಕತಾಳ

ಮರುತಸಂಭವ ಕೇಳು ಪೇಳುವೆನು । ಧುಧೀರರನು ಕಂ । ಡರಿವೆ ನಿಳೆಯೊಗಾನುಹಲಬರನು ॥ ಧರೆಯೊಳಗೆ ಮೈಮರೆದಿಹರ ತಾ । ವಿರಿವರಲ್ಲದೆನೊಂದರೆನುತಲಿ । ಪೊರೆವವರ ನಾ ಕಾಣೆ ತ್ರಿಜಗದಿ । ಕರುಣೆಯಹ ವೃಷಕೇತನಲ್ಲದೆ ॥೧॥ ವರಚತುರ್ದಶಭುವನವನು ಪೊರೆವ। ಗರ್ವಾತ್ಮ ಲಕ್ಷ್ಮೀ । ವರನು ನಿಮ್ಮಯ ಸೇವೆಯನು ಗೈವ ॥ ಚರನು ಗಡಯಿನಿ । ತಿರಲು ನಾನೇ । ಸರ ಪರಾಕ್ರಮಿಯೆನುತ ಸಮರವ ವಿರಚಿಸುತ ವಾಜಿಯನು ಪಿಡಿದಿರಿ । ಬರಿದೆ ದಾರಿಯತಪ್ಪಿದಿರಿ ಸರಿ ॥೨॥ ಶ್ರೀವರನ ಭಕತರಿಗೆ ಕೊಡದಿಹೆನೆ । ನಾನದರೊಳೆನ್ನಯ । ಜೀವವುಳಿಸಿದನೀ ವೃಷಧ್ವಜನೆ ॥ ಕಾವುದಲ್ಲದ ಕಾಯದೊಡೆ ಹಾ । ಹಾ ವೃಥಕೃತಮಾಗಿ ಜನ್ಮವ । ದೀ ವಿಧದಿ ಪೋಗುತ್ತಲಿರ್ದುದು । ಪಾವನನ ಕಾಣದೆ ಸುಯೋಗವು ॥೩॥

॥ ಭಾಮಿನಿ ॥

ಎಲೆ ವೃಕೋದರ ಕೇಳು ನಿಮ್ಮೊಳ । ಗೊಲಿದು ನರಲೀಲೆಯನು ನಟಿಪ ಶ್ರೀ । ಲಲನೆಯರಸನ ಕಂಡಪೆನಲಾನಿನ್ನು ನೀವೆನಗೆ ॥ ತಿಳಿದೆಸಗಿದು ಪಕಾರವಿದು ಯೆನ । ಗೊಳಿತು ಬಹೆ ನಿಮ್ಮೊಡನೆ ಸರ್ವವ । ಬಳಿಕ ಗಂಗಾ ಪಿತನ ಪದಕರ್ಪಿಸುವೆನಾನೆಂದ ॥೧॥

ರಾಗ ॥ ॥ ಅಷ್ಟತಾಳ

ಯೆನೆವೃಕೋದರನೆಂದನವಗೆ । ಕೇಳು । ಜನಪಯಿೂವರೆಗೆಮ್ಮ ಗ್ರಜಗೆ ॥ ಅನುಜರು ನಾಲ್ವರಾ । ವೆನುತಿರ್ದೆವಿನ್ನು ನಿ । ನ್ನನುಸಹಿತ್ಯೆವರೆಂ । ದೆನುತ ಭಾವಿಸುವೆವು ॥೧॥ ಹರಿಯ ದರ್ಶನವಿದರಿಂದ । ಸಾಧ್ಯ। ವಿರದೆ ಧರ್ಮಜಗ್ಯೆವಮಖದ ॥ ವರ ಕರ್ತೃವಸುರಾರಿ । ವಿರಚಿಸುವನು ನಿಂದು । ಸಿರಿಮುಕುಂದನ ಕಾಂಬಾ । ತುರವಿರೆಬಹುದಯ್ಯಾ ॥೨॥

॥ ವಾರ್ಧಿಕ್ಯ ॥

ಮರುತಸುತ ಕೇಳು ಮಮಪುರಕೆ ಚಿತ್ತೈಸು ನಾ । ವಿರಚಿಸುವ ಸೇವೆಯಂ ಕೈಗೊಂಡಬಳಿಕ ಪರಿ । ಪರಿವಸ್ತುಬಲಸಹಿತ ಬಹೆನು ನಿನ್ನೊಡನೆನಲ್ಯೊಪ್ಪಿದಂ ಕಲಿಭೀಮನು ॥ ಅರಸನವದಿರರಥದಿ ಕರೆದೊಯ್ದು ತ್ಯೈದಿನಂ । ಪುರವರದಿನಿಲಿಸುತುಪಚರಿಸಿ ರಾಜ್ಯದ ಭಾರ । ಪೊರಿಸಿ ಮಂತ್ರಿ ಯೊಳಿತ್ತು ತೆಗಸಿ ಭಂಡಾರದಿಂದಖಿಳಧನಕನಕಗಳನು ॥೧॥

॥ ಭಾಮಿನಿ ॥

ಸತಿಪ್ರಭಾವತಿಯೊಡನೆ ಬಾಂಧವ । ತತಿ ಸಹೋದರಸುತಸಹಿತಲಗ । ಣಿತ ವಧೂಜಾಲವನು ಕರೆಸುತ ಜನನಿಯಂ ಕೂಡಿ ॥ ಕ್ಷಿತಪ ಪೊರಮಡು ತಿರಲು ಪವನನ । ಸುತನವರ ಪಿಂದಿಕ್ಕಿಬಂದತಿ । ಹಿತದೊಳಣ್ಣಗೆ ಮಣಿಯು ಲವ ಬಿಗಿದಪ್ಪುತಿಂತೆಂದ ॥೧॥

ರಾಗ ॥ ॥ ತ್ರಿವುಡೆತಾಳ

ಬಂದೆಯ ಭೀಮ ನೀನು । ಪೋಗಿಹ ಕಾರ್ಯ । ದಂದವನರುಹಿಸಿನ್ನು ॥ ತಂದೆಯ ಹಯವದ । ನಿಂದು ಸಾಹಸದಿಂದ । ಬಂದರೆ ಹೈಡಿಂಬಿ । ಕಂದಕರ್ಣಜ ಸಹ ॥೧॥

ರಾಗ ॥ ॥ ಝಂಪೆತಾಳ

ಲಾಲಿಸೆನ್ನಯ ಬಿನ್ನಪವನಣ್ಣದೇವ ॥ ಭೂಲೋಲರನ್ನ ನಡೆದಿಹ ಕಥನದಿರವ ॥ಪಲ್ಲ॥ ಒಡೆಯ ನಿನ್ನಾಜ್ಞೆಯಿಂ । ನಡೆದು ಭದ್ರಾವತಿಯೊ। ಳೊಡನೆ ಹೈಡಿಂಬಿ ತಡೆ । ಗಡಿದು ರಿಪುಭಟರ ॥ ಪಿಡಿದೆನ್ನವಶಕಿತ್ತ । ಕಡು ಚೆಲ್ವ ಹಯವನದ । ನುಡಿಯಲೇನರಿಗಳನು । ಬಡಿದೆನಾಹವದಿ

||೧|| ಅರಿತು ಮತ್ತಾಪುರದ |ಧರಣಿಪತಿ ಕರ್ಣಜನ | ಧುರದಿ ಕೈಸೋತನಂ| ತರದಿ ಸಂಧಿಯನು || ವಿರಚಿಸಿದನೆಮ್ಮೊಡನೆ | ತುರಗ ಕಪ್ಪವು ಸಹಿತ| ಬರುವನಾತನು ನಮ್ಮ | ತರಳನೊಡನೆಂದ ||೨||

ರಾಗ || ಭೈರವಿ || ತ್ರಿವುಡೆತಾಳ

ಮಾರುತಿಯು ತಾನಲ್ಲಿ ನಡೆದಿಹ | ವಾರತೆಯ ಪೇಳಿತಿರೆ ಬಂದಾ| ಚಾರನೋರ್ವನು ನುಡಿದ ಪುರದೆಡೆ | ಭೂರಮಣನವನೈದಿ ಬಂದಿಹ | ಭೂರಿವಸ್ತುಗಳೊಡನೆ ನಿಜಪರಿ | ವಾರವಿಹುದೆನಲವನಿಗುಚಿತವ |ನಾರಿ ಸುತ ತೆಗದಿತ್ತು ಬಳಿಕ ಮ |ಹೀರಮಣನಿದಿರ್ಗೊಳುವ ಮನದೊಳು || ದಾರಗುಣನು | ಪೊರಟ ಶೃಂ |ಗಾರಯುತನು ||೧|| ಪುರವ ಶೃಂಗರಿ ಸಲ್ಕರುಹಿ ಸೋ |ದರರು ಮಂತ್ರಿಚಮೂಪ ಸಾಮಂ |ತರು ಪುರೋಹಿತ ಭಟರ ಗಡಣದಿ | ಸರಸಿಜಾಕ್ಷನ ಸಹಿತ ಘೋಷದಿ || ಮೆರೆವ ಕನ್ನಡಿ ಕಲಶವಿಡಿದಿಹ | ತರುಣಿಯರಕೂಡುತ್ತ ರಾಜಿಪ | ಕರಿಯಮೇಲಡರುತ್ತ ಸರಸದೊ |ಳರಸಿ ದ್ರುಪದಜೆಯೊಡನೆ ಬಂದನು || ಧರ್ಮರಾಯ | ವರ್ಣಿಸ |ಲರಿದುಪರಿಯ ||೨|| ಅರಸನಂ ವರ ಯೌವನಾಶ್ವನು | ಪರಿಕಿ ಸುತಲಡಿಗೆರಗಿ ತಂದಿಹ | ತುರಗ ಕಪ್ಪವಸಹಿತ ಕಾಣಿಕೆ |ಯಿರಿಸಲಾತನ ನಪ್ಪಿ ಧರ್ಮಜ || ಪಿರಿದು ಮನ್ನಿಸುತೆನ್ನ ತಮ್ಮಂ |ದ್ಯರಿಗೆ ನೀಸರಿಯಪ್ಪೆ ಯದರಿಂ | ಸಿರಿಯರಸನಹ ಯಾದವೇಂದ್ರನ | ಚರಣಕಭಿನಮಿ ಸೆನುತ ತೋರಿಸೆ || ಹರಿಯನಂದು |ಸದ್ಗುಣ | ಭರಿತನೊಲಿದು ||೩||

|| ವಾರ್ಧಿಕ್ಯ ||

ಭೂವದೂರಮಣನಹ ಯೌವನಾಶ್ವಕನು ಮತ್ತಾವನ ಸುಲೀಲಾ ವಿನೋದ ಮಾತ್ರದೊಳು ಭುವ | ನಾವಳಿಗಳಾಗಿ ಬಾಳ್ದಳಿವಾ ವಿಶ್ವಂಭರನ ನೀರದ ಶ್ಯಾಮನ || ಶ್ರೀವರನನವ ಮನೋಹರ ಮೂರ್ತಿಯಂ ಕಂಡು| ಭಾವಪುಳಕಿತನಾಗಿ ಹರುಷರಸ ವೊಸರೆ ಸ | ದ್ಭಾವದಿಂದಚ್ಯುತನ ಪದಕೆನೊಸಲಂಚಾಚಿ ಜಯವೆನುತನುತಿಗೈದನು ||೧||

ರಾಗ || ಧನ್ಯಾಸಿ || ಅಷ್ಟತಾಳ

ಜಯ ಜಯ ಜಯಕರುಣಾಕರ |ಜಗ | ನ್ಮಯ ಭವಭಯಹರ ಶ್ರೀಕರ || ಜಯ ಸಚ್ಚಿದಾನಂದ | ಜಯತು ಮುಕುಂದ ||೧|| ಆದಿಪುರುಷ ಶ್ರೀ ನಾರಾಯಣ |ಮಧು | ಸೂದನಕ್ಷೀರ ಸಾಗರ ಶಯನ || ವೇದೋದ್ಧರಣನೆರ |ಮಾಧವ ಮಹದೇವ ||೨|| ಪಾದಕಮಲದಿ ಶಿರವ

ಚಾಚಿ ದರಸನ ನಗೆಹು । ತಾದಯಾಂಬುಧಿ ಮನ್ನಿಸಲ್ಕಖಿಳರಂ ಕೂಡಿ । ಮೇದಿ ನಿಪಧರ್ಮಜಂ ಪುರಕೆ ಬಂದೆಲ್ಲರೊಡನಿರಲು ಪಕ್ಷದ್ವಯದೊಳು ॥ ಪೋದುದೀ ಚೈತ್ರಮಾಸಂ ಮುಂದೆ ಕರೆಸಿದೊಡೆ । ಯಾದವರ ಕಟಕ ಸಹ ಬಹೆನು ಮಖ ಹಯವ ಕೈ । ಗ್ಯಾದುಕೊಂಬುದೆನುತ್ತಲರುಹಿ ಹರಿ ಗಮಿಸಿದಂದ್ವಾರಕೆಗೆ ವಹಿಲದಿಂದ ॥೧॥

ರಾಗ ॥ ಸವ್ರಾ ॥ ಏಕತಾಳ

ವಸುಮತೀಶ ತಾ । ಬಿಸಜಾಕ್ಷನ ಕಳು । ಹಿಸಿದ ಚಿಂತೆಮನದೊಳು ಹೆಚ್ಚಿ ॥ ಬಸವಳಿದಿರಲಾ । ಋಷಿವ್ಯಾಸನು ಬರ । ಲೆಸೆವ ಗಜಪುರಕೆ ಮುದನಚ್ಚಿ ॥೧॥ ಮುನಿಕುಲದೀಪನ । ಜನಪತಿ ಮನ್ನಿಸ । ಲನಿತರೊಳಗೆ ಶೋಕದ ಪರಿಯ ॥ ಘನವಹ ನುಡಿಯಿಂ । ದಿನಿತೇನಾಯ್ತೆಂ । ದೆಣಿಸುತಲೆಂದನು ಬಹು ಧೈರ್ಯ ॥೨॥

ರಾಗ ॥ ಬೇಗಡೆ ॥ ಏಕತಾಳ

ಏನಿದೇನಿದು ಚೋದ್ಯವೈ ರಾಯ । ನೀನೀತೇರದಿ ದು । ಮ್ಮಾನ ತಾಳಿಹುದ್ಯಾಕೆ ಪೇಳಯ್ಯ ॥ ವಾಣಿವರನ ಸೃಷ್ಟಿಯೊಳು ನಿನ್ನ ಸ । ಮಾನ ದವನೀಪಾಲರನು ನಾ । ಕಾಣೆನೈದಿಟ ನಿನಗೆ ಬಂದೆಡ । ರೇನದಿನ್ನನು ಮಾನಿಸದೆ ನುಡಿ ॥೧॥ ಧೀರ ವಾಯುಕುಮಾರಕನ ನುಡಿಗೆ । ಕುಂದಾದುದೇ ಮೈ । ದೋರಲಿಲ್ಲವೆ ಮಾರಮಣ ನಿನಗೆ ॥ ಮೂರು ಲೋಕದ । ವೀರ ನರ ತ್ರಿಪು । ರಾರಿ ಸಮಬಲ । ಮಾರುತಜರಿರೆ । ವಾರುಹವನದ । ತಾರರೇ ಮನ । ವಾರೆ ನೆನೆದಡೆ । ಬಾರನೇ ಹರಿ ॥೨॥ ಸಾಕು ಬಿಡು ಮನೋವ್ಯಾಕುಲವ ನಿನ್ನ । ಸದ್ಧೈರ್ಯನಾಗಿರು । ಸೋಕದೆಡರಿನಿತೈ ಕೆಲಸ ಕಿನ್ನು ॥ ಲೋಕನಾಥನ ಕರುಣದಿಂ ಮೂ । ಲೋಕದೊಳು ನೀ ಗೈವಕಾರ್ಯಕೆ । ಬೇಕು ಬೇಡೆಂಬ ವರದಿಲ್ಲ ಗು । ಣಾಕರನೆ ತವ ಸತ್ಯ ಕಾಯ್ವುದು ॥೩॥

ರಾಗ ॥ ॥ ಅಷ್ಟತಾಳ

ಭಾವಿಸು ಋಷಿವರ ತವಪಾದ ದಯದಿ । ಪಾವನವಾಯ್ತೆನ್ನ ಜನ್ಮವೀಭವದಿ ॥ ಪಾವಮಾನಿಯು ಪೋಗಿ ಹಯವತಂದಿಹನು । ಮಾವರ ಕರುಣದಿ ತಾ ಮೈದೋರಿಹನು ॥೧॥ ಆ ಮಹಿಮನ ದಯೆಯಿಂದ ಕುಂದಿಲ್ಲ । ಆ ಮಹಾಧನತೋರೆ ನೀವ್ಬರಲಿಲ್ಲ ॥ ಕಾಮಜನಕ ತಾನೈದಿರುವನಿಲ್ಲಿಲ್ಲ । ನಾಮನ ಬೇಸರಿಸಿದೆನಿದಕೆಲ್ಲ ॥೨॥

॥ ವಾರ್ಧಿಕ್ಯ ॥

ಕರುಣಿಸ್ವೈ ಧನವ ಮತ್ತಾಮರುತ ನೃಪನ ಕಥೆ । ಯರುಹೆನಲು ಸಾಂಗದಿಂದುಸುರಿ ಮಖಶಾಲೆಯಂ । ವಿರಚಿಸುತ ಹಯವ ರಕ್ಷಿಸುವುದೆನೆ ಮುನಿಯಮತದಿಂ ಭೂಪ ನೆರಹಿಸುತಲಿ ॥ ಭರದಿ ಸೋದರರು ಋಷಿಸಹಿತ ಚತುರಂಗಬಲವೆರಸಿ ಹಿಮಗಿರಿಗೈದು ತರ್ಜಿಸುತ ಧನದನಂ । ಮೆರೆವ ಧನ ಕನಕಗಳ ಹೊರಿಸಿ ನಗರಕೆ ಬರಲು ಮುನಿಪನಾಶ್ರಮಕೆಸರಿದಂ॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ಧರಣಿಪತಿ ತಾಬಳಿಕ ಭೀಮನ । ಕರೆದುಸುರಿದನು ದ್ವಾರಕಿಗೆ ನೀ। ತೆರಳಿ ಲಕ್ಷ್ಮೀವರನ ಬೇಗದಿ ಕರೆದುತಹುದು ॥೧॥ ಎನೆ ಹಸಾದವೆನುತ್ತ ಮಾರುತ । ತನಯನಣ್ಣನಿಗೆರಗಿ ಪೊರಟೈ । ತರಲಿದಿರುಗೋಚರಿಸಲಕ್ಷಿಗೆ। ವನಧಿಯಂದು ॥೨॥

॥ ವಾರ್ಧಿಕ್ಯ ॥

ಭರಿತಮಾಗಿರ್ಪ ಬೆಳ್ನೊರೆಗಳಿಂ ತೆರೆಗಳಿಂ । ತಿರುತಿರುಗುತೇಳ್ವ ಬೊಬ್ಬುಳಿಗಳಿಂ ಸುಳಿಗಳಿಂ । ಭರದೊಳೆಳಕೊಂಬ ನಾನಾಪ್ರವಾಹಂಗಳಿಂ ಚರಿಪ ಜಲಚರಗಳಿಂದ ॥ ಮಿರುಪಶಂಖದ ವಿಮಲಸರಿಗಳಿಂ ಪರಿಪರಿಯ। ಮೆರೆವರತ್ನಂಗಳಿಂ ವಿವಿಧವಹಧ್ವನಿಗಳಿಂ । ದಿರದೆ ತುಂತುರಿನ ನೀರ್ವನಿಗಳಿಂ ಗಂಭೀರತನಗಳಿಂ ಕಡಲೆಸೆದುದು ॥೧॥

ರಾಗ ॥ ಕೇತಾರ ಗೌಳ ॥ ಅಷ್ಟತಾಳ

ಇನಿತೆಸೆವಬ್ಧಿಯಕಾಣುತ್ತ ಮಾರುತಿ । ಘನತರತೋಷದಲಿ ॥ ವನಜನಾಭನ ರಾಜಭವನನೊಳಪೊಕ್ಕು । ವಿನಯದಿ ಬಹವೇಳ್ವದಿ ॥೧॥ ನಿತ್ಯಸತ್ಯಪ್ತಸರ್ವೋತ್ತಮನಾಗಿಹ । ಚಿತ್ತಜಪಿತನು ತಾನು ॥ ಮರ್ತ್ಯಲೀಲೆಯ ನಾಂತು ಮಿತ್ರರೊಡನೆ ಮುದ । ವೆತ್ತು ಭುಂಜಿಸುತಿರ್ದನು ॥೨॥ ಜನನಿ ದೇವಕಿ ಯಶೋದೆಯರಿಕ್ಕಲದನನ ।ಲನ ಹವಿಫಲವಕೊಂಡು ॥ ಘನ ಸುಧೆಯನುಸಹಿತಮರರಿ ಗುಣಿಸಿದಾ । ತನು ಭೋಜನವಗೈದನು ॥೩॥

॥ ಭಾಮಿನಿ ॥

ಕದ್ದುಪಾಲ್ಬೆಣ್ಣೆಗಳನೆಲ್ಲವ । ಮೆದ್ದು ತುರುಗಾಯ್ದುವದನು ತ್ಯಜಿಸುತ। ಹೊದ್ದುತಾ ಪಾಂಡವರೊಳೆರಕದೊಳೆರಡೆಣಿಸದಿರುತ ॥ ಯಿದ್ದುದಾದುದು

ಭಾಗ್ಯಪಡೆದರು । ಮುದ್ದುಗೈದಪರೂಟದೆಡೆಯಲಿ । ಚೋದ್ಯಮೆಂದಳು ಸತ್ಯಭಾಮಾದೇವಿ ದೇವಕಿಗೆ ॥೧॥

ರಾಗ ॥ ತೋಡಿ ॥ ಆದಿತಾಳ

ಬರಿದೆ ಪೇಳಲೇಕೆ ನೀನೇ । ನರಿವೆಯೆಮ್ಮಬಂಧನವವನು । ಹರಿಸಿದಾತನೀತ ಜಗ ॥ ದ್ಗುರುವಾಗಿರುವವನು ॥ ಸುರರ ಪಾಲಿಸುವವನು ಕೃಷ್ಣ ನರನೆನುತ್ತ ಛೀಗಳೆವುದು । ಸರಿಯೆ ನಿನಗೆ ಪೊಗೆನುತ್ತ । ಲರುಹೆ ದೇವಕಿ ॥೧॥ ನಿಮ್ಮ ಬಂಧನವನು ಬಿಡಿಸಿ । ನೆಮ್ಮದಿಯನಿತ್ತವಗೆ ಬಂಧ । ನಂ ಮಗುಳ ದೇಕಾಯ್ತು ಸುರರ । ನೆಮ್ಮಿ ಸಲಹುವ ॥ ನಿಮ್ಮ ಗುರುವಿಗಾಯ್ತು ನರನ । ಚಂಮಟಿಗೆಯ ಕೆಲಸವೇಕೆ । ನಮ್ಮ ನಗಿಸದಿಹುದೆನುತ್ತ । ಭಾಮೆ ನುಡಿದಳು ॥೨॥

॥ ಭಾಮಿನಿ ॥

ಇಂತು ಭಾಮಾದೇವಕಿಯರಿರೆ । ಕಂತು ಪಿತನುತ್ತರವಗೊಡು ವೆಡೆ । ಕುಂತಿಸುತ ಬಂದಿಹುದನಿಂತು ದ್ವಾರದಿ ಹಾಸ್ಯಕನಿಲಜ । ನಂತಡೆವುದೊಳ ಬಿಡದೆ ನೀನೇನು । ತಂತರಾತ್ಮನು ಪೇಳಿದನು ಸೈರಂಧ್ರಿಯೊಳುನಗುತ ॥೧॥

ರಾಗ ॥ ಕೇತಾರಗೌಳ ॥ ಅಷ್ಟತಾಳ

ಬಂದಳು ಭರದಿ ಸೈ । ರಂಧ್ರಿಬಾಗಿಲೊಳು ತಾ । ನಿಂದ ನಿಲಜ ಗೊಂದಳೂ ॥ ಮುಂದೆ ಬಾರದಿರು ಗೋ । ವಿಂದಾರೋಗಣೆ । ಯಿಂದಿಹ ನೆನುತವಳು ॥೧॥

ರಾಗ ॥ ಕೇತಾರಗೌಳ ॥ ಝಂಪೆತಾಳ

ಆ ನುಡಿಯ ಕೇಳಿ ಭರದೀ । ಬಳಿಕ ಪವ । ಮಾನಸುತನತಿರೋಷದಿ॥ ತಾ ನೆನರಹರಿಯಾದನೂ । ಗರ್ಜಿಸುತ । ಲಾನಿತಂಬಿನಿಗೆಂದನೂ ॥೧॥

ರಾಗ ॥ ಮಾರವಿ ॥ ಏಕತಾಳ

ಆರಿಗೆ ಭೋಜನ ಸಮಯವು ನಗರದೊ । ಳಾರಿಲ್ಲವೆಜನರೂ ॥ ಮಾರಿಗೆ ತುತ್ತಾದರೊ ಮೌನವೊ ಯೆನ । ಗಾರು ತಡೆಸಿದವರು ॥೧॥ ಸುರಿಯದೆ ವರ್ಷವು ಬೆಳೆಯದೆ ಧಾನ್ಯಗ । ಳುರೆದುರ್ಭಿಕ್ಷಕರ ॥ ಕರವಿಡಿ

ದಿಹ ತರುಣಿಯರಿನಿಬರತಾ । ನರಿತುಬಿಡುವುದವರ ॥೨॥ ಗೊಲ್ಲರ ಮನೆಯನು ಪೊಗುತಲಿ ಪಾಲ್ಮೊಸ । ರೆಲ್ಲವ ಕದ್ದುಣ್ಣುವ ॥ ಖುಲ್ಲ ಗೋವಳನಿಗೆ ಧೊರೆತನವಾದಡೆ । ಬಲ್ಲನೆ ನೀತಿಯವ ॥೩॥ ಮಾವನ ಶಿರವನರಿದು ಮೊಲೆಗೊಟ್ಟಳ । ಜೀವವತೆಗೆದಧಮಾ ॥ ಭಾವನಮಿಗೆ ಸಂಭಾವಿಸುವನೆ ಜಗ । ತೀವಲಯದೊಳಮಮಾ ॥೪॥ ಜಲರುಹ ಭವಸುರಮುಖ್ಯರಸನ್ನುತಿ । ಗೊಳುವ ಪ್ರಭುತ್ವವನೂ ॥ ಕಳಗೊಂಡೀ ನರನಾದವನೆಮ್ಮಯ ನೆಲೆಯರಿವನೆ ತಾನೂ ॥೫॥

॥ ಭಾಮಿನಿ ॥

ಮಾನಭಂಗಿತನಾದೆ ನಿನ್ನೀ । ಮಾನಹೀನನ ಕಾಂಬುದೆನಗೆ ಸು । ಮಾನವಲ್ಲೆಂದೆನುತ ಮಾರುತಿ ಕನಲಿ ಮೊಗದಿರುಹೆ । ದಾನವಾಂತಕನರಿತು ಮನದಲಿ । ತಾ ನಗುತಕರದೊಳೆದು ಬರುತಲಿ । ದೇನು ತಡೆದವಳಾವಳೇತಕೆ ಕೋಪವೆನೆನುಡಿದ ॥೧॥

ರಾಗ ॥ ॥ ಮಟ್ಟೆತಾಳ

ಸಿಂಧುಶಯನೀ ಮುನಿದೆಡೆ । ಇಂದಿಗ್ರೀ ಬ್ರಹ್ಮಾಂಡ ನಿನಗ । ದೊಂದು ತುತ್ತಿನ್ನಿಹುದೆ ಬಾಯ್ಗೆ । ಬಂದೆನೋರ್ವನೇ ॥ ಮಾದರಾಧ್ರಿಧರನೆ ಕರುಣ। ದಿಂದಲೆನ್ನನುಳುಹು ಪೋಪೆ । ನಿಂದು ತಡೆಸಿದರಕ್ಷಣಕೆ । ಚಂದವ್ಯೆಸಲೇ॥೧॥

ರಾಗ ॥ ॥ ಏಕತಾಳ

ಎನೆ ಮುರಾರಿ ನಗುತೆ ನುಡಿದ । ಘನವಿಕ್ರಮಿಯೆ ಸೈರಿಸಹ ಹ। ಗುಣವಿಹೀನರಕಟ ನಿನ್ನ । ನಿನಿತು ತಡೆದರೇ ॥೧॥

ರಾಗ ॥ ॥ ಮಟ್ಟೆತಾಳ

ಸರಸಿಜಾಕ್ಷ ನಿನ್ನ ಕೂಡೆ । ನರನಸಲುಗೆಯೆನಗೆಯಿರುವುದೆ । ಪುರದ ದ್ವಾರದಲ್ಲಿ ಯೆನ್ನ । ಬರಿದೆ ತಡೆಸಿದೇ ॥ ಹರಿಯೆನೀನಿಲಿಸಲ್ಕ ದೇನು । ಕೊರತೆಯಪ್ಪುದೆನಗೆ ಭೂಪ । ನೊರೆದುದಲ್ಲವೆಂಬುದೇಕೆ । ಗರುವತನಂ ವದೂ ॥೧॥

॥ ವಾರ್ಧಿಕ್ಯ ॥

ಮರುತಸುತನಿಂತೆನಲು ಮುರಹರಂ ನಗುತವನ । ಸೆರಗಪಿಡಿದಿತ್ತ ಬಾರೆನುತ ಕುಳ್ಳಿರಿಸಿ ಮುದವೆರೆದು ಬಿಗಿದಪ್ಪುತಿಂತೆಂದ ನೆಲೆಸಖ ನಿನ್ನ

ಸರಸಕಾಗಿಯೆ ದ್ವಾರದಿ ॥ ಬರಿದೆ ನಿಲಿಸಿದೆ ಹೊರತು ನಿಮ್ಮೈವರೊಡನೆ ನಾ । ನೆರಡೆಣಿಸುವೆನೆ ಸಾಕು ಮರುಗಬೇಡೆನುತವನ । ಕರವಪಿಡಿದೊಳ ಗೊಯ್ದು ಭೋಜನವಗೈಸಿ ಸತ್ಕರಿಸಿ ಮತ್ತಿಂತೆಂದನೂ ॥೧॥

ರಾಗ ॥ ॥ ಅಷ್ಟತಾಳ

ಮರುತನಂದನ ಪೇಳು ಸುಖವೆ ನಿಮ್ಮವರ್ಗೇ । ಧರಣಿಪ ಫಲುಗುಣಮಾದ್ರೇಯರಿಂಗೇ ॥ ವರ ಧೃತರಾಷ್ಟ್ರ ದ್ರೌಪದಿ ಕುಂತಿಯರಿಗೇ। ಪುರಪರಿಜನ ಬಂಧುನಿಕರಕೆಲ್ಲರಿಗೇ ॥೧॥ ಏನು ಕಾರಣದೊಳಟ್ಟಿದನು ನಿನ್ನ ನೃಪನೂ । ತಾನುಮಖವನಾರಂಭಿಪನೆ ಪೇಳಿನ್ನು । ಸಾನುರಾಗದಿ ಬಂದ ಪರಿಯೆಲ್ಲವನೂ । ನೀನರುಹೆನಲೆಂದ ವಾಯುನಂದನನೂ ॥೨॥

ರಾಗ ॥ ನಿಲಾಂಬರೀ ॥ ತ್ರಿವುಡೆತಾಳ

ಲೋಕನಾಯಕ ಲಾಲಿಸು । ಗೋಪಾಲಕೃಷ್ಣ । ನೀ ಕರುಣವನಿರಿಸೂ ॥ ಶೋಕಹರವರ । ನಾಕಪತಿನುತ । ಶ್ರೀ ಕಮಲದಳನಯನ ಚಿನ್ಮಯ ॥ಪಲ್ಲ॥ ಕರಿವರದನೆ ನಿನ್ನನೂ । ನಂಬಿದವರ್ಗೆ । ಬರುವುದೇನೆಡರದಿನ್ನು ॥ ಹರಿಯೆ ನೀನಗ್ರಜನಿಗರುಹಿದ । ತೆರದಿ ಮಖವನು ತೊಡಗಲೋಸುಗ । ಭರದೊಳಟ್ಟಿದನೆನ್ನ ನಿನ್ನನು । ಕರೆದು ತರುವದೆನ್ನುತ್ತ ಹರುಷದಿ ॥೧॥ ನಿರತನಿನ್ನಯ ಪಾದವ । ನಂಬಿಹೆವೆಂಬು । ದರಿತುನಮ್ಮೊಳು ದಯವ ॥ ಯಿರಿಸಿ ತನ್ನಪರಾಧವೆಲ್ಲವ । ಮರೆದು ಸರ್ವರೆವೆರಸಿ ಬಂದ। ಧ್ವರವನಡೆಸಿದುಪೊರೆಯೊಯೆನುತಲಿ । ಹರಿತನಯ ಹರಿಚರಣಕೆರಗಿದ॥೨॥

॥ವಾರ್ಧಿಕ್ಯ॥

ಮುರಹರಂ ಮುದದೊಳನಿಲಜನ ಶಿರವಂ ನೆಗಹಿ । ಬರುವೆ ಗಜಪುರಕೆ ನುತ್ತಖಿಳ ಯಾದವನಿಕರ । ತುರುಣಿ ರುಗ್ಮಿಣಿ ಭಾಮ ದೇವಕಿಯರೊಡನೆ ಕರಿತುರಗ ಧನಕನಕಗಳನೂ ॥ ನೆರಹಿ ರಥವೇರಿ ಬಂದಾಜಾಹ್ನವಿಯ ತಟದೊ। ಳಿರಿಸಿ ಪಾಳಯವ ನಿಭಪುರಕೆಬರೆ ಶ್ರೀವರನ। ಧರಣಿಪತಿಯುಪ ಚರಿಸಿವಿಷ್ಟರದಿ ಕುಳ್ಳಿರಿಸುತಿಂತೆಂದನತಿವಿನಯದಿ ॥೧॥

ರಾಗ ॥ಕಾಂಭೋದಿ॥ ಝಂಪೆತಾಳ

ದೇವಲಾಲಿಪುದು ವಸು । ದೇವದೇವಕಿಯು ಬಲ । ದೇವಸ್ಮರ ಮುಖ್ಯ ಸತಿನಿವಹ ॥ ನೀವು ಬಿಟ್ಟೈತಂದ । ಭಾವವೇನ್ನೈ ಭೀಮ । ನಾವೆಡೆಯೊಳೆನಲು ಹರಿನುಡಿದ ॥೧॥

ರಾಗ ॥ ಮಧ್ಯಮಾವತಿ ॥ ಏಕತಾಳ

ಕೇಳಯ್ಯಶಶಿಕುಲ ರಾಜಶೇಖರನೇ । ಏಳಯ್ಯ ಸುರನದಿ ತಟಕಿನ್ನು ನೀನೇ ॥ ಪಾಳ್ಯವೆರಸಿ ಬಂದೆ ಪರಕಿಸು ಮುದದಿ । ಜಾಲವಲ್ಲಿದು ಭೀಮನರುಹಲು ಭರದಿ ॥೧॥

॥ವಾರ್ಧಿಕ್ಯ॥

ಎನಲರ್ಜುನನ ಮೊಗವ ನೋಡಿ ಧರ್ಮಜನೆಂದ । ನಿನಿಬರೀಯಾದ ವನಿಕಾಯ ಸಹನಮ್ಮೆಡೆಗೆ । ಚಿನುಮಯಾತ್ಮಕ ಪರಂಜ್ಯೋತಿ ಸ್ವರೂಪ ಶ್ರೀಹರಿ ಬಂದುದಚ್ಚರಿಯಲಾ ॥ ವಿನಯದಿಂದ ವರಸತ್ಕರಿಸಿತಹುದೆಂದು ಪುರ । ವನುಶೃಂಗರಿಸಲರುಹು ತನುಜರೊಡನೈದಿದಂ । ಘನಮಹಿಮ ಸಹಿತಬಂದ ವರಮನ್ನಿಸುತಿರಲು ಭಾಮೆದ್ರು ಪದಜೆಗೆಂದಳೂ ॥೧॥

ರಾಗ ॥ಬಿಲಹರಿ॥ ಏಕತಾಳ

ಇಳೆಯೊಳು ಚದುರೆ ನೀ । ಲಲನೆ ಯೆನ್ನರಸನ । ನೊಲಿಸಿಕೊಂಡನು ದಿನ । ದೊಳು ಮೊರ್ವೆನಮ್ಮ ॥ ಬಲು ಪತಿವ್ರತೆ ಪತಿ । ಗಳನೈವರನ್ನು ಮ। ರುಳು ಗೈವಳೊಳು ಮಾತಾ । ಡಲು ಬೆದರುವೆವು ॥೧॥ ಕರುಣ ವಾರಿಧಿಯ ನಾ । ನರಿತೊಲಿಸದಡೆನ್ನ । ದುರಳದುಃಶ್ಯಾಸನ । ಸೆರಗನೊಯ್ದಾಗ ॥ ವರ ಮಾನಕಾಯ್ದುವ । ರಿರುವರೆ ಪೇಳು ನಿ । ನ್ನರಸನು ದಯ ದಿಂದ । ಪೊರೆದಿಹನೆನ್ನ ॥೨॥ ಸರಿ ಸರಿ ಮೆಚ್ಚಿದೆನು । ನಿರತಗೃಹದಿ ನಿಲ। ದಿರುವ ಬಗೆಯ ಗೈದೆ । ಹರುಷವಿದಹಹ ॥ ಅರಿಯದೆ ಮಾತಾಡಿ। ದಿರ ವಕ್ಷಮಿಸುವುದೆಂದು । ಭರದಿ ನುಡಿಯೆ ಭಾಮೆ । ಗೊರೆದಳ್ಪಾಂಚಾಲೆ ॥೩॥ ಪಾರಿಜಾತವ ನೊಂಪಿ। ಸಾರಿ ನೀರಮಣನ । ನಾರದಗಿತ್ತು ಬಳಿ । ಕಾರಿನ್ನೊಡೆಯರು ॥ ಶ್ರೀ ರುಕ್ಮಿಣೀ ಧವ । ನೋರ್ವ್ವನ ನಾಥರ್ಗೆ ॥ ದಾರಿ ದೋರಿಪ ನಾತನಾಥನುಪುಸಿಯೇ ॥೪॥

॥ಭಾಮಿನಿ॥

ಇನಿತು ದ್ರೌಪದಿ ಸತ್ಯಭಾಮಾ । ವನಿತೆಯರು ನುಡಿಯುತಿರೆ ಮತ್ತಾ। ಜನರು ಹರಿಯಾಜ್ಞೆಯೊಳು ಹಯವನು ಪೂಜಿಸಲ್ಕತ್ತ ದನುಜನನು ಸಾಲ್ವಾಖ್ಯನಣ್ಣನ । ಮನುಮಥನಪಿತ ತರಿದವೈರವ ನೆನೆದು ಸಿಡಿಲಂದದಲಿ ಭೋರ್ಗರೆದೆಂದ ಸಚಿವನೊಳು ॥೧॥

ರಾಗ ॥ ಭೈರವಿ ॥ ಏಕತಾಳ

ಮಂತ್ರಿ ಸುಧಾರನೆ ಕೇಳು । ಹರಿ । ಪಿಂತಣ್ಣನ ಸಮರದೊಳು ॥ ಪಂಥದಿ ತರಿದನು ಶಿರವ । ಮದ । ದಿಂದಾ ನುರುಹಿದ ಪುರವ ॥೧॥ ಆ ವೈರವ ತಾಳುವೆನೇ । ಹುಲು । ಗೋವಳನವ ಬಾಳುವನೇ ಜೀವಿಸ ॥ ಲೆಡೆಗೊಡದವನಾ । ರಣ । ದೇವತೆ ಗುಣಬಡಿಸುವೆನಾ ॥೨॥ ಮದನಾರಿಯ ಕರುಣದಲೀ । ಸಿಲು । ಕಿದ ಮದ್ರಿಪುವಿಂದಿನಲೀ ॥ ಕದನದೊಳಣ್ಣನ ಪಗೆಯಾ । ಮುಗಿ । ಪುದಕಿದುಲೇಸಿನ ಸಮಯಾ ॥೩॥ ಬಡಿದಹಿ ತರನಾ ಹಯವ । ಸೆರೆ । ಪಿಡಿಯಲು ಹರಿಯೈತರುವ । ಬಿಡಿಸಲು ಬಂದಾತನನೂ । ತರಿ । ದಿಡುತ ನುಡಿಯ ಸಲಿಸುವೆನೊ ॥೪॥

॥ ವಾರ್ಧಿಕ್ಯ ॥

ಎನುತ ಗರ್ಜಿಸಿಖಳಂ ಪಡೆವೆರಸುತೈ ತಂದು । ಘನತರದ ಮಾಯದಿಂ ಕವಿಸಿಕಾರ್ಗತ್ತಲೆಯ । ಜನಪ ಧರ್ಮಜನಧ್ವರದ ಹಯವ ಕೊಂಡೊಯ್ದು ಕಟ್ಟಿ ಮೇಣ್ ನಿಜ ಬಲವನೂ ॥ ಕ್ಷಣದೊಳಗೆ ಪದ್ಮನಾಕಾರದಿಂ ನಿಲಿಸಿ ಮ । ತ್ತನುವರಕ್ಕುದ್ಯುಕ್ತನಾಗಿ ತನ್ನಯ ಶರಾ । ಸನದೊಳಂಬಂ ಸೇರಿಸುತ ಸಾಲ್ವನಾಪ್ತಭಟ ನಿವಹಕಿಂತೆಂದನಂದೂ ॥೧॥

ರಾಗ ॥ ॥ಮಟ್ಟೆತಾಳ

ಶೂರ ಸುಭಟರೆಲ್ಲ ಕೇಳಿ । ಚೋರ ಗೊಲ್ಲತರಳನೊಡನೆ । ಭೂರಿ ವಿಕ್ರಮದೊಳು ಕಾದ । ಲಾರದವನನೂ ॥ ಮಾರಿ ಬಳಗಕೀವೆನೀಮ । ಹಾರಣಾಗ್ರ ಗ್ಯೆವನವನೆ । ವೀರಮಿತ್ರ ನೆನಗೆ ಮುಂದೆ । ಸಾರಿ ಪೇಳ್ವೆನೂ ॥೧॥ ಮಿತ್ರಭಾವವೆಣಿಸುತವಗೆ । ಮತ್ತೆ ಗೋಗಜಾಶ್ವಧನ ಸು। ರತ್ನವನಿತೆಯರನು ಕೂಡುವೆ । ಸತ್ಯವೀನುಡಿ ॥ ಯತ್ನದಿಂದ ಧುರದಿ ಗೋಪ । ಮೊತ್ತದೊಡೆಯನನ್ನು ಕೊಲಿರೆ । ನುತ್ತ ನೇಮವಿತ್ತು ಗರ್ಜಿ। ಸುತ್ತಲೀರ್ದನೂ ॥೨॥

॥ಭಾಮಿನಿ॥

ಜನಪ ಕೇಳೀ ತೆರದಳೊತ್ತಲು । ಧನುಜನಿರುತಿರಲಿತ್ತ ಖಳ ಸಂ। ಜನಿತಮಾಯಕೆ ಹಯವ ಪೂಜಿಸುತಿರ್ದ । ನಾರಿಯರು ॥ ಮುನಿಜನರು ತಲ್ಲಣಿಸೆ ಬೆರಗಿನ । ಮನದೊಳೇಣ್ಣೆಸಗಿರದೆ ಚದರ । ಲ್ಕನು ವರಿತು ಧನುಜಾರಿ ತಲೆದೂಗುತ್ತಲಿಂತೆಂದ ॥೧॥

ರಾಗ ॥ ॥ ಏಕತಾಳ

ಕೇಳಿರೆನ್ನಯ ಮಾತನೊಲಿದು ನೀವೆಲ್ಲ ॥ ಆಲೋಚಿಸುವುದೇತಕೆ ಸಮಯವಿದಲ್ಲ ॥ಪಲ್ಲ॥ ಇವನನು ಸಾಲ್ವನೆಂಬವನೀತನಣ್ಣನ । ಬವರದಿ ಪಿಂತೆಕೊಂದಿಹೆನದರಿಂದ ॥ ಹವಣಿಸುತೆನ್ನ ವೈ । ರವಕಟ್ಟಿ ಬಂದರೆ । ಜವದೊಳೆಮ್ಮಯತುರ । ಗವ ನೊಯ್ದ ಖಳನು ॥೧॥ ದುರುಳನಗೆಲಿದಿನ್ನು । ತರುವರಾರೀ ನಮ್ಮ ತುರಗವನಾ ಸುಭ । ಟರಿ ಗೊಲಿದಿಂದೂ॥ ಮೆರವ ವೀಳ್ಯವನೀವೆ । ಧುರಗೆಲ್ಲುವವೆಂಬ । ಭರವಸೆಯಿರ್ದಡೆ । ಪೊರಡುವುದೆಂದ ॥೨॥

॥ ಭಾಮಿನಿ ॥

ಪುರಮಥನನಿಂತೆನಲು ಕೇಳ್ದತಿ । ಧುರಸಮರ್ಥರು ಬೆದರಿ ಮೌನದೊ। ಳಿರಲು ಕಂಡೀ ಪರಿಯನೆಲ್ಲವನಗುತ ಪ್ರದ್ಯುಮ್ನ ॥ ಭರದಿನಡೆತಂದಚ್ಯು ತನಪದ । ಸರಸಿಜಕೆ ತಲೆವಾಗಿ ತನ್ನಯ । ಕರವ ಮುಗಿದಿಂತೆಂದನಾಕ್ಷಣ ಶೌರ್ಯದೇಳ್ಗೆಯನು ॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ತಾತ ಕೊಡು ವೀಳಯವ ವೈರಿ । ವ್ರಾತವನು ಗೆಲಿದಶ್ವವನು ತಹೆ। ನೀತತೂಕ್ಷಣ ನೋಡು ಮಮಸ । ತ್ವಾತಿಶಯವ ॥೧॥ ವಾರುಹವನಾ ತಾರದಡೆ ವೃಷ । ಳೀ ರಮಣನುಗ್ರಗತಿಗಿಳಿವೆನು । ಮೂರುವೆನೆ ನುಡಿಯಿದಕೆ ಕಳುಹೈ । ಭೂರಿಮುದದಿ ॥೨॥ ಎನುತಲಾ ಪ್ರದ್ಯುಮ್ನ ಪೌರುಷ । ವನು ನುಡಿಯೆ ಕರುಣಿಸಲು ವೀಳ್ಯವ । ಧನುಜಹರನಡಿಗೆರಗಿ ಪೊರಟನು। ಘನತೆಯಿಂದ ॥೩॥ ಶಂಬರಾರಿಯು ಕದನಕ್ಕೈದುವ । ದಂ ಬಳಿಕ ವೃಷಕೇತು ಕಾಣುತ । ಸಂಭ್ರಮದಿ ಗರುಡಧ್ವಜಗೆ ಮಣಿ । ದಂಭರದೊಳು ॥೪॥

ರಾಗ ॥ ಭೈರವಿ ॥ ಏಕತಾಳ

ಜಲಜಾಕ್ಷನೆ ಕೇಳಿಂದು । ರಿಪು । ಬಲವನು ಸಮರದಿ ಕೊಂದು ॥ ನಲಿಯುವ ಶಾಕಿನಿ ಗಣಕೇ । ದಿಗು । ಬಲಿ ಕೊಡುವೆನು ಈಕ್ಷಣಕೇ ॥೧॥ ಧುರದಲಿಮದ್ಭುಜ ಬಲದಿ । ತ್ರಿದ । ಶರು ಮೆಚ್ಚುವ ವೋಲ್ಕಾದೀ ॥ ತುರಗವನೊಯ್ದವನಗೆಲಿದು । ತವ । ಚರಣಕೊಪ್ಪಿಸುವೆ ಪಿಡಿದೂ ॥೨॥ ಕ್ಷಿಪ್ರದಿ ಖಳನನಿನ್ನಡಿಗೇ । ತಂ । ದೊಪ್ಪಿಸದಡೆ ಮುಂದೆನಗೇ ॥ ವಿಪ್ರನ ಕೊಲಲೆಳಸಿದನಾ । ಗತಿ । ಯಪ್ಪುದು ಕಳುಹಿಪುದೆನ್ನ ॥೩॥

॥ ಭಾಮಿನಿ ॥

ದಿನಪಮೊಮ್ಮನ ರೀವಿ ಪ್ರದ್ಯುಮ್ನನ ಸಾಹಸ ನುಡಿಗಳನು ಕೇಳುತ। ಚಿನುಮಯನು ಬಿಗಿದಪ್ಪಿ ಹರುಷದೊಳಿತ್ತ ವೀಳಯವ ॥ ಮಣಿರಥಕೆ ಮೀನಧ್ವಜವ ನಾ । ಕ್ಷಣದೊಳಳವಡಿಸುತ್ತ ಧನುಶರ । ವನುಗೊಳುತ ರಥವೇರಿ ಸ್ಮರನಡೆತಂದನಾ ಹವಕೇ ॥೧॥

॥ ಕಂದ ॥

ಬರುತಿಹ ಸ್ಮರನಂ ಸಾಲ್ವಂ । ಪರಿಕಿಸುತಿವ ಮೀನ ಧ್ವಜನೆಂದ ರಿತಾಗಂ ಉರಿಮಸಗುತಲತಿ ಭರದಿಂ । ಸರಿದವನಂ ತಡೆಯಲು ಮತ್ತಾ ಸ್ಮರನೆಂದಂ॥೧॥

ರಾಗ ॥ ॥ ಮಟ್ಟೆತಾಳ

ಭಳಿರೆ ವೈರಿಸುಭಟ ಕೇಳೆಲಾ । ತೋರುವೆಯ ಬಾಹು । ಬಲವರಣ ದೊಳೆಲವೊ ದುರ್ಬಲಾ ॥ಪಲ್ಲ॥ ಆರೆಲಾ ನೀ ಪೇಳು ನಮ್ಮ । ವಾರು ಹವ ಕದ್ದೊಯ್ದ ನಿನ್ನ । ಭೂರಿಗರ್ವ ವಿಳಿಸಿದಪೆನು । ಸಾರಿ ಪೆಳ್ದೆ ಕೇಳು ಖಳು ಕು ।ಠಾರನೆನಿಪಹರಿಯ ತರಳನೂ । ನಾಬಿಡೆ ನಲ್ಲದಡೆ । ಕ್ರೂರ ಶರದಿತರಿವೆ ನಿನ್ನನೂ ॥ಭಳಿರೆ ॥೧॥ ಯೆನಲು ನುಡಿದ ಸಾಲ್ವನನುಜ। ದನುಜನನುಸಾಲ್ವಾಖ್ಯ ನಹೆನು । ನಿನಗೆ ಪಂಚಶರ ಪ್ರಯೋಗ । ವನಿತೆ ಯರೊಳು ಲೇಸುವಿರಹ । ವೆನಗದಿಲ್ಲವಿಂದ್ರಿಯಂಗಳ । ನಿಗ್ರಹಿಸಲಿಲ್ಲ । ಸೆಣಸುತಿಹೆನು ತೊಡುವೆ ಶರಗಳ । ವಾರುಹವ ಬಿಡೆನು । ಮನೆಗೆ ತೆರಳಲ್ಲದಡೆ ನಿಲ್ಲೆಲ್ಲಾ ॥೨॥ ಯೆಲವೊ ದೈತ್ಯ ಕೇಳು ನಿನ್ನ । ಛಲವ ತೋರುತಿಹೆಯ ನಿಲ್ಲು । ಸುಲಭವೇನೂ ಪೇಳೆನುತ್ತ । ಜಲಜನಾಭ ನಾತ್ಮ ಜಾತ । ಬಲುಶರಾವಳಿಯಿಂದ ಮುಸುಕಲೂ । ಕತ್ತರಿಸಿಕ್ಷಣದಿ । ಮುಳಿದುದೈತ್ಯ ಕಣೆಗಳೆಸೆಯಲೂ । ಬರೆ ಮಧ್ಯಪಥದೊ । ಳಿಳಿಗೆ ಭರದಿ ಸ್ಮರನು ಕೆಡ ಹಲೂ ॥೩॥

॥ಭಾಮಿನಿ॥

ದುರುಳನಾಗಮಹೋಗ್ರ ಶರವನು । ಸ್ಮರಗೆ ಸೈರಿಸದೆ ಮೂರ್ಛೆಯೊ। ಳೊರಗೆ ರಥವನು ತಿರುಹಿ ಮತ್ತಾ ಸಾರಥಿಯು ಜವದೀ ॥ ಬರಲು ಮದನನ ಹರಿಯು ಪರಿಕಿಸಿ । ಭರಿತ ಪೌರುಷದಿಂದ ಮಮಸುತ । ಧುರದಿ ರಿಪುಮಥನದೊಳು ಬಳಲಿದ ನೆನುತಲಿಂತೆಂದ ॥೧॥

ರಾಗ ॥ ॥ ಅಷ್ಟತಾಳ

ಆಹಹ ಯಿನ್ನೇನೆಂಬೆನೊ । ಕಂಡೆನು ನಿನ್ನ । ಸಹಸವ ಧುರದೊಳಾನು । ಕುಹಕಿ ದೈತ್ಯನಗೆದ್ದು ತುರಗವ ತಂದಿಂತು । ಬಹು ಬಳಲಿದೆಯ ನೀನು । ಪೇಳಿರವನು ॥೧॥ ಧುರ ಪರಾಕ್ರಮಿತಾನೆಂದು । ಗರ್ವದಿ ಭಾಷೆ। ಯರುಹುತಲೆನ್ನೊಳಿಂದು ॥ ಬರಿದಾಯ್ತು ತರುಣಿಯರೊಳು ಸರಸವೆ ಪೇಳು । ಪುರುಷತ್ವವೆ ನಿನಗೇ । ಸೋತಿಹ ಬಗೆಗೇ ॥೨॥ ಪುರಕೆ ಪೋಗುವದೆಂತಿನ್ನು । ಸ್ತ್ರೀಯರು ನಗ । ದಿರುವರೆ ವಿಪಿನವನ್ನು॥ ತೆರಳೆ ಕೊಡರು ಮುನಿ । ವರರು ಸೇರ್ದಡೆ ಬಾಣಾಸುರನಲ್ಲೀಶತಾನು॥ ನೆಲಸಿರ್ಪನೂ ॥೩॥

॥ ವಾರ್ಧಿಕ್ಯ ॥

ಗತಿ ನಿನಗೆ ಬೇರೇನ ಕಾಣೆನೈಪ್ರಾಪ್ತ ವಿ । ನ್ನತಿಶಯದ ನಂಗತ್ವವೇ ನಿಜಂ ನಿನಗಿನ್ನು । ಮತಿಹೀನಸುಡು ನಿನ್ನ ಬಾಳುವೆಯನೆಂದು ಹರಿಯೊದೆದ ನೆಡಗಾಲ್ದುದಿಯೊಳು ॥ ಕ್ಷಿತಿನಾಥ' ಕೇಳಿಂತು ಮುರಮಥ'ನ ನಾಗಕಡು । ಖತಿಯೊಳಾತ್ಮ ಜನಕಾಲ್ದಳದೊಳೊದೆಯಲ್ಕೆ ಮಾ । ರುತಿಕಂಡು ಶತಪತ್ರ ನೇತ್ರ ನಡಿದಾವರೆಗೆ ಮಣಿದೆಂದ ದೈನ್ಯತೆಯೊಳು ॥೧॥

ರಾಗ ॥ ಮಧುಮಾಧವಿ ॥ ಏಕತಾಳ

ಲಾಲಿಸು ಭಕ್ತ ಸಂಜೀವ ಬಿನ್ನಪವ । ಬಾಲನ ಮೇಲಿಷ್ಟು ಕೋಪವೆ ದೇವ ॥ ಖೂಳನಾತನು ಮೋಸದಿಂದ ಗೆದ್ದಿಹನೂ । ಮೇಲುದಳವ ಕಳುಹಿಸುವುದು ನೀನೂ ॥೧॥ ಬಲಹೀನನನೇಸ್ಮರ ಸೋಲ್ವನೆ ಖಳಗೆ । ಕಲಿಕರ್ಣರರಳ ತಾನ್ಯೆದಲೀ ಬಗೆಗೇ । ಕೊಳುಗುಳವನು ಗೆದ್ದು ತುರಗ ವನು ತರುವ । ಛಲದಂಕನಹ ನೋಡು ನಿಜವಿದುದೇವ ॥೨॥

ರಾಗ ॥ ॥ ಏಕತಾಳ

ಮರುತಾತ್ಮಜ ರಣಧೀರ ಕೇಳಯ್ಯ ಕ್ರೂರಕರ್ಮಿಗೆ ಪರಿಹಾರ ಪೇಳಯ್ಯ ॥ಪಲ್ಲ॥ ಭೂರಿ ಗರ್ವದಿ ಭಾಷೆ । ದೋರಿಕಾದಾಡಿ ಸೋ । ತೀರೀತಿ ಬರಲುಶ । ರೀರಖಂಡನೆಯೂ ॥ ಸೇರಿತು ಸಾಕುವಿ । ಚಾರ ಸಹಸವಿರೆ । ವಾರುಹವನು ತಾರೊ । ವೀರ ನೀನೆಂದು ॥೧॥

॥ ಕಂದಪದ್ಯ ॥

ಮುರಹರನಾಡಿದ ನುಡಿಯಂ । ಮರುತಸುತ ಕುಮಾರಕ ಲಾಲಿಸುತಲಿ ಚಿತ್ತದೊಳುಂ ॥ ದೊರಕಿದು ದಾಹವವೆನಗೀ । ಹರಿಕರುಣದೊಳೆನುತುಬ್ಬೇರುತಲಿಂತೆಂದಂ ॥೧॥

ರಾಗ ॥ಮಾರವಿ॥ ಏಕತಾಳ

ಬಿಡುಮನದಣಿಕೆಯ । ಜಡರುಹ ಲೋಚನ । ಕೆಡುಕನವನ ಶಿರವ॥ ಕಡಿದೀಕ್ಷಣ ಯಮ । ಬಿಡದಿಗೆ ಕಳುಹಿಸಿ । ಬಿಡಿಸಿ ತಹೆನುಹಯವ ॥೧॥ ದುರುಳನವನು ನ । ಮ್ಮಿರವರಿಯದೆ ಸಂ । ಗರ ತೊಡಗಿದನಹನು॥ ಶರಜಜಭವ ನಿ । ರ್ಜರಪಾಲಾದ್ಯರ । ಮರೆಹೊಕ್ಕರುಬಿಡೆನು ॥೨॥ ಯೆನುತನಿಲಾತ್ಮಜ । ಕನಲುತ ಕಾಳಗ । ಕೈನುರ‍್ರೈತರಲಂದೂ ॥ ದಿನಪಾತ್ಮಜಸುತ । ವಿನಯದಿ ಮಾರುತ । ತನಯನೊಳಿಂತೆಂದ ॥೩॥

ರಾಗ ॥ ಕೇತಾರಗೌಳ ॥ ಅಷ್ಟತಾಳ

ಜನಪಕೇಳ್ಳೊಸತು ಮೇದಿನಿಗಿದು ಬಾಲರು । ಮನವಿಟ್ಟ ಫಲಕಾಶಯ ॥ ಯೆಣಿಪರೆ ಪಿತರು ಮ । ತ್ತೆನಗೆ ಮೊಸಲ ಮಾಡಿ । ದನುವರ ಕೈದುವದೊ ॥೧॥ ಯೆನಲೆಂದ ತರಳಕೇ । ಳಣುಗಗೆ ಫಲವನು । ಜನಕತಾಸವಿಸದೆಡೇ ॥ ತನಯ ತಾನೇ ಭುಂಜಿ । ಪನೆ ಧುರದಂದವ । ನಿನಗೆ ತೋರಲು ಬಂದೆನು ॥೨॥ ಕಿರುನಗೆ ಸೂಸಿ ಸಂ । ಗರಕೆ ಕಾರ್ಮುಕ ವನು । ಧರಿಸಿ ವೃಷಧ್ವಜನೂ ॥ ಮರುತಜಗೆರಗಿ ಮಂ । ದ್ವರಿಸಿ ತಾಗಿದ ನಿಶಿ । ಚರನ ಬಲವನಾತನು ॥೩॥

॥ವಾರ್ಧಿಕ್ಯ॥

ತರಣಿಮೊಮ್ಮನು ಬಳಿಕರಿಪು ನಿವಹಮಂ ಪೊಕ್ಕು । ಹರಿಸಿ ಮಾರ್ಗಣ ಗಣವಖಿಳ ಬಲವ ಸವರುತಿರ । ಉರಿಯುಗುಳುತನುಸಾಲ್ವದೊರದಿಂ ಪರಿಕಿಸುತಲೀತ ಝುಷಕೇತುನಲ್ಲ ॥ ಮೆರೆವ ವೃಷಭಾಂಕಿತ ಧ್ವಜದೊಳಿಹ ನಾರಿವನ । ನರಿಯದಿಹೆ ಗೋಪಾಲ ನಲ್ಲೆನುತ ಶರಗಳಂ। ಸುರಿಸಿದಂ ಕರ್ಣಸಂಭವನ ಮೇಲತಿ ವಹಿಲದಿಂ ಮತ್ತಿಂತೆಂದನೂ ॥೧॥

ರಾಗ ॥ ಭೈರವಿ ॥ ಅಷ್ಟತಾಳ

ಭಳಿರೆ ಬಾಲಕನೆ ಕೇಳು । ನೀನಾರೆಂದು । ತಿಳಿಯೆನೆನ್ನೊಡನೆ ಪೇಳು॥ ಬಲುಬಾಹು ಬಲರವ್ವೋ । ಲೆಳಸಿದೆ ಕದನವಿ । ದೊಳಿತಲ್ಲವ್ವೈ ನಿನಗೆ ॥೧॥ ಧರೆಯವ್ಯಾಪಿಪ ನಮವ । ಹರಿಪ ದಿನ । ಕರಸುತನಾತ್ಮ ಭವ ॥ ಅರಿಭಟ ರಸುವೆಂಬ । ಗರಳವನೀಂಟುವ । ವರವೃಷಧ್ವಜನಹೆನೊ ॥೨॥ ತರಳ ಕೇಳಾದಡಿನ್ನು । ಸಾಲ್ವನ ಸಹೋ । ದರ ನನು ಸಾಲ್ವತಾನು॥ ಭರದಿ ನೀ ಕೆಲಸಾರು । ಧುರದೊಳಣ್ಣನ ಕೊಂದ । ದುರುಳ ಗೋವಳನತೋರು ॥೩॥ ಹರಿವೈರಿಯನುಜ ಕೇಳು । ಗಣ್ಯವೆ ನರ । ಹರಿಗೆ ನೀ ಮರುಳೆ ಪೇಳು ॥ ಹರಿಗಿಭವೀಡೆ ಶ್ರೀ । ಹರಿಹಗೆ ಬೇಡೆಮ್ಮ। ಹರಿಯ ನೀಡುವುದು ಲೇಸು ॥೪॥ ಪೊತುರೆ ತರಳ ನೀನು । ಬಾಯೊಳು ಬಲ್ಲಿ । ದಾತನಾಗಿಹೆ ಸಾಕಿನ್ನು॥ ನೂತನವಹ ಶರ । ವ್ರಾತದ ಮುಖದಿ ನಿ । ಮ್ಮಾತುರಗವೆ ಬಿಡುವೆ ॥೫॥

॥ ಭಾಮಿನಿ ॥

ದುರುಳನಿಂತೆನುತಧಿಕ ರೋಷದಿ । ಭರದಿ ದಿವ್ಯಾಸ್ತ್ರದಲಿ ಕರ್ಣಜ। ನುರವ ನಿರಿಯಲು ಮೈಮರೆಯುತಾಕ್ಷಣದೀ ॥ ವರ ಗದಾದಂಡವನು ತಿರು ಹುತ । ಉರಿಮಸಗಿ ನಯನಂಗಳಲಿ ಸಂ । ಗರ ಭಯಂಕರ ಭೀಮ ನಿದಿರಾಗುತ್ತಲಿಂತೆಂದ ॥೧॥

ರಾಗ ॥ ಭೈರವಿ ॥ ಏಕತಾಳ

ಖಳಕುಲದಧಮನೆ ಕೇಳು । ತವ । ತಲೆಯ ತರಿದು ಸಮರ ದೊಳು ॥ ಸುಲಭದಿ ತೋರುವೆ ನಿನಗೇ ।ಯಮ । ನಿಳಯವ ನೋಡೀ ಗಳಿಗೇ ॥೧॥ ನರಗುರಿ ಕೇಳ್ಪಂಚಶರ ।ದಿನ । ಕರನಂದ ನಾತ್ಮಜರ ॥ ತೆರನೀಕ್ಷಿಸುತೆನ್ನೊಡನೇ ।ನೀ । ಧುರಗೊಡುವುದು ದುರ್ಬಲನೇ ॥೨॥ ಹುಲುದಾನವ ಕೇಳಿನ್ನು ।ಕಡು । ಗಲಿ ಕರ್ಣಜಮಾರರನೂ ॥ ಗೆಲಿದಿಹ ಗರ್ವದ ಗಿರಿಯ ।ಪುಡಿ । ಗಳೆವೆನು ತೋರಾಪರಿಯ ॥೩॥ ಯೆಲೆಮರು ತಾತ್ಮಜ ನೀನು ।ಬಾ । ಯೊಳು ಶೌರ್ಯದ ನುಡಿದೇನು ॥ ಫಲವಿಹುದೇತವ

ಬಲುಹ । ದೋ । ರಳವಿಯೊಳೀಕ್ಷಿಪೆಕಡುಹ ॥೪॥ ಬೆಡಗಿನ ಮಾತಂತಿರಲಿ। ನೀ । ಬಿಡುತುರಗವ ಲೇಸಿನಲಿ ನುಡಿವೆನು ಸಾಮದೊಳೊಡನೆ । ಛಲ। ವಿಡಿದಳಿಯದಿರೆನ್ನೊಡನೆ ॥೫॥ ಸೊಕ್ಕಿನ ನುಡಿಯಾಡದಿರು । ರಣ । ದಕ್ಕರವಿರ್ದಡೆ ಹೋರು ॥ ಠಕ್ಕಿಗೆ ತುರಗವ ಬಿಡೆನೊ । ಯೆನುತುಕ್ಕುವ ರೋಷದಿ ಖಳನು ॥೬॥

॥ಭಾಮಿನಿ॥

ಮರುತಜನ ಸರ್ವಾಂಗವನು ಶರ । ವರುಷದಲಿ ತೋಯಿಸೆ ವೃಕೋ ದರ । ನೊರಗೆ ಕುಂಜರ ಪಡೆಯೊಳೆಸೆವ ಮೃಗೇಂದ್ರನಂದ ದಲಿ ॥ ದುರುಳನಿರೆ ಕಂಡಸುರಹರ ಬಿ । ಲ್ದಿರುವ ನೊದರಿಸಿ ಸಮರಕೈತರೆ। ಭರದೊಳನುಸಾಲ್ವನು ತಡೆದಿಂತೆಂದ ಗರ್ಜಿಸುತ ॥೧॥

ರಾಗ ॥ಸೌರಾಷ್ಟ್ರ॥ ತ್ರಿವುಡೆತಾಳ

ನಿಲ್ಲೆಲವೊ ಗೋವಳನೆ ಪೋಗುವೆ । ಯೆಲ್ಲಿ ಸಿಕ್ಕಿದೆನಿನ್ನೊಡಲ ಬಗೆ । ದಿಲ್ಲಿ ಶಾಕಿನಿ ಬಳಗಕುಣಿಸುವೆ । ಬಲ್ಲೆಯೇನ್ನೈ ॥೧॥ ಬಲ್ಲೆನ್ನೈ ನಿನ್ನಣ್ಣ ಪೂರ್ವದಿ । ಬಲ್ಲಿದನು ತಾನೆಂದುಕೊಳುಗುಳ । ದಲ್ಲಿ ಮಡಿದಿಹನೆನ್ನೊಳದ ತಿಳಿ । ದಿಲ್ಲಿ ಸೆಣಸೂ ॥೨॥ ಅಗ್ರಜನ ತರಿದಧಮ ನಿನ್ನನು । ನಿಗ್ರಹಿಸದಿರೆನೆಲವೊ ಕೇಳಿ । ನ್ನುಗ್ರನೊಲುಮೆಯೊಳಿಂದು ಸಮರದಿ । ಶೀಘ್ರದಿಂದ ॥೩॥ ದುರುಳ ಕೇಳ್ನಿನ್ನಂತ ಹಲಬರು । ಗರುವದಿಂ ಬಂದೆನ್ನೊಳಳಿದಿಹ । ಪರಿಯ ನರಿಯೆಯ ಬರಿಯ ಪೌರುಷ। ಮೆರೆಸಲಹುದೇ ॥೪॥ ದಿತಿಜರನಿಬರ ತರಿದಿರುವ ಹಂ । ಕೃತಿಯದೆನ್ನೊಳು ಸಲ್ಲದೈ ನಿಲು । ಹತಿಯ ಸಹಿಸುವುದೆನುತಬಿಡೆ ಶರ । ತತಿಯನಂದು॥೫॥

॥ಭಾಮಿನಿ॥

ದನುಜನಿಂ ತತ್ಯಧಿಕ ರೋಷದಿ । ಧನುವಿನಿಂದುಗುಳಿಸಿದ ಕೂರ್ಗಣೆ। ಗಣವು ಮತ್ತಾವರ ಮುಕುಂದನ ಹಯವಸಹ ಮುಸುಕೇ ॥ ಘನಶರಾಸ್ತ್ರದ ಹತಿಗೆ ಹಾಯ್ದುವು । ರಣವನುಳಿದೊಂದೆಸೆಗೆ ಸೂತನ । ಗಣಿಸದಚ್ಯುತ ನಿರವ ಕಾಣದೆ ಮರುಗಿ ಖಳನುಡಿದ ॥೧॥

ರಾಗ ॥ ಕಾಂಭೋದಿ ॥ ಝಂಪೆತಾಳ

ಏನಿದಚ್ಚರಿ ಕಲಹ । ಕಾನುವಡೆ ಬಂದರಿಪು । ತಾನೆತ್ತಸರಿದ ನಕಟ ಕಟಾ ॥ ಯಿ ನಿಧಾನವನೊಂದ । ನಾನರಿಯೆ ಬರಿದಾದು । ದೇನೆಂಬೆಸಾಧಿಸಿದಡಿನಿತು ॥೧॥ ತನ್ನವನಿಯ ವಿಚಾರ । ದಿಂ ನಡೆವುದೋ ಅದರಿ । ನಿಂ ನಡೆದಪರೊ ನೀತಿ ತೊರೆದು ॥ ಕನ್ನೆಯರು ಪರಪುರುಷ। ರನ್ನು ಕೊಡುವರೊ ಯೆನ । ಗಿನ್ನಾವ ಕಲುಷವೆಂದರಿಯೇ ॥೨॥ ಹರನ ಸೇರಿ ದರು ನಾ । ತರಿವೆ ಹಗೆಯನೆನುತ್ತ । ಗರುವತನ ವಾಡಿದುದಕೆ ನಗೇ ॥ ಹರಿ ಭೂಪಮುನಿದನೋ । ಹರಿಯೆನಗೆ ಕಾಣದಿಹ । ತೆರನಾವುದೆ ನುತ್ತ ಚಿಂತಿಸಿದ ॥೩॥

॥ ಭಾಮಿನಿ ॥

ಕ್ಷಿತಿಪ ಕೇಳಾಸಮಯದಲಿ ಮುರ । ಮಥನ ಹಯಗಳನುಪಚರಿಸಿ ಕಡು । ಖತಿಯನಾಂತತಿ ಭರದೊಳೈ ತಂದಸುರಗಿದಿರಾಗಿ ॥ ಪ್ರತಿರಹಿತ ಮುಸುಕಿದ ಮಹಾಶರ । ತತಿಯೊಳದ ತರಿದಿಕ್ಕಿದಾನವ । ನತಿಶಯದರೋಷ ದಲಿ ಕಂಸಾರಿಯನು ಜರೆದೆಂದ ॥೧॥

ರಾಗ ॥ ಭೈರವಿ ॥ ಅಷ್ಟತಾಳ

ಭಳಿರೆ ಗೋವಳ ನಿನಗೇ ! ಮೆಚ್ಚಿದೆ ನೆನ್ನೊ । ಳಳವಿಗೈತಂದು ಹೀಗೆ ॥ ಬಲು ಹೇಡಿಗಳ ಪರಿ । ಯಲಿ ವೋಡಿ ಫಲವೇನು । ಕಲಹದಿ ಬಲುಹ ತೋರು ॥೧॥ ಅಸುರಾರಿಯಾದಡಾನು । ಅಂಜುವೆನೆ ನಿ । ನ್ನಸಮಸಾಹಸಕೆ ಯಿನ್ನು ॥ ಪೊಸ ಮಸೆವಿಶಿಖವ । ನೆಸೆವೆನು ಸೈರಿಸೆಂ । ದುಸುರುತೆಚ್ಚನು ಶರವ ॥೨॥ ಹಿಂದಣ ಶೌರ್ಯವನೊ । ನೀನಾಡಿದ । ರಿಂದೆಮ್ಮೊಳಾಹುದೇನು ॥ ಕುಂದದೆ ಸಮರದೊ । ಳಿಂದು ತೋರಾಸತ್ವ। ದಂದವ ಕಂಡಪೆನೂ ॥೩॥ ಸಾಕು ಸಾಕೆಲೊ ಖಳನೇ । ಗರ್ವದ ನುಡಿ। ಯಾಕೆ ಪೇಳುವೆ ಸುಮ್ಮನೇ ॥ ಭೂಕಾಂತನಶ್ವವ । ನೀ ಕೊಡುಕೊಡದಿರೆ। ತೋಕುವೆತನಿರಕ್ತವ ॥೪॥ ಧುರದಿ ನಿನ್ನಯ ತಲೆಯಾ । ಚೆಂಡಾಡದೆ ತುರಗ ಬಿಡೆನು ನಿಶ್ಚಯಾ । ಸರಿಭಟನಾದರೆ । ಸುರಿಸುಬಾಣಾವಳಿ । ಬರಿದೆನಿಸುವೆನೀ ಕ್ಷಣ ॥೫॥

||ವಾರ್ಧಿಕ್ಯ||

ಅಸುರನಿಂತೆನುತ ಪೊಸಮಸೆಯ ಶರದಿಂದ ಲಾ । ಬಿಸರು ಹೇಕ್ಷಣನ ರಂಜಿಸುವ ವಕ್ಷನು ಕೀ । ಲಿಸಲು ಹರಿಮೈಮರೆಯೆ ಸೂತನದ ನೀಕ್ಷಿಸುತ ತಿರುಗಿಸುತ ನಿಜರಥವನೂ ॥ ವ್ಯಸನದಿಂ ನಗರ ಕೈದಿಸಲು ಕಾಣುತ್ತಲಾ। ಶಶಿ ಮುಖಿಯರಧಿಕ ಶೋಕಿಸುತ ಬಳಸಿದರುಮಿಗೆ । ಕುಸುಮಶರನಯ್ಯನಂ ಬಳಿಕದರೊಳಿಂತೆಂದಳಾ ಸತ್ಯಭಾಮೆ ನಗುತ ||೧||

ರಾಗ || || ಏಕತಾಳ

ಪ್ರಾಣನಾಯಕ ನೀನು । ದಾನವ ಗಿದಿರಾಗಿ । ಪ್ರಾಣದಾನವ ಪಡೆದೇನು ಮರಳಿದೇ || ಯೀ ನಿಧಾನವ ತಿಳಿದ ಹಿತರೇ ಗಯ್ಯರು । ಕ್ಷೋಣಿಯೊಳತಿ ಬಲನಹುದು ಮೆಚ್ಚಿದೆನು ||೧|| ರಣಪರಾಕ್ರಮಿಯೆಂಬ। ಘನಶೌರ್ಯದೊಳು ಪ್ರದ್ಯುಮ್ನನ ಭಂಗಿಸಿದೆ ಮಾನ । ವನುಗಳೆದಿಲ್ಲಿ|| ಚಿನುಮಯಾತ್ಮಕನೆಂದಾ । ವನು ಬಣ್ಣಿಸುವವನು ಮೇ । ದಿನಿಯೊಳೆಣೆ ಯಗಾಣೆ । ನೆನಗರುಹದನೂ ||೨||

|| ವಾರ್ಧಿಕ್ಯ ||

ವನಿತೆ ಭಾಮಾದೇವಿಯಿಂತು ನಸುನಗುತ ತ || ನ್ನಿನಿಯನಂ ಜರೆದು ನುಡಿಯುತ್ತಿರಲು ಕಣ್ದೆರೆದು । ಮನದಿಲಜ್ಜಿಸಿ ವಲ್ಲಭೆಯ ನುಡಿಗೆ ಮನ್ಮಥನಪಿತ ಬಳಿಕ ತಕ್ಷಣದೊಳೂ || ಕನಲಿ ಕಣ್ಣಾಲಿಗಳ್ಕೆಂ ಪಡರಲಿರದೆದ್ದು । ಸನಿಹದೆಡಬಲಗಳಂ ಪರಿಕಿಸುತ ಮತ್ತೆ ರಣ । ಕನುವಾಗಿ ತನ್ನ ನಿಜಕಾಂತೆಯೊಳಗಿಂತೆಂದ ಸತ್ವಾತಿಶಯವನಂದೂ ||೧||

ರಾಗ || ಸೌರಾಷ್ಟ್ರ || ತ್ರಿವುಡೆತಾಳ

ಮಡದಿ ಕೇಳ್ನೀನಧಿಕ ಗರ್ವದಿ । ನುಡಿವೆ ಬೆಡಗಿನ ಮಾತುಗಳನೆ। ನ್ನೊಡನೆ ಸಲ್ಲದು ಸಾಕು ಸುಮ್ಮನೆ । ನಡೆಯೆ ಕೆಲಕೇ ||೧|| ವರಚತುರ್ದಶ ಜಗವನಣುವೆಂದರಿಯೆ ನುರುಹುವೆ ಕ್ಷಣದೊಳೀ ಹಲು । ದುರುಳ ನೆನಗೇಂ ಸರಿಯೆ ಕಲಹದಿ । ತರಿವೆನವನ ||೨|| ಮರುಳು ಸಾರಥಿ ತಿರುಹುರಥವನು । ಭರದಿದಾನವನೆಡೆಗೆನುತ ಮುರ । ಹರ ನರುಹಿಸಂಗರಕೆ ಪೊರಟನು । ತ್ವರಿತದಿಂದ ||೩||

॥ ಭಾಮಿನಿ ॥

ಪೃಥ್ವಿಪತಿ ನೀ ಲಾಲಿಸನಿತರೊ । ಳಿತ್ತ ಮೂರ್ಛೆಯೊಳಿರ್ದ ಕರ್ಣನ। ಪುತ್ರನೆಚ್ಚರಿತೆದ್ದು ತನ್ನಯ ಸೋಲವನು ನೆನೆದೂ ॥ ಚಿತ್ತದಲಿ ಕೋಪಾಗ್ನಿ ಭುಗಭುಗಿ । ಸುತ್ತ ಬರೆ ಕಿಡಿಯಿಡುತ ಲಿದಿರಿಹ । ದೈತ್ಯಗೆಂದನು ಬಡಿದ ಪೆರ್ಬುಲಿಯಂತೆ ಗರ್ಜಿಸುತ ॥೧॥

ರಾಗ ॥ ಭೈರವಿ ॥ ಏಕತಾಳ

ನಿಲ್ಲೆಲೊ ದನುಜಾಧಮನೇ । ಬಲು । ಬಲ್ಲಿದ ಧುರಕೆನ್ನೊಡನೇ॥ ಕೊಲ್ಲದೆಬಿಡೆ ನಿನ್ನುವನೂ । ಕ್ಷಣ । ದಲ್ಲಿ ಹಯವ ನೊಯ್ದಪೆನೂ ॥೧॥ ಹೋ ಹೋ ಮೆಚ್ಚಿದೆ ನಿನಗೇ । ನೀ । ನೀ ಹಡಿಗೊರಗಿದುದ್ಯಾಕೇ॥ ಸಾಹಸಿಯೆನುತಲಿ ಬಂದೂ । ಮ । ತ್ತಾಹರಿ ಮರಳಿದನಿಂದೂ ॥೨॥ ಹರಿಯನು ಗೆಲಿದಿಹ ವೀರ । ನಿ । ನ್ನರವ ಬಗಿವೆ ಹರಿ ಚೋರ ॥ ಧರೆಗೆ ಕೆಡಹದಿರೆ ನಿನ್ನ । ದಿನ । ಕರನಾತ್ಮಜ ಸುತನೇನಾ ॥೩॥

ರಾಗ ॥ ॥ ಮಟ್ಟೆತಾಳ

ಯೆಲವೊ ತರಳ ಕೇಳು ಹರಿಯ । ಬಲುಹ ಬಲ್ಲೆನೂ । ಲಲನೆ ಯೋರ್ವಳನ್ನು ತರಿದು । ತುಳಿದು ಫಣಿಯನೂ ॥ ಗೆಲುತ ಯೆತ್ತು ಕತ್ತೆಗಳ ಗೋ । ವಳನದೆನ್ನೊಳೂ । ನಿಲಲು ನಡೆವುದೇನೂ ಪೇಳಿ । ನ್ನಳವಿನಿನ್ನೊಳೂ ॥೧॥ ಖಳಕುಲಾಗ್ರಗಣ್ಯ ಕೇಳು । ಮುಳಿದು ದುಷ್ಟರ । ಕೊಳುಗುಳದಲಿ ತರಿದು ಮತ್ತೆ । ಸಲಹಿ ಶಿಷ್ಟರ ॥ ಒಲಿದು ಸತತ ಕಾಯ್ದ ನಿನಗಿ । ನ್ನಳುಕಿ ಪೋಪನೇ । ತಿಳಿಯೆಯಾ ಗೋಪಾಲನವ ನಚ್ಯುತನು ನಿಜವನೇ ॥೨॥ ಯೆನುತ ಕನಲಿಸುರಿಸೆ ಕರ್ಣ । ತನಯ ನಂಬನೂ । ಗಣಿ ಸದದನು ಮಧ್ಯ ಪಥದಿ । ತಣಿಸಿದನುಜನೂ ॥ ಕಿನಿಸಿನಿಂದ ತೆಗೆದು ಕೂರ್ಗಣೆಗಳೆಚ್ಚನೂ । ಕ್ಷಣದಿ ಹರಿಸುತದನು ಬಳಿಕ। ದಿನಪ ಮೊಮ್ಮನೂ ॥೩॥

॥ ವಾರ್ಧಿಕ್ಯ ॥

ತರಣಿನಂದನ ಕರ್ಣ ಕುವರ ವೃಷಕೇಶ ಶರ । ವರುಷಮಂ ಗರೆಯೆ ರಿಪುವ್ರಾತಮಂ ಯೂಥಮಂ । ತರಿದು ಮತ್ತನುಸಾಲ್ವ ದುರುಳನಂ ಧರೆಗೆ ಕೆಡಹಲ್ಕೆ ಕಂಡಾಕ್ಷಣದೊಳುಂ ಸೆರೆವಿಡಿದು ಬಂಧಿಸುತ ಮಣಿ ರಥದೊಳೇ ರಿಸುತ । ಹರಿತಂದು ಹರಿಪದಕೆ ಕೆಡಹಲತಿತೋಷದಿಂ। ಹರಿ ತಾನೆ ತಕ್ಕೈಸಿ ಕೊಂಡಾಡಿ ಮುಂತಾಡಿ ಮನ್ನಿಸಿದ ಕರ್ನಜನನೂ॥೧॥

|| ಕಂದಪದ್ಯ ||

ಧರಣಿಪ ಕೇಳಾ ಸಮಯದಿ । ದುರುಳಗೆ ಧುರಶ್ರಮವಡಗಲ್ಕಣ್ದೆರೆದಾಗಂ || ಪರಿಕಿಸಿ ಚಿನ್ಮಯನ ಮನಮೋ ।ಹನ ಮೂರ್ತಿಯನವನಡಿಗೆರಗುತಲಿಂತೆಂದಂ ||೧||

ರಾಗ || || ತ್ರಿವುಡೆತಾಳ

ಪಾಲಿಸು ದಯದಿ ದೇವ । ಭಕ್ತರ ಕಾವ । ಶೀಲ ನಿನ್ನದು ಕೇಶವ|| ಪಾಲಿಸೊಲಿದು ವಿ ।ಶಾಲ ತ್ರಿಜಗ । ತ್ಪಾಲ ಶ್ರೀ ಗೋ ।ಪಾಲ ಯೆನ್ನನು ||ಪಲ್ಲ|| ಕರುಣ ಸಾಗರನೆ ಮುನ್ನ । ನೀನಾವನೆಂ ।ದರಿಯದೆ ಧುರದಿ ನಿನ್ನ || ಜರೆದೆ ಗರ್ವದೊಳಿದೆ ನಿನಗದು । ಕೊರತೆಯ ಹರಿದೆ ಅಪಾರ ಮಹಿಮಗೆ । ತರ ತರದ ಮಮದುರ್ನುಡಿಯ ನೀ । ಪರಮ ನುಡಿಯೆಂದೆಣಿಸಿ ರಕ್ಷಿಸು ||೧|| ಕರದಿ ಖಂಡೆಯವನಿತ್ತು । ಮೇಣ್ ಫಲವಿತ್ತ । ತೆರದಿ ನಿನ್ನಡಿಗೀಹೊತ್ತು || ಶಿರವ ಚಾಚಿಹೆ ಕೊಲುವ ಕಾಯುವ । ಮೆರೆವ ಭಾರವ ನಿನ್ನದೇ ಸಲೆ । ಮರೆದು ತನ್ನಪ ರಾಧ ಸರ್ವವ । ಪೊರೆಯೆನುತ ಪೊರಳುತಿರೆ ಪಾದದಿ ||೨||

|| ಕಂದಪದ್ಯ ||

ದಾನವ ನಿಂತುಸುರುತಲಿರೆ । ಭಾನುಕುಮಾರಜ ಲಾಲಿಸಿ ಚಿತ್ತದೊಳಾಗಂ || ತಾನತಿ ರೋಷದೊಳಾ ಸಾ ।ಲ್ವಾನುಜ ನನುಸಾಲ್ವನ ಜರೆದವ ನಿಂತೆಂದಂ ||೧||

ರಾಗ || || ಅಷ್ಟತಾಳ

ಮೂಢನಹುದಹುದೋ । ರಾಕ್ಷಸ ಬಲು । ಮೂಢನಹುದ ಹುದೋ || ರೂಢಿಯೊಳಗೆ ಕಡು । ಹೇಡಿ ಖಳಾಧಮ ||ಪಲ್ಲ|| ಹಲವು ನೀತಿಯನರು ಹಿದರೆ ।ಮದ । ದೊಳು ಕುಣಿದಾಡಿದರೆ ಭಳಿರೆ || ಉಳಿಯ ದೆಳ್ಳನಿತೆಡೆ ಹಲನಾಲ ವರ್ಷ ಸಂ ।ಕುಲ ಸುರಿಯಲು ಶಿಲೆಗೇ। ನೀರ್ಗೊಂ ಬುದೇ । ನಿಳೆಯೊಳಾಪರಿ ನಿನಗೇ । ಪೇಳಿದುದಾಯ್ತು ।ಛಲ ವೇಕೆ ಬಲಹೀ ನಗೇ || ರಾಕ್ಷಸ ಬಲು || ಮೂಢನಹುದಹುದೋ ||೧|| ಸದಮಲ ಧರ್ಮದಿರವನೂ ।ತಿಳಿ । ಯದ ಲೋಭಿಯೋ ಲಚ್ಯುತನನೂ|| ಮದದಿಂದ ದೂಷಿಸಿ । ದಧಿಕ ಪೌರುಷವೇನಾ । ಯ್ತದರ ತೋರಿಳೆಯೊಳಿನ್ನು।

ಮೊಸೆಯಹೊತ್ತು । ಬದುಕಿರ್ದ ಫಲಗಳೇನು । ದುರ್ಮತಿವಹಿ ।ಲದಿ ಸುಡುವಡಲ ನೀನು ॥ ರಾಕ್ಷಸ ಬಲು ಮೂಢನಹುದಹುದೋ ॥೨॥

ರಾಗ ॥ ॥ ಅಷ್ಟತಾಳ

ಲಾಲಿಸು ರವಿಸುತ । ಬಾಲಸಂತಸದಿ ॥ ಪೇಳುವನ್ನೈರೋಷ । ತಾಳದಿರ್ದಯದಿ ॥ಪಲ್ಲ॥ ಬಿಡದೆ ಕಾದಾಡಿದು । ರ್ನುಡಿಯ ನಾಡಿದರು ಶ್ರೀ। ಕಡಲಶಯನನನು । ಧೃಡ ಮನದಿಂ ನುತಿ ।ಗೊಡುತ ಭಕ್ತಿ ಯೊಳಿರ್ದರು। ಸಂತತ ಜಗ ।ದೊಡೆಯನಾತನ ಪೆಸರು । ಉಚ್ಚರಿಸಿದ। ರೊಡನೆ ಜೀವಾತ್ಮ ಕರೂ । ಹಲಜನ್ಮದವರು ॥ ತಡೆಯದೆಸಗಿದ ।ಕಡು ದುರಿತವನ । ಸುಡದಿ ಹುದೆ ।ಬಿರು । ನುಡಿಯಿದೇತಕೆ ॥೧॥ ಕಾಳಗವಹುದು ಶೌ ।ರ್ರ್ಯಾಳುಗಳೊಳು ಭಟ । ಜಾಲವನೆರಹಿ ಬಾ । ಣಾಳಿಯಿಂಬಿರಿಸಾಗಿ । ಸೋಲುಗೆಲವದೆಂಬುದೂ। ದೈವಾಧೀನ । ಲೀಲಾ ವಿಚಿತ್ರವದೂ । ವಿಧಿಯಲಿಪಿ । ಭಾಳದೊಳಿರ್ಪುದದೂ। ಶ್ರುತಿಸನ್ಮತವಿದು॥ ಪೇಳಲೇ ನೀರೇಳು ಜಗಶ್ರೀ । ಲೋಲಮಾಯೆಗೆ ಕೋಳುವೋಗದೇ ॥೨॥ ಧುರದಿ ವೀರಾವೇಶ । ವೆರಸಿ ಕಾದಿದೆನೆಂದು । ಜರೆದೆ ಶ್ರೀ ಹರಿಯನಾ।ದರು ಕೃಪಾನಿಧಿಯನ್ನು । ಪೊರೆಯದಿಹನೆಯೆ ನ್ನನೂ । ಸರ್ವೇಶಗೆ । ಕೊರತೆಗಳಿದರಿಂದೇನು । ಸಾಕಿನ್ನದ । ನರುಹಿ ಕಾರ್ಯಂಗಳೇನು । ಯೆಂದೆನುತ ಖಳನು ॥ ಸಿರಿಯರಸನಡಿಗೆರಗಿ ಪುನರಪಿ । ಭರಿತ ಭಕ್ತಿಯೊಳಿರದೆನುತಿಸಿದ ॥೩॥

॥ಭಾಮಿನಿ॥

ಮಾರಪಿತಭವ ದೂರ ಕುಜನ ಕು ।ಠಾರ ಭಕ್ತೋದ್ಧಾರ ಭುವನಾ। ಧಾರ ಕೌಸ್ತುಭಹಾರ ಪಾರಾವಾರ ಗಂಭೀರ ॥ ವಾರಿಜಾಕ್ಷ ಬಲಾರಿನುತ ಕಂ। ಸಾರಿ ನಾಟಕಧಾರಿ ತತ್ವವಿ । ಚಾರಿ ವಿಶ್ವಶರೀರಿನೀ ದಯೆದೋರಿ ಸಲಹೆಂದ ॥೧॥

॥ಕಂದ ಪದ್ಯ॥

ಈ ಪರಿ ನುತಿಸುವ ಖಳನಂ । ಶ್ರೀಪತಿ ಪಿಡೆದೆತ್ತುತಲತಿಕಾರುಣ್ಯ ದೊಳುಂ॥ ತಾಪವಿದೇಕೆನುತಂ ಬಳಿ । ಕಾ ಪೂರ್ವಮರಗೆಂದಂ ಕಿರುನಗೆ ಯಿಂದಂ ॥೧॥

ರಾಗ ||　　　　|| ಏಕತಾಳ

ಕೇಳಯ್ಯದಾನವಾನ್ವಯ ಶಿರೋರನ್ನ । ತಾಳದಿರಯ್ಯ ಶೋಕವ ಬಿಡು ಪೂರ್ಣ || ಭಾಳನೇತ್ರನ ಪಾದಯುಗದಾಣೆ ನಿನ್ನ । ಮೇಲೇನುಮನ ಮುನಿಸಿಲ್ಲ ಸಂಪನ್ನ ||೧|| ಹಿರಿದು ಮೆಚ್ಚಿದೆನಯ್ಯ ನಿನ್ನ ಸಾಹಸಕೆ । ಸರಿ ಭಟರಿಹರೆ ನಿನ್ನೊಳು ಕೊಳುಗುಳಕೇ || ತರಳತನದಿ ಕರ್ಣಸುತಜರೆದು ದನೂ । ತರದಿರು ಮನದಿ ಮುಂದಕೆ ಭಕ್ತ ನೀನು ||೨|| ಆದರೆ ಕೇಳಿಂದು ಮೊದಲಾಗಿ ನೀನು । ಬಾಧಿಸದಮರರ ಯಮಜನೊಳಿನ್ನು|| ಭೇದವಿಲ್ಲದೆ ನಿನ್ನಿಂದಹ ಸಹಾಯವನು । ಸಾದರದಿಂದೆಸಗೆಂದಚಿನ್ಮಯನು ||೩||

||ಕಂದ ಪದ್ಯ||

ಧರಣಿಪಗನುಸಾಲ್ವರ್ಗಂ । ಹರಿತಾಸಖ್ಯವಗೊಳಿಸುತ್ತಿರಲಾಮದನಂ || ದುರುಳರಹರಿಸುತ ಭರದಿಂ । ತುರಗವ ತಂದಯ್ಯಂ ಗೊಪ್ಪಿಸೆ ಮುದವಾಂತಂ ||೧||

||ವಾರ್ಧಿಕ್ಯ||

ಧರಣೇಂದ್ರ ಲಾಲಿಸೈ ಧರ್ಮಜಂ ಬಳಿಕ ಮುರ । ಹರ ಮುಖ್ಯರೊಡನೆ ಪುರಕೈತಂದು ಸಂತಸದೊ । ಳಿರಲು ಹರಿಯಾಜ್ಞೆಯಿಂ ಜಾಹ್ನವಿಯ ತಟದಿಸುಸ್ಥಳದೊಳಧ್ವರಶಾಲೆಯ || ವಿರಚಿಸಲು ಬಳಿಕಾವಸಂತಋತು ತಲೆ ದೋರಿ । ತರುಗುಲ್ಮಲತೆಗಳವು ಚಿಗರಿ ಸುಮ ಫಲವಣ್ಗ। ಳಿರಲು ಪದುಮಗಳಜೇಂಗುಡಿದು ಮಧುಕರಮೆಸೆಯೆ ಖಗಕುಲಂ ನಲಿದಾಡಲು||೧||

ರಾಗ || ಕಾಂಭೋದಿ || ಝಂಪೆ ತಾಳ

ಇಂದುಕುಲ ತಿಲಕ ಕೇ । ಳಿಂದೀವರಾಕ್ಷಯೋ । ಗೀಂದ್ರರಭಿ ಮತದಿಧರ್ಮಜನೂ || ಬಂಧುಮಿತ್ರರ ಕೂಡು । ತಂದುಮಖ ಶಾಲೆ ಯೆಡೆ। ಬಂದು ದೀಕ್ಷೆಯನು ಕೈಗೊಂಡ ||೧|| ಸುಕ್ಷೇಮಪ್ರದಕಾಗಿತ್ರ್ಯ ಕ್ಷಸುತನಿಂಗೆ ರಗಿ । ಲಕ್ಷಣದವಾಜಿಯನು ನಿಲಿಸಿ । ದಕ್ಷತೆಯೊಳರ್ಚಿಸುತ। ಲಕ್ಷತೆಯನಿಟ್ಟು ಮತ್ತಾಕ್ಷಣದಿ ಶೃಂಗಾರಗೈಸಿ ||೨|| ಬಿರುದಾವಳಿಯ ಲಿಖಿತ। ಭರದಿ ಬಂಧಿಸಿ ಪಣೆಗೆ । ನರನದರ ರಕ್ಷೆಗೆಂದೆನುತ || ವರುಷದೊಳು ಬಹುದೆನು । ತ್ತರು ಹತಸಿ ಪತ್ರವ್ರತವಿರದೆ ತೊಡಗಿದನು ಧರಣಿಪನೂ||೩||

ನರನು ಹಯರಕ್ಷಗೊಂಡಿರದಿ ಛಮಖಾರ್ಚನೆಯ । ವರನವಗ್ರಹ ಪೂಜೆಗೈದು॥ ಸಿರಿವರನಿಗೆರಗಿ ಧರ್ಮಜ ಭೀಮ ಕುಂತಿ । ಋಷಿ । ವರರೊಳಾಶೀರ್ವಾದ ಪಡೆದು ॥೪॥

॥ ವಾರ್ಧಿಕ್ಯ ॥

ಚೈತ್ರ ಸಿತಪೌರ್ಣಮಾಸಿಯ ದಿನದಿ ಶುಭಸುಮೂ । ಹೂರ್ತದೊಳಗರಸಿಯರ ಸೇಸೆಯಂ ಕೈಗೊಂಡು । ಮತ್ತೆ ಪಾಠಕರ ಜಯಘೋಷ ದುಂದುಭಿ ಭೇರಿ ವಾದ್ಯಗಳ ರಭಸದಿಂದ ॥ ಸತ್ವಯುತನರನು ಹರಿಯಾಜ್ಞೆಯಿಂ ಸೇನಾಧಿ। ಪತ್ಯವಂ ಪ್ರದ್ಯುಮ್ನಗಿತ್ತು ವೃಷಕೇತು ಸಹ । ಸಾತ್ಯಕಿಯು ಕೃತವರ್ಮ ನನುಸಾಲ್ವರೊಡಗೂಡಿ ಬಲವೆರಸಿ ಪೊರ ಮಟ್ಟನೂ ॥೧॥

ರಾಗ ॥ ॥ ಮಟ್ಟೆತಾಳ

ಧರಣಿಪಾಲ ಕೇಳು ಮುದದೊಳು । ಪಾರ್ಥನಂದು । ಪೊರಟು ಸೇನೆಯ ಸಹಿತ ಭರದೊಳು ॥ ಮೆರೆವತೆಂಕು ದೇಶದವ ನಿ । ಯರಸರಿಂದ ಕಪ್ಪಗೊಳುತ । ಬರಲು ಮಾಹೀಷ್ಮತಿಯ ಪುರದಿ । ತುರಗ ಪೊಕ್ಕುದು ಪವನವನು ॥೧॥ ಪರಿಕಿಸುತ್ತ ಶ್ವೇತವಾಹನ । ಬೀಡಿಗೆಯನಲ್ಲೆ । ವಿರಚಿಸುತ್ತ ನಿಂದನಾಕ್ಷಣ ॥ ನರನ ಪಡೆಯದೂರ್ಮಿ ಪೆರ್ಚಿ । ಮೊರೆವ ಮಹಾರ್ಣವ ತೆರದಿ । ಭರಿತ ಘೋಷದಿಂದಲಿರಲು । ಹರಿಯ ದಯದೊಳೇನನೆಂಬೆ ॥೨॥

ರಾಗ ॥ ಕಾಂಭೋದಿ ॥ ಝಂಪೆತಾಳ

ಶಶಿಕುಲಲಲಾಮ ಸಂ । ತಸದಿ ಕೇಳಾಪುರದೊ । ಳೆಸೆವ ಮಲ ಸಿರಿಯ ವರ್ಣಿಸಲೂ ॥ ದ್ವಿಸಹಸ್ರ ಸನನಿಂ । ಗಸದಳವ ದಾದೊಡಿ । ನ್ನುಸುರು ವೆನು ಸಂಕ್ಷೇಪವಾಗಿ ॥೧॥ ಪುರದಹರ್ಮ್ಯಾಗ್ರಗಳೊ । ಳಿರುವ ಚಪಲಾಕ್ಷಿ ಯರು । ಸರಸವಾಡುತಲಿ ನಸುನಗಲೂ ॥ ವರದಂತ ಕಾಂತಿಮಾತ್ತಿರದೆ ಪರ್ಬಿದುದೆಂಬ। ತೆರದಿರಂಜಿಪುದು ಪ್ರಾಕಾರ ॥೨॥ ನಗರವಧ ಧರೆಯವಿಟ। ರುಗಳ ಚಿತ್ತವ ಸೂರೆ । ದೆಗೆಯಲೆಂದೆನುತ ಶೃಂಗರಿಸಿ ॥ ಮಿಗೆಶಿರದಿ ಮುಡಿದ ಸಂ । ಪಿಗೆಯ ಮುಕುಳಂ ಗಳೆನೆ । ಸೊಗಯಿಪವುರನ್ನ ಕಲಶಗಳು ॥೩॥ ಧರೆಯಜನರೆನ್ನ ಸುಂ । ದರಕೆ ಸರಿಯಿಲ್ಲೆನುತ । ಪುರವನಿತೆ ಸುರಪುರದ ವಿಟರ ॥ ಕರೆದಪಳೊ ಯೆಂಬಂತೆ । ಮೆರೆದಿಹ ದುಡೆಂ ಕಣಿಯ । ಕರಗಳಚ್ಚರಿಯ ಕರಮಾಗಿ॥೪॥ ಕುಂದಾದು ದಿಂಗಡಲಿ। ಗೊಂದುಜಡಧಿಯೆನುತ್ತ । ಲಿಂದಿರೆಯು ಪಾಲ್ಗಡಲ

ಬಿಟ್ಟು ॥ ಚಂದದಿಂದಾಪುರದಿ । ಬಂದು ನೆಲಸಿ ಹಳೊಯೆಂ । ಬಂದಂದಿಂ ಸಿರಿಯು ಪೆರ್ಚಿಹುದು ॥೫॥

॥ ಭಾಮಿನಿ ॥

ವಸುಧೆ ಪತಿ ಕೇಳಬ್ಜ ಭವನಿ । ರ್ಮಿಸಿದ ಸೃಷ್ಟಿಗೆ ಶಿರವಿದೆನಲೀ। ಕ್ಷಿಸುವ ರಕ್ಷಿಗೆ ನಿರತವತ್ಯಾಶ್ಚರ್ಯಕರ ಮಾಗಿ ॥ ಮಿಸುನಿಭಿತ್ತಿಗಳಿಂದ ಮಿಗೆ ಶೋ । ಭಿಸುವ ನಗರದ ಸಿರಿಯ ಕಾಣುತ । ಬಿಸಜ ಸಖಿನ ಕುಮಾರ ಸುತಗಿಂತೆಂದ ಫಲುಗುಣನು ॥೧॥

ರಾಗ ॥ ॥ ಅಷ್ಟತಾಳ

ಕಂದ ಕೇಳತಿ ಸೊಗ । ಸಿಂದ ಮೆರೆವ ಪುರ । ದಂದವಂತಿರಲು॥ ಇಂದಿದ ಪೊರೆವವ । ಸುಂಧರಾಧಿಪ ಶೌರ್ಯ ।ದಿಂದ ಕೂಡಿಹನೆ ಪೇಳು ॥೧॥ ಕಟ್ಟದಿಹನೆ ನಮ್ಮ ।ಶ್ರೇಷ್ಟ ಹಯವನತಿ । ದಿಟ್ಟತೆಯಿಂದ ತಾನು॥ ಕೊಟ್ಟ ಕಾಳಗವೆಮ್ಮೊ ।ಳೆಷ್ಟು ಕಾದುವನೊತ । ನ್ನೊಟ್ಟಿನ ಸೇನೆಗೂಡಿ ॥೨॥ ಎಂತಾದಡೇನೆಮ್ಮ । ಸಂತತ ಸಲಹುವ ।ಕಂತುಜನಕ ನೆನುತ ॥ ಮುಂತೆಸೆಯುವ ಸೇನಾ । ತಿಂಥಿಣಿ ಸಹಿತಿರ್ದ । ಸಂತಸದಿಂ ಪಾರ್ಥನೂ॥೩॥

॥ ವಾರ್ಧಿಕ್ಯ ॥

ಚಿತ್ತವಿಪುದೆಲೆ ಮಹೀಪಾಲ ಮಾಹೀಷ್ಮತಿಯ ಪತ್ತನವ ಮುದದೊಳಾಳುತ್ತ ನೀಲಧ್ವಜಂ । ಪತ್ನಿಯಾಗಿ ಹಜ್ವಾಲೆಸುತ ಪ್ರವೀರಂ ಸಹಿತ ಸಕಲ ಸೌಭಾಗ್ಯದಿಂದ ॥ ಪುತ್ರಿ ಸ್ವಾಹಾದೇವಿಯಂ ಬಳಿಕಲಾವೀತ್ರಿ । ಹೋತ್ರಗೊಲಿದಿತ್ತಾತನಂ ಮನೆಯಳಿಯ ನೆನಿಸಿ । ಮತ್ತೆ ತಾನಾತನ ಸಹಾಯದಿಂದಾರನುಂ ಬಗೆಗೊಳದೆ ಮೆರೆದಿರ್ದನೂ ॥೧॥

ರಾಗ ॥ ಮಧ್ಯಮಾವತಿ ॥ ತ್ರಿವುಡೆತಾಳ

ಪೃಥ್ವಿಪಾಲಕ ನೀ ಪರಿಯೊಳಿರೆ । ಪುತ್ರನಾದ ಪ್ರವೀರನೂ ॥ ಪತ್ನಿ ಸ್ಮರಮಂಜರಿಯೊಡನೆ ಸಖಿ । ಮೊತ್ತದಿಂದು ದ್ಯಾನಕೇ ॥ ಬಂದನಾಗ ॥೧॥ ಬರುತ ದಿವ್ಯಾಂಬರಗಳನುತೆಗೆ । ದಿರಿಸಿಕೊಳ ನೊಳಗಿಳಿಯುತ ॥ ವಿರಚಿಸುತ ಜಲ ಕೇಳಿಯನು ನೃಪ । ತರಳ ನಿರ್ದನು ಗುಣಯುತ । ಸರಸದಿಂದ ॥೨॥ ರಾಜಿಸುವಗೆಳತಿಯರು ಸಹಯುವ । ರಾಜನ ರಸಿಯು ಮುದದಲಿ ॥ ರಾಜಿಸುವ ಪೂದೋಟದಲಿ ಸುಮ । ರಾಜಿಯನು ಕೊಯ್ಯುತ್ತಲಿ ॥ ನೋಡಿಹಯವ ॥೩॥

॥ ಭಾಮಿನಿ ॥

ರಂಜಿಸುವ ತುರಗವನು ಮನ್ಮಥ । ಮಂಜರಿಯು ಕಾಣುತ್ತ
ಮನ ದೊಳ । ಗಂಜದತಿ ಧೈರ್ಯದಲಿ ಸಖಿಯರ ಕೂಡು ತಾಕ್ಷಣದಿ ॥
ತಾಂಜವದಿ ಪಿಡಿದದರಪಣೆಯೊಳ್ । ಮಂಜಳಾಕ್ಷರವೆಸೆವ ಲಿಖಿತವ ।
ಕಂಜಲೋಚನೆತೆಗೆದು ತಾನೋದಿದಳು ಸಂಭ್ರಮದಿ ॥೧॥

ರಾಗ ॥ ಕಾಂಭೋದಿ ॥ ಝಂಪೆತಾಳ

ಶ್ರೀಮತ್ಸುಧಾಂಶುಕುಲ । ಭೂಮೀಶರೆಂಬರ ಶಿ । ಖಾಮಣಿ
ಯುಧಿಷ್ಟಿರ ನೃಪಾಲ ॥ ಪ್ರೇಮದಿಂದಶ್ವಮೇ । ಧ ಮಹಾಧ್ವರಗೈವ ।
ಶ್ರೀ ಮನೋಹರನ ನಿಜಭಕ್ತ ॥೧॥ ಧರೆಯ ಭೂಪರಗೆಲಿದು ।
ಕರವಗೊಳಲಾಗಿ ಶ್ರೀ । ಹರಿಯನುಜ್ಞೆಯೊಳಗಶ್ವವನೂ ॥ ತ್ವರಿತದಿಂಬಿಟ್ಟಿಹುದು
ಕಟ್ಟಿಕಾದುವುದು ಸಂ । ಗರವೀರರಾದಡಿದ ಭರದಿ ॥೨॥ ಹರಿಯರಕ್ಷೆಗೆಪಾರ್ಥ।
ನಿರುವನವನೊಳು ಕಾದ । ಲರಿಯದವನಿಪರು ಶರಣಾಗಿ ॥ ತೆರುತಕಪ್ಪ
ವನುತಾ । ವಿರುವದೊಟ್ಟಿನೊಳೆಂದು । ಬರೆದಿಹುದತಿಳಿದು ಚಪಲಾಕ್ಷಿ॥೩॥

॥ ಕಂದ ಪದ್ಯ ॥

ನಸುನಗುತತಿಜವದಿಂ ಬಂ । ದುಸುರಲ್ಕೀಹದನವನರಿತಾಗಪ್ರ
ವೀರಂ ॥ ಅಸಮಬಲಾನ್ವಿತ ತಾರ್ಘೋಂ । ಕಿಸುತೆದ್ದಿಂತೆಂದಂ ಸತಿಯೋಳ್ಪೌರು
ಷಮಂ ॥೧॥

ರಾಗ ॥ ಭೈರವಿ ॥ ಅಷ್ಟತಾಳ

ಭಳಿರೆ ಧರ್ಮಾತ್ಮಜಾತ । ತನ್ನಲಿಹರಿ । ಯೊಲುಮೆ ಹೆಚ್ಚಿಹುದೆನುತ॥
ಬಲುಗರ್ವದಿಂ ತನ್ನ । ಗ್ಗಳಿಕೆಯ ಬರೆದಿಹ । ತಿಳಿಯದೆ ಮೂಢಾತ್ಮನು
॥೧॥ ಮನಿದರೆ ತ್ರಿಭುವನವ । ಲೆಕ್ಕಿಸದೊಂದು । ಕ್ಷಣದಿಭಸ್ಮವನು
ಗೈವ ॥ ಘನಪರಾಕ್ರಮಿ ವಹ್ನಿ । ಜನಕಗೆ ಜಾಮಾತ । ನೆನಿಸಿರೆಬರೆವುದುಂಟೆ
॥೨॥ ಜನಿಸಿಕ್ಷತ್ರಿಯಕುಲದಿ । ಮೇಣೀವಾಜಿ । ಯನು ಕಟ್ಟದಿರೆಜಗದಿ ॥
ತನುವಿರ್ದುಫಲವೇನು । ರಣಕಂಜಿಕಪ್ಪವ । ನನಿತನುಕೊಡುವುದುಂಟೆ
॥೩॥ ಹರಿಹರರೊಳುಧುರದಿ । ಕಾದಿದಪಾರ್ಥ । ನುರುವಿಕ್ರಮವ ಯುದ್ಧದಿ॥
ಪರಿಕಿಸಿದಪೆನೆಂದು । ಪುರಕಟ್ಟದನುಸತಿ । ಯರ ಸಹಿತಶ್ವವನೂ ॥೪॥

॥ ಭಾಮಿನಿ ॥

ಧುರಪರಾಕ್ರಮಿಯಹ ಪ್ರವೀರನು । ತುರಗವನುತಾ ನಟ್ಟುತಲಿ ಧ'ನು। ಶರಗಳನು ಕೈಗೊಂಡು ರಣಕುದ್ಯುಕ್ತನಾಗಿರಲು ॥ ಅರಸ ಕೇಳೀಚೆಯೊಳು ಹರಿವಿ । ಷ್ಟರದಿ ಕುಳಿತಿಹನೀತಕೇತನ । ಚರಣ ಕಾನತರಾಗಿ ಬಿನ್ನೈಸಿದರು ನಾರಿಯರೂ ॥೧॥

ರಾಗ ॥ ॥ ಅಷ್ಟತಾಳ

ಧರಣೀಶ ಕೇಳೆಮ್ಮ ನುಡಿಯಾ ।ತವ । ತರಳನಿಂದಾತನರಸಿಯಾ । ಬೆರೆದುದ್ಯಾನದೊಳಲ್ಲಿ । ಶರಕೇಳಿಯನುಗೈದು । ಸರಸದಿಸುಮವಗ್ರೊ । ದಿರಲು ಬಂತೊಂದಶ್ವ ॥೧॥ ಮದನಮಂಜರಿ ಪರಿಕಿಸುತ । ನಲ್ಲ । ಗದನೀಯೆ ಲಿಖಿತ ವಾಚಿಸುತ ॥ ಕದನ ಸಿದ್ಧತೆಯಿಂದ । ಕುದುರೆಯ ನಟ್ಟಿದನಿಲ್ಲಿ । ಹದನ ವಿದಿನಿತು ನೀ । ನೊದಗಿ ಪೋಗೈಜೀಯಾ ॥೨॥

॥ ಕಂದಪದ್ಯ ॥

ದೂತಿಯರೆಂದುದನಾಲಿಸಿ । ಭೂತಳದಧಿಪಂ ಭರದಿಂ ತಾ ಗರ್ಜಿ ಸುತಂ ॥ ಖಾತಿಯ ತಾಳುತ ಮಂತ್ರಿಯೊ ।ಳೀತೆರನೆಂದಂ ಗದ್ದುಗೆಯಂ ಹೊಯ್ಯುತ್ತಂ ॥೧॥

ರಾಗ ॥ ಭೈರವಿ ॥ ಏಕತಾಳ

ಮಂತ್ರೀಶನೆ ಕೇಳಿತ್ತ ।ಭೂ । ಕಾತನೆನಿಪಯಮ ಪುತ್ರ ॥ ಯೆಂತೀ ಪತ್ರವ ಬರೆದ ।ತ ।ನ್ನಂತರವರಿಯದೆ ಬರಿದ ॥೧॥ ಧರೆಯಧಿಪರ ಕುಲತಿಲಕ ।ಶ್ರೀ । ವರನಾತನ ನಿಜ ಭಕ್ತ ॥ ಬಿರಿದಾಂತಿಹೆ ತಾನೆಂಬ । ಅತಿ। ಗರುವದ ನುಡಿಕಾಂಬ ॥೨॥ ಪೃಥ್ವೀಶರು ಮತ್ತಿರರೇ । ಪುರು । ಷೋತ್ತಮನನು ಧ್ಯಾನಿಸರೇ ॥ ಕ್ಷತ್ರಿಯ ಕುಲದೊಳು ಜನಿಸಿ ।ಕರ। ತೆತ್ತು ಬಾಳುವುದೆ ಸಹಿಸಿ ॥೩॥ ದುರಿತ ಹರನು ತಾನೆನಿಸಿ ।ಶ್ರೀ । ವರನಿರಲೀಪರಿ ಬರೆಸಿ ॥ ತುರಗವ ಬಿಟ್ಟಿಹರಲ್ಲ । ಸಂ ।ಗರವನು ಕೈಕೊಂಬರಲಾ ॥೪॥ ಪರಿಕಿಪೆ ನರನಾಳ್ತನವ ।ಹರಿ । ಹರರೊಳುತೋರ್ದ ವಿಕ್ರಮವ ॥ ಧುರಕಣದೊಳು ಕೇಳಿನ್ನು । ನೀ ತ್ವರಿತದಿ ಹ್ಯೊಸು ಭೇರಿಯನು ॥೫॥

॥ ವಾರ್ಧಿಕ್ಯ ॥

ತರಿಸಿ ಮಖಹಯವನದ ಬಂಧಿಸುತ ಲಾಯದೋಳ್ । ಭರದಿ ಸೇನಾವೃಂದಮಂ ಕೂಡಿ ಧನುಶರವ । ಧರಿಸಿ ಪೊಸಮಣಿ ರಥವೇರಿ ನಡೆತಂದನತಿ ವಹಿಲದಿಂ ನೀಲಕೇತನಂದೂ ॥ ಧರಣಿಪತಿ ಬರುತಿರಲ್ಕತ್ತ

ಹಯ ಕಾಹಿನವ । ರಿರದೆ ಬಂದರ್ಜುನಗೆ ಕರವನು ಮುಗಿದಾಕ್ಷಣದಿ । ಭರಿತ ಕಂಪನದಿಂದ ಪೇಳಿದರು ವಿಸ್ತಾತಾರಮಾಗಿ ಪರಿಗಳನೆಲ್ಲವ ॥೧॥

ರಾಗ ॥ ॥ ಏಕತಾಳ

ಪುರುಹೂತ ತನಯಲಾಲಿಸಯ್ಯ ।ನಾವೆಂಬ ಪರಿಯ । ಧುರಕನುವಾಗು ಬೇಗಜೀಯ ॥ ತುರಗದೊಡನೆನಾ ।ವಿರಲಾಯೆಡೆ ಬಹು। ತರುಣಿಯರೆರ ಕದಿ। ಬರೆನೃಪ ಕುವರಾ ॥೧॥ ತ್ವರಿತದಿಹಯವ ಪರಿಕಿಸಿದನೂ । ಬಂಧಿಸಿ ಲಿಖಿತ । ವರಿತು ರೋಷವಗೊಂಡು ತಾನೂ। ಭರದಿಂದದನಿಜ । ತರಳೆಯರನು ಸಹ । ಪುರಕಟ್ಟುತ ಸಂ ।ಗರಕನುವಾಗಿಹ ॥೨॥

॥ ಕಂದಪದ್ಯ ॥

ಈ ತೆರನಂದುದನಾ ಪುರು । ಹೂತಸುತಂ ತಾನಾಲಿಸುತತಿ ತವಕದೊಳಂ ॥ ಖ್ಯಾತಮದನ ಸಾತ್ಯಕಿ ವೃಷ । ಕೇತಸುವೇಗನು ಸಾಲ್ವರ ಕರೆದಿಂತೆಂದಂ ॥೧॥

ರಾಗ ॥ ॥ ಮಟ್ಟೆತಾಳ

ವೀರಕರ್ಣಜಾನುಸಾಲ್ವ । ಮಾರ ಮುಖ್ಯರುಗಳು ಕೇಳಿ । ಶೂರ ತನವದೋರ್ವ ಸಮಯ । ಸಾರಿಬಂದಿದೇ ॥ ಧಾರಿಣೇಶನೀತನಮ್ಮ । ವಾರು ಹವನು ಕಟ್ಟಿರಣಕೆ । ಮೀರಿ ಬಂದನಂತೆ ಗರ್ವ । ವೇರಿನಮ್ಮೊಳು ॥೧॥ ಕೊಳುಗುಳದೊಳವನ ಸತ್ವ । ವಿಳಿಸಿ ಹರಿಯ ತಹುದೆನುತ್ತ । ತಿಳುಹೆ ನರನ ನುಡಿಯ ನರಿದು । ಚಳಕದಿಂದಲಿ ॥ ಹೊಳೆವ ಕಣೆಯ ಗೊಂಡು ಬಲ್ಲ । ನೆಳೆದು ವೈರಿನಿವಹ ಮಧ್ಯೆ । ಸುಳಿಯೆ ಕಾಣುತಾ ಪ್ರವೀರ ।ಮುಳಿಯಲೆಂದನೂ ॥೨॥

ರಾಗ ॥ ಭೈರವಿ ॥ ಅಷ್ಟತಾಳ

ಘಡಘಡರಿಪು ಭಟನೇ । ನಮ್ಮಶ್ವವ । ಬಿಡು ಕೆಡದಿರು ಸುಮ್ಮನೇ॥ ಚಡವೇಕೆ ನಿನ್ನನು । ಪಡೆದವನಾರೆಂದು । ನುಡಿವುದೆಂದನು ಸ್ಮರನೂ ॥೧॥ ಮೂಢನೀಲಾಲಿಸಿತ್ತ । ಮಾಹೀಷ್ಮತಿ । ರೂಢಿಯಧಿಪನೆನ್ನತಾತ । ಗಾಢವಿಕ್ರಮಿಯಹ ।ನೋಡು ನೀಲಧ್ವಜ । ನಾಡಲೇಂಬಿಡೆ ಹಯವ ॥೨॥ ಯೆಲವೊ ನೃಪಾಲ ಸೂನು ।ನೀ ನೆಮ್ಮಯ । ನೆಲೆಯರಿಯದೆ

ಬಂದಿನ್ನು ॥ ಕಲಹದಿ ನಿನ್ನಯ ॥ ತಲೆಯ ಗೊಡುವೆ ಯಾಕೆ । ಛಲ ಬೇಡ ಸಾರಿದೆನೂ ॥೩॥ ಕದಳಿಯ ಮುರಿದೆನೆಂದೂ । ಗರ್ವದಿ ಕರಿ । ಯ ಧಟಹರಿಯೊಳು ತೋರ್ದು ॥ ಬದುಕಿ ಪೋಪುದೆ ನಿನ್ನ । ಸದೆದು ಶಾಕಿನಿ ಗೀವೆ । ರುಧಿರವನೆನು ತೆಚ್ಚನು ॥೪॥

॥ ಭಾಮಿನಿ ॥

ಕ್ಷೋಣಿಪತಿಕೇಳಾ ಪ್ರವೀರನ । ಬಾಣದಿರಿತದಿತನು ಬಳಲಿ ಸುಮ। ಬಾಣ ಮೈಮರೆಯಲ್ಕೆ ಸೂತದ ರೂಥವನುತಿರುಹೇ ॥ ಕಾಣುತುಗ್ರನೊಲಾ ವೃಷಧ್ವಜ । ತಾನಧಿಕ ರೋಷದಲಿ ನಡೆತಂ । ದಾನರಾಧಿಪ ನನುಗ ನೊಡನಿಂತೆಂದ ಪೌರುಷದಿ ॥೧॥

ರಾಗ ॥ ಮಾರವಿ ॥ ಏಕತಾಳ

ಕದನಾಗ್ರಣಿ ನೀ । ನಿದಿರಾಗೆಲೊ ನಿಲು । ಮದನನ ಸೋಲಿಸಿದ॥ ಅಧಿಕ ತರದ ಗ । ರ್ವದಿನಿಂದಿರೆ ಬಿಡೆ । ನಿದುದಿಟ ನೋಡೆಂದ ॥೧॥ ಕರಕೌಶಲಗಳ । ನರಿಯದವರು ಸಂ । ಗರಕಿದಿರಾಗುವರೆ ॥ ಧೊರೆ ನೀಲಧ್ವಜ। ತರಳ ಪ್ರವೀರನೊ । ಳೊರೆಯದಿರ್ದೈ ಬರಿದೆ ॥೨॥ ದಿನಕರ ನಂದನ । ನಣುಗ ವೃಷಧ್ವಜ । ನೆನಿಸುವೆರಿಪುವೆನಿಪ ॥ ಮನಸಿಜ ಗಾನೆ ವೃಷಧ್ವಜನ ಹೆನ್ನೈ । ಗಣಿಪೆನೆ ತವದರ್ಪ ॥೩॥ ರವಿ ಮೊಮ್ಮನೆ ನೀ । ನವನಿಯೊಳಿರೆ ವಿಹಿ । ತವೆ ಪಿರಿಯವರಿರುವಂಭವನ ಕೊಡನೆ । ಪೋ। ಗುವ ಮನವಿ ರ್ಪುದೆ । ಬವರದಿ ತೊರೆದಸುವ ॥೪॥ ತುರಗವ ಬಿಡದಿರೆ । ತರಿದು ನಿನ್ನ ಹಿರಿ । ಯರ ಸಹಿ ತೀಕ್ಷ್ಣದಿ ॥ ತೆರಳಿಸುವೆನು ನೋ । ಡರೆ ನಿಮಿಷದೊ ಳೆನು । ತಿರದೆಚ್ಚನು ಶರವ ॥೫॥

ರಾಗ ॥ ಘಂಟಾರವ ॥ ಅಷ್ಟತಾಳ

ಭಳಿರೆ ಸಾಹಸಿ ಕಣೆಗಳ ನೆಚ್ಚು । ಫಲವಿಹುದೆ ಯೆನು । ತಲಿ ಪ್ರವೀರನು । ಮುಳಿದುತಾ ಮುರಿದಿಟ್ಟನು ॥೧॥ ಆತುಕೋನೀ ನಿನ್ನಾದಡೆನುತ ವೃಷ । ಕೇತು ಮುಸುಕಲು ತರಳ ತತಿಗಳ । ನಾತತೂಕ್ಷ್ಣ ಖಂಡಿಸೇ॥೨॥

॥ ಭಾಮಿನಿ ॥

ವೀರತನದಿ ಪ್ರವೀರ ಕರ್ಣ ಕು । ಮಾರರೀರ್ವರು ಖತಿವಿಡಿದು ಕೈಮೊರಿ ನಿಶಿತ ಶರೌಘಗಳ ನವರೋರ್ವರೋರ್ವರ್ಗೆ ॥ ಸೇರಿಸುತಲಿರೆ

ಬಳಿಕಕರ್ಣಕು । ಮಾರಕನ ಪಿಂದಿಕ್ಕಿ ಮುಂದಕೆ । ಸಾರುತಡಹಾಯ್ದೆಂದ ನನುಸಾಲ್ವಕ ಪ್ರವೀರನೊಳು ॥೧॥

ರಾಗ ॥ ॥ ಮಟ್ಟೆತಾಳ

ಭಳಿರೆ ವೈರಿ ಸುಭಟನಿಲ್ಲೆಲಾ । ಸಂಗರಕೆಯೆನ್ನೊ । ಳಳುಕಬೇಡ ಸದರವಲ್ಲೆಲಾ ॥ಪಲ್ಲ॥ ಮೊದಲೆ ಮನುಜ ನೀ ನಿನ್ನದರೊಳು । ತರಳನಾಗಿ। ಕದನವೆಸಗಲಹುದೆ ಭರದೊಳು ॥ ಮದನ ಮುಖ್ಯರನ್ನು ಕೊಳಗು ।ಳದಲಿ ಗೆಲಿದ ಗರ್ವ ವಿಳಿಸಿ । ಕುದುರೆಯನ್ನು ಬಿಡಿಸಿ ನರನ। ಪದಕೊಪ್ಪಿಸುವೆ ಕೇಳು ಕ್ಷಣದಿ ॥೧॥ ದುರುಳಗಳಹ ಬೇಡಸುಮ್ಮನೇ । ಕಾಳಗದಿ ನಿನ್ನ ।ಕೊರಳನರಿದು ಮೆರೆಯದಿರುವೆನೇ ॥ ತುರಗವನ್ನು ಬಿಡುವನಲ್ಲ । ಬರಿದೆ ಸಾಯ ಬೇಡ ಜೋಕೆ ।ತೆರಳು ಪಂಚ ಬಾಣಗಾದ। ಪರಿಯನರಿತುಶೀಘ್ರದಿಂದ ॥೨॥ ಬಾಲನೀನೆನುತ್ತ ಸಾರಿದೇ । ಮುಂದಿನ್ನು ಬಿಡೆನು । ತೋಳ ಸತ್ವದೋರದಾಹುದೇ ॥ಕೀಲಿಸುವೆ ಶರೌಘವಿದನು । ತಾಳಿ ಕೊಂಬುದೆನು ತಲಸ್ತ । ಜಾಲವನ್ನು ಸುರಿಸಲಾ ಭೂ ।ಪಾಲನಣುಗ ಸಹಿಸದಾದ ॥೩॥

॥ ಭಾಮಿನಿ ॥

ಜನಪ ಕೇಳನು ಸಾಲ್ವನಸ್ತ್ರದಿ । ತನು ಬಳಲಿ ಬಳಿಕಾ ಪ್ರವೀರನು। ಮಣಿರಥದಿ ಮೈಮರೆಯಲರಿ ವಾಹಿನಿಯ ತರಿತರಿದೂ ॥ ದನುಜ ಮುಂದೈ ತರಲು ಕಾಣುತ । ಲನಿತರೊಳು ನೃಪ ನೀಲಕೇತನು । ಘನತರದ ರೋಷದಲಿ ದೈತ್ಯಾಗ್ರಣಿಯ ತಡೆದೆಂದ ॥೧॥

ರಾಗ ॥ ಕಾಂಭೋದಿ ॥ ಝಂಪೆತಾಳ

ಯೋಲವೊ ದಾನವನೆಮ್ಮ । ಬಲವನೆಲ್ಲವನೀ । ಗೆಲಿದು ಬಾಲಕನ ಮೂರ್ಛಿಸಿದ ॥ ಬಲವನೆಲ್ಲವ । ನೆನ್ನೊಳು ತೋರು । ಕಲಹದೊಳು ನಾನಿನ್ನ । ತಲೆಯ ಚೆಂಡಾಡುವೆನು ಕ್ಷಣದಿ ॥೧॥ ಮಾನವನೆ ಕೇಳು ನೀ। ದಾನವರಿಗೆಂತ ಹಸ । ಮಾನರೇ ನರರು ಬಿಡುನಿನ್ನ ॥ತ್ರಾಣ ಸಲ್ಲದು ಹಯವ । ನೀನೆ ತಂದಿತ್ತೊಡನೆ । ಕಾಣಿಕೆಯನೆಸಗಿದರೆ ಲೇಸು ॥೨॥ ದುರುಳ ಕೇಳೆಲವೊ ಸಂ ।ಗರಕಂಜಿಕಪ್ಪವನು । ತುರಗ ಸಹ ತೆರುವಡಾ ನರಗೆ ॥ ಪರಿಕಿಸಲು ನಿನ್ನಂತೆ ।ಬರಿಯ ಹೇಡಿಗಳಲ್ಲ । ಧುರಧೀರರಾವು

ನೋಡೆಂದ ॥೩॥ ಮರಳು ಭೂಪಾಲ ನೀ । ಧುರಧೀರನಾದೊಡೀ । ಸರಳ ಸವಿಗೊಂಬುದೆನು ತಂದೂ ॥ ಸುರಿಸೆ ಖಳನಸ್ತ್ರವನು । ತರಿದು ನಿಮಿಷಾರ್ಧದೊಳು । ಧರೆಗೆ ಕೆಡಹಿದನು ದಾನವನಾ ॥೪॥

॥ ವಾರ್ಧಿಕ್ಯ ॥

ಇಳೆಯಧಿಪ ಲಾಲಿಸೈಬಳಿಕ । ನೀಲಧ್ವಜ ಫಲುಗುಣ ನಮದಕರಿ ಯಂತೆ ಪೊಕ್ಕುಕೋ । ಲ್ಗಳನೆಚ್ಚುಸವರಿ ಬೆಟ್ಟದೊಲೊಟ್ಟುತಿರೆ ಕಂಡು ಕಿಡಿ ಯುಗುಳುತಾಕ್ಷಣದೊಳು ॥ ಕಲಿಪಾರ್ಥನಾಹವಸಮರ್ಥ ಗಾಂಡೀವ ಮಂ । ಸೆಳೆದಸ್ತ್ರಮಂ ತುಜುಕಿ ಝೇಂಕರಿಸಿ ಹೂಂಕರಿಸು । ತಲಿಭರದಿ ಸಾಗುತಂ ತಾಗುತಂ ನೃಪನೀಲಕೇತನೊಡನಿಂತೆಂದನು ॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ನಿಲ್ಲೆಲವೊ ಮಾಹೀಷ್ಮತೀಪುರ । ವಲ್ಲಭನೆ ಕೇಳುತ್ತ ಕೊಳುಗುಳ। ದಲ್ಲಿ ನಮ್ಮಯ ಬಲವರಿದ ಬಲು । ಹಿಲ್ಲಿತೋರು ॥೧॥ ಸಾಕೆಲವೊ ಗಳಹದಿರು ಸುಮ್ಮನೆ । ಪಾಕಶಾಸನ ಸುತನೆ ನಿನ್ನನು । ನಾಕಳುಹಿದಪೆ ಶರಮುಖ ದೊಳಾ । ನಾಕಕಿನ್ನು ॥೨॥ ಜಡಮತಿಯೆ ಸಾರಿದೆನು ಬೇಗನೆ। ಬಿಡು ಹಯವ ಕಪ್ಪವನುಸಹ ಕೊಡು । ಕೊಡದಿರಲು ರಣದೇವಿಗೌತಣ। ಬಡಿ ಪನಿನ್ನ ॥೩॥ ಕ್ಷತ್ರಿ ಕುಜರು ನಾವೆಲವೊ ಕಲಿ । ಪಾರ್ಥನೀನಿದನರಿಯ ದಾದೆಯ । ಸತ್ವದಿಂ ಕಟ್ಟಿದೆವು ತುರಗವ । ವ್ಯರ್ಥವಲ್ಲ ॥೪॥ ಪೂತುರೇ ನೃಪ ನಿನಗನಿತು ಸ । ತ್ವಾತಿಶಯವಿರೆ ಪರಿಕಿಸುವೆ ನೀ । ನಾತುಕೊಳ್ಳೆನು ತೆಗೆದ ನರಶರವ್ರಾತಗಳನು ॥೫॥

॥ ಭಾಮಿನಿ ॥

ವಸುಧೆ ಪಾಲಕ ಕೇಳು ಪಾರ್ಥನು । ಪೊಸಮಸೆಯ ವಿಶಿಖಗಳತಾ ತೆಗೆ । ದೆಸೆದು ಜವದಿಂದರಿಭಟನ ವಕ್ಷವನು ಕೀಲಿಸಲು ॥ ಬಸವಳಿದು ಜಾಮಾರ್ಧ ಮೂರ್ಛೆಯೊ । ಳೆಸೆದು ಮೆಲ್ಲನೆ ಚೇತರಿಸುತಾ । ಯಸದಿ ಕಣ್ದೆರೆದೊಡನೆ ತನ್ನಲಿ ಮರುಗುತಿಂತೆಂದ ॥೧॥

ರಾಗ ॥ ॥ ಏಕತಾಳ

ಶಿವನೆಯಿನ್ನೇನೆಂಬೆನು । ಯೀ ವಿಧಿಯಾಯ್ತು । ಬವರದಿನರನೊಳಾ ನು ॥ ಜವಗೆಟ್ಟೆನಯ್ಯೊಯಿನ್ನು । ಗೆಲ್ಲುವೆನೆಂತು । ದಿವಿಜೇಂದ್ರತನಯನನೂ

||೧|| ಕ್ಷತ್ರಿಪಂಥ'ದಿಹಯವ | ಬಂಧಿಸಿ ಧುರಕೆ | ವ್ಯರ್ಥ ಬೆದರಿ ಕಪ್ಪವ|| ತೆತ್ತರೆಪಾರ್ಥಗಿನ್ನು | ಜೀವಿಸಿ ಮೇಣೆ ಪೃಥ್ವಿಯೊಳ್ಕಾರ್ಯವೇನು ||೨|| ಘನ ಪರಾಕ್ರಮಿವಹ್ನಿಯು | ಜಾಮಾತನೆನ | ಗಿನಿತಿರಲೀವಿಧಿಯು ||ಯೆನ ಗೊದಗಿತು ನಾಮುಂದೇ | ಬರಿಸುವೆ ಪಾವಕನ ಶೀಘ್ರದಿಂದಯಿಂದೇ||೩||

|| ಕಂದಪದ್ಯ ||

ಜನಪತಿ ಬಳಿಕಾವಹ್ನಿಯ | ಮನದೋಳ್ ಧ್ಯಾನಿಸುತತಿ ಭಕ್ತಿಯೊಳಿ ರಲರಿತುಂ || ಘನವೇಗದಿತಾ ನಡೆತಂ | ದನಲಂ ಹದನೇನುತಲಿ ಬೆಸ ಗೊಳಲೆಂದಂ ||೧||

ರಾಗ || || ಏಕತಾಳ ||

ಕೇಳು ಕೃಶಾನು ನಾ | ನಾಳಿದೆನೀರಾಜ್ಯ |ಪೇಳಲೇನ್ನೆಸತ್ವ | ಶೀಲ ಸಂಪನ್ನ ||ಮೇಲೆ ನಿನ್ನ ಸಹಾಯ | ದಾಳುತನದಿನೃಪ | ಜಾಲಗಣೆಸದಿರ್ದೆ ಜಾಲವಿದಲ್ಲ ||೧|| ಇಂದ್ರನಂದನನಶ್ವ | ಬಂಧಿಸಿನಾಕಾದಿ | ಹೊಂದಿದುದಪ ಜಯ | ಮುಂದೇನು ದಾರಿ || ಬಂಧು ನೀನಾಗಿರ |ಲಿಂದೆನಗೀ ವಿಧಿ | ಬಂದುದೇನಿದ ಹರಿ | ಸೆಂದರೆ ನುಡಿದ ||೨||

ರಾಗ ||ಕೇತಾರಗೌಳ || ಅಷ್ಟತಾಳ

ಮಾತುಳ ಚಿಂತಿಪು | ದೇತ ಕಿನ್ನಿದಕಿನ್ನು | ಭೀತಿಯ ಬಿಡುಕ್ಷಣದಿ|| ಶ್ವೇತವಾಹನನ ವಿ |ಖ್ಯಾತಸೈನ್ಯವಪೊಕ್ಕು | ನಾತಡೆದವರುಗಳ ||೧|| ಘನಪರಾಕ್ರಮಿಯರ್ಜುನನ ಬಲಕಾಂತಾರ | ವನು ನಿಮಿಷದೊಳ ಗಿಂದು || ಮುನಿದು ಭಸ್ಮವಗೈವೆ | ನನು ಮಾನಿಸದಿರೆಂದು | ಜನಪತಿ ಗಭಯವಿತ್ತ ||೨||

|| ವಾರ್ಧಿಕ್ಯ ||

ಇಂದು ಕುಲತಿಲಕ ನೀಕೇಳು ಮಾಹೀಷ್ಮತಿವ | ಸುಂಧರಾಧಿಪಗರುಹಿ ಧೈರ್ಯವಂಬಳಿಕ ಖತಿ |ಯಿಂದ ಪೊಕ್ಕಾನರನ ಬಲವಸುಡ ತೊಡಗಿದಂ ಸಪ್ತರಸನಂ ರಭಸದಿ || ಮಂದಿಗಜರಥವಾಜಿಯೊಂದುಳಿಯದಂತೆ ಹೊಗೆ| ಯಿಂದುಂಬಿ ಭುಗಿಲೆನುತ ಧಳ್ಳುರಿಯ ಸೂಸಿದರೆ | ಬೆಂದು ಬೇಗುದಿಯಾಗಿ ಸೀದುಸೀಕರಿಯೋಗಿ ಭಸ್ಮಮಾದುದುಕ್ಷಣದೊಳು ||೧||

॥ ಕಂದಪದ್ಯ ॥

ಸ್ವಾಹಾಕಾಂತಂ ಪಾರ್ಥನ । ಮೊಹರವಂ ಸುಟ್ಟುರುಹಲುಕಂಡೀ ಪರಿಯಂ ॥ ಈ ಹದನಚ್ಚರಿ ಮುಂದೇ । ನಾಹುದೊಯೆನುತಲಿ ಚಿಂತಿಸಿದಂ ಕಾಂತೇಯಂ ॥೧॥

ರಾಗ ॥ ನೀಲಾಂಬರಿ ॥ ಝಂಪೆತಾಳ

ಅಕಟಕಟಯಿನ್ನೇನಮಾಳ್ಪೆ । ಧರ್ಮಜನ । ಮುಖವನಾನ್ನಿನ್ನೆಂತು ನೊಳ್ಪೆ ॥ಪಲ್ಲ॥ ಧರೆಯರಾಯರನೆಲ್ಲ ಗೆಲಿದು । ಕಪ್ಪವನು । ತರಲೆನ್ನ ಕಳುಹಿತಾನಂದು । ದೀಕ್ಷೆಯನು । ಧರಿಸಿರುವನಗ್ರಜನು ಮಖಕಾಯ್ತು ಕುಂದು ॥೧॥ ಮೂರುಲೋಕದ ಗಂಡ ಪಾರ್ಥ । ಹರಿಹರರ । ವೀರ ತನದಿಂದ ಮೆಚ್ಚಿಸಿದಾತನೆನುತ । ಬಿರುದೆನಗೆ । ಧಾರಿಣಿಯೊಳಿರ್ದ। ದೀವರೆಗೆ ಪೊಗಳುತ್ತ ॥೨॥ ಈನರಾಧಿಪನ ದೆಸೆಯಿಂದ । ಬಂತೆಮ್ಮ ಸೇನೆಗತಿ ಹಾನಿಯೊದಗಿತು ಕಾಣೆನೊಂದ । ಬಂದೆಡರ । ನೀನೆ ಪರಿಹರಿಸು ಕರುಣಾಕರ ಮುಕುಂದ॥೩॥

॥ ಭಾಮಿನಿ ॥

ಏನಿದದ್ಭುತ ತ್ರಿಭುವನ ವತಾಹಾನಿಗೈದ ಪೆನೆನುತ ಪುರಹರ । ತಾನೆ ಕಣ್ದೆರೆದುರುಹ ತೊಡಗಿದ ನೋಮಹಾದೇವ ॥೧॥ ಈ ನಿಧಾನವನರಿಯೆ ಸೈನ್ಯವಿ । ದೇನು ಕಾರಣ ಧರೆಗುರುಳುತಿದೆ । ತಾನು ಮುನಿದನಿದೇಕೆ ಶಿಖಿಯೆಂದೆನುತ ಯೋಚಿಸಿದ ॥೨॥

ರಾಗ ॥ ಸಾಂಗತ್ಯ ॥ ರೂಪಕತಾಳ

ಬಂದ ವಿಘ್ನವಹರಿ । ಸೆಂದಗ್ನೀದೇವನ । ನಿಂದು ಪಾರ್ಥಿಸುವೆ ಭಕ್ತಿಯಲಿ । ಮುಂದೆ ದಾರಿಯಕಾಣೆ । ನೆಂದು ದೇವೇಂದ್ರನ । ನಂದನ ಮನವ ಮಾಡಿದನೂ ॥೧॥ ಕರದಚಾಪವ ಧರೆ । ಗಿರಿಸಿತಾಶುಚಿಯಾಗಿ । ಕರವ ಜೋಡಿಸಿ ದೈನ್ಯದಿಂದ ॥ ಶಿರವ ಬಾಗುತ ನೀನೆ ಪೊರೆಯೆಂದು ನುತಿಗೈದ । ನಿರದೆ ಮತ್ತನಲ ಸೂಕ್ತದಲಿ ॥೨॥

ರಾಗ ॥ ॥ ಏಕತಾಳ

ಜಯಜಯ ಶ್ರೀದಹನ । ಹೇ ಸಪ್ತರಸನ । ಜಯಜಯ ಶ್ರೀದಹನ॥ ಜಯಜಯ ತ್ರಿಭುವನ । ಲಯ ಪರಿಪಾಲನ । ದಯದಿ ಪಾಲಿಪುದೆನ್ನ । ಸದ್ಗುಣರನ್ನ ॥೧॥ ದೇವನೀನೆ ಮುನಿವೆಯ ಮುಂದೆನ್ನನು । ಕಾವಮಹಿಮ ರ್‍ಯಾರಯ್ಯ ॥ ನಾವೆಸಗುವ ಮಖ । ದಾವರ ಹವಿರ್ಭಾಗ । ದೇವನಿನಗೆ

ನಿನ್ನಿಂ । ದೇವಾಳಿಗಹುದಯ್ಯ ॥೨॥ ಎನ್ನ ಮೇಲತಿದಯದಿ । ಗಾಂಢೀವಧನು । ವನ್ನಿತ್ತೇ ನೀನೆವನದಿ ॥ ನಿನ್ನೊಳುದ್ಭವಿಸಿದ । ಕನ್ಯೆ ಪಾಂಚಾಲೆನೋ । ಡನ್ಯರೆನಿನಗೆ ಪ್ರ । ಸನ್ನ ನಾಗ್ಯೆದೇವ ॥೩॥

॥ ಕಂದ ಪದ್ಯ ॥

ಕರುಣದಿ ಪಾಲಿಸು ವೈಶ್ವಾ । ನರ ನೀನೆನ್ನಂ ಜಯಜಯ ವೆನುತಲಿ ಪಾರ್ಥಂ ॥ ಪರಿಪರಿಯಿಂ ನುತಿಸುತ್ತಿರೆ । ಹರುಷದಿ ಮೈದೋರುತ ಪಾವಕನಿಂತೆಂದಂ ॥೧॥

ರಾಗ ॥ ಕಾಂಭೋದಿ ॥ ಝಂಪೆತಾಳ

ತರಳ ಮೆಚ್ಚಿದೆ ಸಾಕು । ಶಿರವ ನೆಗಹೆನುತಗ್ನಿ । ಕರವ ಪಿಡಿದೆತ್ತಿ ಸಂಭ್ರಮದೀ ॥ ಮರುಗಲೇಕ್ಕೆ ಬರಿದೆ । ತುರಗಮೇಧ ವಿದ್ಯಾಕೆ । ದುರಿತ ಹರಹರಿ ನಿಮ್ಮೊಳಿರಲು ॥೧॥ ಅಹುದು ನೀವೆಂಬುದಂ ಮೀರಬಪ್ಪುದೆ ಹರಿಯ । ಸಹವಾಸವೇ ಸಾಲ್ದು ಜಗದೀ ॥ ವಹಿಸುವವರಾರು ಸದ್ಧರ್ಮ ಮಾಧವನಾಜ್ಞೆಯಿಹುದೆಮಗೆ ಮಖವ ನೆಸಗುವಡೆ ॥೨॥ ಆತನಪ್ಪಣೆಯೊಳಿ। ನ್ನೀ ತುರಗ ಮೇಧವನು । ತಾತೊಡಗಿದನು ಧರ್ಮಜಾತ ॥ ನಾತೆರಳಿ ಬಂದೆನೀ । ರೀತಿಯಾದುದು ಪೊರೆಯೊ । ವೀತಿಹೋತ್ರನೆ ಕರುಣವಿರಿಸಿ॥೩॥

॥ ಭಾಮಿನಿ ॥

ಗುಣವ ನದಿಯಹಫಲುಗುಣನೆ ಕೇ । ಳ ನಿತುಮನ ಮುನಿಸಿಲ್ಲ ನಿನ್ನೊಳು। ನಿನಗೆ ನಾನೆರೆಡೆಣಿಸೆ ನುಡಿಸಟೆಯಲ್ಲ ಜಯವಹುದು ॥ ಯೆನುತ ಮತ್ತಾ ವಹ್ನಿ ಕುಂತೀ । ತನಯನನು ಬೀಳ್ಕೊಂಡು ಮಾವನ। ಸನಿಯ ಕೈದುತಲೆಂದ ವಿನಯದೊಳತಿ ಹಿತದೊಳತಿ ಹಿತದೊಳಿಂತು॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ಮಾವ ಲಾಲಿಸುಬೇಡ ಬಿಡುಬಿಡು । ನೀ ವಿರೋಧವ ನರನೊಡನೆ ಸ। ದ್ಭಾವದಿಂದಿಹುದೊಳಿತು ಮುಂದಕೆ । ಭೂವರೇಣ್ಯ ॥೧॥ ಸಂಗರವ ಕೊನೆಗೊಳಿಸಿ ಮೆರೆವತು । ರಂಗವನು ಕೊಂಡೊಪ್ಪಿಸಾತನ । ಸಂಗಡವೆ ಪೋಪುದು ಸಹಾಯಕೆ । ಹಿಂಗದಿನ್ನು ॥೨॥ ನಿನ್ನ ಮಾತಿನೊಳೈದಿಪಾರ್ಥನ। ಸೈನ್ಯವನು ಪರಿಭವವ ಗೊಳಿಸಲು । ಯೆನ್ನಮರೆಯನು ಹೊಕ್ಕಮೇಲೇ। ನಿನ್ನುಕದನ ॥೩॥ ತನ್ನ ಪಂಚಪ್ರಾಣ ಪಾಂಡವ । ರೆನ್ನುತಲಿ ಹರಿಪಾಲಿಸು ವನವ । ರನ್ನು ಸಂತತ ಬಾರದಪಜಯ । ವಿನ್ನವರ್ಗೆ ॥೪॥

|| ವಾರ್ಧಿಕ್ಯ ||

ಧರಣೀಶ ಕೇಳದರೊಳ್ ಸುರಪನಂದನಂ । ಹರಿಹರಾದ್ಯರ ಕದನದೊಳು ಮೆಚ್ಚಿಸಿದ ಧೀರ । ನಿರುವನವ ನಂಗೆಲ್ಲರ್ಯ್ಯಾರು ನೀನದರಿಂದ ಹಯವ ನಾತನಿಗೊಪ್ಪಿಸೀ ॥ ಹರಿಯೊಲುಮೆಯಂ ಪಡೆಯೆನುತ್ತ ಸಂತೈಸುತ್ತ । ಲರಸನಂ ಪುರಕೆ ಮರಳಿಸಲಿತ್ತಲಾ ಪಾರ್ಥ । ಭರದಿ ನಾರಾಯಣಾಸ್ತ್ರವನೆಚ್ಚು ಶಮನಿಸಿದ ನುರಿಯಡಾವರಿಯನಂದು ॥೧॥

ರಾಗ ॥ ಸವ್ವಾ ॥ ಏಕತಾಳ

ಧರಣಿಪ ತನ್ನಯ । ಪುರಕೈದುತಲಾ । ನರಗೀವಡೆ ಬಹು ವಸ್ತುಗಳ। ನೆರಹುತಲಿರಲವ । ನರಸಿ ಜ್ವಾಲೆ ಬಂ। ದರಸನೊಳೆಂದಳೀ ಮಾತುಗಳ ॥೧॥

ರಾಗ ॥ ಸುರುಟ ॥ ಏಕತಾಳ

ಏನಿದೇನುಪ್ರಿಯ । ಸಮರವಿ । ಧಾನಸುಗುಣರೆರೆಯ ॥ ನೀನೀ ವಸ್ತುಗ । ಳಾ ನರಗೀವುದೆ । ದೀನನಾಗಿ ಕ್ಷಾ । ತ್ರಾನ್ವಯನೆನಿಸಿ ॥೧॥ ಸರಸಿಜ ಮುಖಿ ಕೇಳೆ । ಕಪ್ಪವ । ತೆರುವೆನುನಾ ನಾಳೆ ॥ ಭರದೊಳವನ ಬಲ । ಹರಿಸಲು ಪಾವಕ । ಗೆರಗಿಹನದರಿಂ । ಧುರಬಿಡಲರುಹಿದ ॥೨॥ ಆತನ ನುಡಿಗಾಗಿ । ನೀನಿ । ನ್ನೀತಕೆ ಮರುಳಾಗಿ ॥ ಸೋತೆನೆನುತ ಪುರು। ಹೂತಸುತಗೆ ನಾ । ನಾತರ ವಸ್ತುವ । ನೇನಕೊಪ್ಪಿಪುದು ॥೩॥

ರಾಗ ॥ ಕೇತಾರಗೌಳ ॥ ಝುಂಪೆತಾಳ

ಮರುಳಲ್ಲ ಕಾಂತೆ ಕೇಳು । ತ್ರೈಲೋಕ್ಯ । ಭರಿತ ಹರಿಯಾಣತಿಯೊಳು ॥ ವಿರಚಿಸುವ ಯಮಜಾತನು । ಮಖವಸಹ । ಕರಿಸದಿರಲು ಚಿತವೇನು ॥೧॥ ವಾರುಹವ ಕೊಡದೆ ಮತ್ತಾ । ಪೌರುಷವ । ದೋರು ಕ್ಷಾತ್ರಿಯ ನೆನುತ್ತ ॥ ಸೂರೆಗೊಂಬುದು ಜಯವನು । ಸಲ್ಲದಡೆ । ಸೇರುವುದು ಸುರಪುರಿಯನು ॥೨॥

॥ ಭಾಮಿನಿ ॥

ಇಳೆಯಾಧಿಪನಹ ನೀಲಕೇತಗೆ । ಹಲವು ಪರಿಯಿಂ ಜ್ವಾಲೆ ಬೋಧಿಸೆ। ಕಲಹವನು ನಿರ್ಧರಿಸಿ ಸೂರ್ಯೋದಯವ ನೀಕ್ಷಿಸುತ ॥ ಬಲಯುತನು ತಾನಿರ್ದ ಕೇಳೈ । ಲಲನೆಯರ ಬಲುಹೆಂತೂ ಪೇಳುವ । ಡಳವೆ ಕಾಂತೆಯ ಮತದಿ ಛಲವಿಡಿದ ನಂದಿನೊಳು ॥೧॥

॥ ವಾರ್ಧಿಕ್ಯ ॥

ಅರಸ ಕೇಳನಿತರೊಳ್ ಪೂರ್ವಾದ್ರಿ ಭೂವರಂ । ವಿರಹದುರಿಯಿಂ ಪೊರಳ್ದಳಲುತಿಹ ಕೋಕಗಳ । ಮೊರೆಯ ನಾಲಿಸುತಲಳಿಕುಲದ ಬಂಧನವ ನೆನೆನೆನೆದು ಮನ್ಮಥ ಶಬರನ ॥ ಮೆರೆವ ಜಯಸಿರಿಯೆಂಬ ತೆರದೊಳಿಹತ ಮನಿಶಾ । ಚರಿಯ ತರಿದಪೆನೆಂದ ಕನಲಿ ಕೆಂಪಿಡಿದು ಕ। ಣ್ದೆರೆಯೆ ಪೊರಮಡುವ ಕೆಂಗೆಂಡವೆನೆ ತರಣಿ ಯುದಿಸಿದ ಪೂರ್ವ ಪರ್ವತದೊಳೂ ॥೧॥

ರಾಗ ॥ ಸೌರಾಷ್ಟ್ರ ॥ ತ್ರಿವುಡೆತಾಳ

ಮಿತ್ರನು ದಯದೊಳೆದ್ದು ಪಟುಭಟ । ಮೊತ್ತವನು ಶೇಖರಿಸಿ ವಹಿಲದಿ । ಮತ್ತೆ ಮಾಹೀಷ್ಮತಿ ಪುರಾಧಿಪ । ನತ್ತ ಪೊರಟು ॥೧॥ ತುರಗವನು ಬಿಡೆ ಬವರಕನುವಾ । ಗಿರಲೆನುತ ಪಾರ್ಥಂಗೆ ಸೂಚಿಸ । ಲರಿತು ನರನಾಕ್ಷಣದಿ ಸೈನ್ಯವ । ನೆರದಿ ಭರದಿ ॥೨॥ ಪುರವ ಮುತ್ತುವ ದೆನುತ ಮುಂದ್ವರಿ ।ದಿರಲು ನೀಲಧ್ವಜನು ಕಾಣುತ । ಧುರವೆಸಗುತಿರಲಾ ಪ್ರವೀರಗೆ। ನರನು ನುಡಿದ ॥೩॥

ರಾಗ ॥ ಭೈರವಿ ॥ ಅಷ್ಟತಾಳ

ಆರೆಲೊ ನೃಪಕುವರ । ಸಂಗ್ರಾಮದಿ । ವೀರ ನೀನಹೆಯ ಪೋರ॥ ಸಾರವಲ್ಲದು ಕೆಲ । ಸಾರುತ್ತ ನಮ್ಮಯ । ವಾರುಹವದನೊಪ್ಪಿಸು ॥೧॥ ವಾರುಹವನು ಬಂಧಿಸಿ । ಬಿಡುವುದುಂಟೆ । ಸಾರವಲ್ಲಿದು ಸಾಹಸಿ॥ ಧಾರಿಣಿಪತಿಯ ಕು ।ಮಾರಕ ವೀರ ಪ್ರ ।ವೀರ ನಾನಹೆನು ಕೇಳು ॥೨॥ ಮರುಳೆಲಾ ತ್ರೈಜಗದಿ । ಪ್ರವೀರನಾ । ನಿರಲೀ ಮಹೀತಳದಿ ॥ ಮರಧ ನಂಜಯನೊಳು । ಬರಿದೆ ಪ್ರವೀರನೆಂ ।ದರೆ ಪೆಸರಡಗಿಪೆನೂ ॥೩॥ ಘನವೆ ನೀ ಕೇಳಾದರೆ । ಮಿಕ್ಕಹಿತಕಾ । ನನಧನಂಜಯ ನಾನಿರೆ ॥ ನಿನಗೀ ಪೆಸರುಸಲ್ಲ ।ದನು ವರದಲಿ ತೆಗೆ । ವೆನು ಕೇಳೆಂದೆಚ್ಚನಾಗ॥೪॥

ರಾಗ ॥ ಮಾರವಿ ॥ ಏಕತಾಳ

ಸಣ್ಣವ ನೀನೆನು । ತೆಣ್ಣಿಸಿ ಬಿಟ್ಟರೆ । ಗಣ್ಯವಿಲ್ಲದಿಂತು ॥ ನಿನ್ನಯ ಗರ್ವದ ನೆನ್ನೊಳು ತೋರ್ಪುದೆ । ಯೆನ್ನುತ ಶರವೆಸೆದ ॥೧॥ ತಡೆಗಡಿದೊಡ ನದ । ಬಿಡಲು ಶರೌಘವ । ಕಡಿದಾ ಫಲುಗುಣನೂ ॥ ಬಿಡೆದಿ ವ್ಯಾಸ್ತ್ರವ। ದೊಡನೆ ಪ್ರವೀರನ । ತುಡುಕಿ ಕೆಡಹೆ ಶಿರವ ॥೨॥

॥ ಕಂದಪದ್ಯ ॥

ತರಳ ಪ್ರವೀರನ ಶಿರ ಧರೆ । ಗುರುಳಲು ಕಾಣುತಲಾ ನೀಲಧ್ವಜ ನಾಗಂ ॥ ಹರ ಹರಯೆನುತ್ತೈತರುತಂ । ಶಿರವಂ ಮುಂಡಾಡುತಲೆಂದಂ ಶೋಕಿಸುತಂ ॥೧॥

ರಾಗ ॥ ॥ ಆದಿತಾಳ

ಮಗನೆ ನಿನ್ನ । ಅಗಲಿ ಪುರವ । ಪೊಗುವೆನೆಂತು ಚಿನ್ನ । ಸುಗುಣ ರನ್ನ । ಜಗದೊಳನ್ಯ । ವಿಗಡರಿಹರೇನೆನ್ನ ॥೧॥ ಧುರದಿ ಶೌರ್ಯ। ದಿರವ ದೋರಿ । ನರನ ಹತಿಯೊಳಿಂದು ॥ ಧರೆಗುರುಳಿದೆ ಬರೆದಪಣೆಯ। ಕ್ಕರದ ವಿಧಿಯದಿಂತು ॥೨॥ ಕಂದನೀ ಬಾರೆಂದು ಮುದದಿ । ಮುಂದೆ ಕರೆವೆನಾ ನ್ಯಾರನು ॥ ಇಂದ್ರಸುತನೊ । ಳಿಂದು ಜಯವು । ಹೊಂದದೆ ಹೋಯಿತೇನು? ॥೩॥ ವೀತಿ ಹೋತ್ರ । ನೀತಿನುಡಿಯೆ । ಮಾತ ಕೊಳದೆ ಬಗೆಗೆ ॥ ಘಾತಿಸಿದೊಲಾ । ಯ್ತೀತೆರದಿಮ । ನ್ನಾಥೆಯೆಂದ ನುಡಿಗೆ ॥೪॥

॥ ಭಾಮಿನಿ ॥

ಪರಿಪರಿಯೊಳಾ ನೃಪತಿ ಬಾಲನ । ಶಿರವನೆಗಹುತ ಮುದ್ದಿಸುತಮಿಗೆ। ಕರದೊಳಪ್ಪುತ ರೂಪಗುಣ ವಿಕ್ರಮವ ಬಣ್ಣಿಸುತ ॥ ಮರುಗಿ ಮನದೊಳು ಬಳಿಕ ಕೋಪೋ । ತ್ಕರುಪ ಶಿಖಿ ಮಸಗಲ್ಕೆರೌದ್ರದಿ । ಧರಣಿಪತಿ ನೀಲಧ್ವಜನು ಫಲುಗುಣನಿಗಿದಿರಾದ ॥೧॥

ರಾಗ ॥ ಭೈರವಿ ॥ ಏಕತಾಳ

ಪೊತುರೆ ಪ್ರತಿಭಟ ನಿನ್ನ । ಶರ । ವ್ರಾತವ ಬಿಡು ಪರಿಕಿಪೆನಾ ॥ ಘಾತಿಸಿದೆಯ ಮಮಸುತನ । ಬಿಡೆ । ನೃತೊಡಗಿದೆ ಬಲುಕದನ ॥೧॥ ಸೊಕ್ಕಿನ ನುಡಿಯಾಡದಿರು । ಜಯ । ಸಿಕ್ಕದು ನೀ ಕೈದೋರು ॥ ತಕ್ಕುದ ಶಿಖಿ ಪೇಳಿದರೆ । ಮನ । ಕಿಕ್ಕದೆ ಬಂದಿಹೆ ಭಳಿರೆ ॥೨॥ ಮಂತ್ರಿ ಸಹೋದರರುಗಳ । ಸುತ । ರಂ ತಡೆಗಡಿದಿಹ ಖೂಳ ॥ ಯೆಂತಾದರು ಬಿಡೆ ನಿನ್ನ । ಶಿರ । ವಂ ತರಿವೆನು ನಿಮಿಷದಿ ನಾ ॥೩॥ ಸಂಗರದೊಳ ಗಳಿದಿ ಹರ । ತಿಳಿ । ದಂಗವರಿಯದೀ ಸಮರ ॥ ಹಿಂಗದೆ ತೊಡಗಿದೆ ಬರಿದೆ । ಜಯ । ವಂ ಗೊಳುವಾಶೆಯದಿಹುದೆ ॥೪॥ ಖತಿಯಿಂ ನೀಲ

ಧ್ವಜನೂ ।ಶರ । ತತಿಯ ಸುರಿಸೆ ಫಲುಗುಣನೂ ॥ ಪ್ರತಿ ಶರದಿಂ ಕಡಿದದನೂ ।ಭೂ । ಪತಿಗಿಡೆ ದಿವ್ಯಾಸ್ತ್ರವನೂ ॥೫॥

॥ ಭಾಮಿನಿ ॥

ಕಲಿಧನಂಜಯ ಕನಲಿತಾಮ । ತ್ತೆಳೆದು ದಿವ್ಯಾಸ್ತ್ರವನೆಸೆಯೆ ಬಂ। ದಿಳೆಯಧಿಪನನು ಕೆಡಹಿ ಮೂರ್ಛಿಸೆ ಕಾಣುತದನಂದೂ ॥ ಅಳಲಿ ಮನದೊಳು ಸಾರಥಿಯು ಪುರ ।ವಳಯ ಕೈದಿಸೆ ರಥವನಾಕ್ಷಣ । ಬಳಿಕ ನೃಪತಿಳಿದೆಚ್ಚರಿತು ತಾನೆಂದ ಮನಮರುಗಿ ॥೧॥

ರಾಗ ॥ ॥ ಅಷ್ಟತಾಳ

ಹರ ಹರ ಸವನಿಸಿ ತೀಪರಿ ।ಕಷ್ಟ । ವರುಹುವದೇನೆನ್ನ ಜಯಸಿರಿ॥ ಬರಿದಾಯ್ತು ನರನ ಸಂಗರದೊಳು । ಶೌರ್ಯ । ಮೆರೆಯದಾಯಿತು ಧುರಗಲಿ ಯೊಳು ॥೧॥ ಏತಿ ಹೋತ್ರನ ನೀತಿ ಭೋಧೆಯ । ಮನ । ಕೇತಾರದಿಂತಾಯ್ತು ನಿಶ್ಚಯ ॥ ಸೋತೆನು ಸತಿಯಮಾತಿನೊಳಾನು । ಕಡು । ಪಾತಕಿಯವಳಿಂದ ಕೆಟ್ಟೆನೂ ॥೨॥ ಸುತ ಸಹೋದರ ಬಂಧುವರ್ಗವ। ಚಮೂ । ಪತಿ ಸಚಿವಾದಿನಿ ಕಾಯವ ॥ ಪ್ರತಿಭಟನರ ನಸ್ತ್ರಕಿತ್ತೆನೂ । ಮುಂದೆ । ಗಾಣದಾದೆನು ಫಲವೇನು ॥೩॥ ದುಷ್ಟೆ ಘಾತಕಿ ಜ್ವಾಲೆಯಾದಳು। ಯಿಂಥಾ । ಕಷ್ಟವನೆನಗೊದಗಿಸಿದಳು ॥ ಭ್ರಷ್ಟೆ ಸಲ್ಲಳು ತನಗೆನುತ್ತ । ಬಹು । ಸಿಟ್ಟಿನಿಂದೆದ್ದೊಳ ಸರಿಯುತ್ತ ॥೪॥

ರಾಗ ॥ ಕಾಂಭೋದಿ ॥ ಝಂಪೆತಾಳ

ಎಲೆ ದುಷ್ಟೆ ಜ್ವಾಲೆ ನೀ । ನಿಲಬೇಡ ನಡೆಗಾಢ । ಕಿಳುಹಿಕುಟಿರಿವ ನೆನಗೆ ನಿನ್ನೆ ॥ ಫಲುಗುಣನ ಹಯವ ನವ । ಗೊಲಿದೀಯದಂತೆಸಗು । ತಲಿ ಕೆಡಿಸಿದೆಯಲ ಕಡುಪಾಪಿ ॥೧॥ ಹರಿಯ ಮೈದುನನೊಡನೆ । ಧುರ ವೆಸಗಲರುಹಿ ಸೋ । ದರ ಸುತರು ಸಚಿವಾಪ್ತರುಗಳ ॥ ಬರಿದೆ ಕೊಲಿಸಿದೆಯೆಂದು । ಧರಣಿಪತಿ ಪುರದಿಂದ । ಹೊರಡಿಸಿದನಾಕ್ಷಣ ದೊಳವಳ ॥೨॥ ಬಂಧಿಸಿದ ಮಖ ಹಯವ ।ನಂದು ತರಿಸುತ ಘೋಷ। ದಿಂದ ಕಪ್ಪವ ಹೊರಿಸಿ ಕೊಳುತ ॥ ಇಂದ್ರನಂದನನೆಡೆಗೆ । ಬಂದು ಕೈಮುಗಿದನಿತ । ನಿಂದೊಪ್ಪಿಸಿದನು ಸಂತಸದಿ ॥೪॥ ಶ್ವೇತ ವಾಹನ ನೀಲ। ಕೇತಗುಚಿತವನಿತ್ತು । ಪ್ರೀತಿಯಿಂ ಮನ್ನಿಸಲ್ಕಾಗ ॥ ಗೀತ ನೃತ್ಯಾದಿ ವಿವಿ । ದಾತಿಶಯ ಜಯರವದ । ನೂತನೋತ್ಸಾಹವದು ಮೆರೆಯೆ ॥೪॥

॥ ವಾರ್ಧಿಕ್ಯ ॥

ಧರಣಿಪತಿ ಕೇಳಿತ್ತ ಜ್ವಾಲೆತಾಪುರದಿಂದ । ಪೊರಟಾಗ ಬಂದು ತನ್ನ ನುಜನುನ್ಮುಖ ಗರುಹೆ । ಹರಿಯ ಹಗೆ ಸಲದೆಂದು ಧಿಕ್ಕರಿಸಲಲ್ಲಿಂದ ಕೃತ್ರಿಮವನೆಣಿಸಿ ಬಳಿಕ ॥ ಸುರನದಿಯ ತಡಿಗೈದಿ ನೀ ದೋಷಿಯಹೆ ನಿನ್ನ । ತರಳ ಬೀಷ್ಮನನರಂ ತರಿದ ನೆನೆಮಮ ಸುತನ । ಹರಿಸಿದನ ತಲೆಯ ನಾತನಸುತಂ ತಿಂಗಳೊಳು ತರಿಯಲೆನ್ನುತ ಶಪಿಸಲು ॥೧॥

॥ ಭಾಮಿನಿ ॥

ಕೃತ್ರಿಮದ ನುಡಿಯಿಂದ ಪಾರ್ಥಗೆ । ಮತ್ತೆ ಗಂಗಾದೇವಿಯಿಂ ಕೊಡಿ। ಸುತ್ತ ಶಾಪವ ಬಳಿಕ ತಾನಂಬಾಗಿ ಬಹೆನೆನುತ ॥ ಚಿತ್ರಭಾನು ಪ್ರವೇಶಮಂ ಗೈ । ಯುತ್ತ ಜ್ವಾಲೆಯು ಬಭ್ರುವಾಹನ । ನುತ್ತ ಮದ ಮಾಡಿಗೆಯೊಳಿರ್ದಳು ವೈರತನದಿಂದ ॥೧॥

ರಾಗ ॥ ಸೌರಾಷ್ಟ ॥ ತ್ರಿವುಡೆತಾಳ

ಕೇಳು ಧರಣಿಪ ಬಳಿಕಪಾರ್ಥನು । ನೀಲಕೇತಾದ್ಯರನು ಕೂಡುತ। ಪಾಳಯವು ಸಹಿತೈದೆ ಮುಂದಕೆ । ಸಾಲು ವಿಡಿದೂ ॥೧॥ ಮತ್ತೆ ತೆಂಕಣದ ವನಿಪರೆ ಗೆಲಿ । ಯುತ್ತ ಕಪ್ಪವಗೊಳುತ ತನ್ನಯ । ಪತ್ತನಕೆ ಬಂದಣ್ಣ ಗೊಪ್ಪಿಸ । ಲರ್ಥಿಯಿಂದ ॥೨॥ ಸಿರಿವರನ ಕೃಪೆಯಿಂದ ಧರ್ಮಜ । ತುರಗ ಮೇಧವ ರಚಿಸಿದುರಿತವ । ಹರಿಸಲಂಬರದಿಂದ ಪೊಮಳೆ । ಗರೆಯೆಸುರರು ॥೩॥ ಕ್ಷೀರವಾರಿಧಿ ಶಯನನವ ಶೃಂ । ಗಾರ ಪೀಠದೊಳೊಪ್ಪಿರಲ್ಕಾ । ನಾರಿಯರು ತಂದೆತ್ತಿ ಬೆಳಗಿದ । ರಾರತಿಯನೂ॥೪॥

ರಾಗ ॥ ಧವಳಾರ ॥ ಏಕತಾಳ

ಕ್ಷೀರಸಾಗರ ವಾಸಹರಿಗೇ । ಚಾರು ಪೀತಾಂಬರ ಧರಗೇ ಮೂರು ಜಗವನುದರದಿ ಧರಿಸಿದಗೇ । ಘೋರ ಕಲುಷ ಭಯಪರಿ ಹರಿಸುವಗೇ॥ ವಾರಿಜ ನೇತ್ರಗೆ । ಭೂರಿ ಕೃಪಾಬ್ಧಿಗೆ । ನೀರೆಯರಾರತಿಯ ॥ ಬೆಳಗಿದರೂ॥ ಶೊಭಾನಂ ॥೧॥ ದೇವರ ದೇವನಾದವಗೇ । ಪಾವನ ಚರಿತ ಮಾಧವಗೇ। ಸಾವಿರ ನಾಮದನಂತ ಮಹಿಮನಿಗೆ । ದೇವಕಿಸುತನೆನಿಸಿದ ಚಿನ್ಮಯಗೆ ॥ ಭಾವಜನಯ್ಯಗೆ । ಭಾವಕಿಯರು ಹೊಸ । ಹೂವಿನಾರತಿಯ ॥ ಬೆಳಗಿದರೂ॥ ಶೋಭಾನಂ ॥೨॥

॥ ವಾರ್ಧಿಕ್ಯ ॥

ಕ್ಷಿತಿನಾಥಲಾಲಿಸೀ ಪರಿಯೊಳಾರತಿಯೆತ್ತಿ । ಸತಿಜನಂ ಮರಳಲ್ಕೆ ಕಂಸಾರಿ ಸಹಯಮಜ । ನತಿಶಯಾನಂದ ದಿಂದಿರುತಿರ್ದ ನಿಭಪುರದೊಳರುಹಲೇ ನಚ್ಚರಿಯನೂ ॥ ಶೃತಿಗಗೋಚರನಾದ ಶ್ರೀಕಾಂತನಂಪಾಡು। ಸುತರೊಲಿಸಿ ಕೊಂಡೀರ್ದರ್ರೀಶುಭ ಚರಿತ್ರಮಂ । ಹಿತದಿ ಕೇಳೆಂದಂ ವೈಶಂಪಾಯ ಜನಮೇಜಯಂ ಗೊರೆದ ಸತ್ಕಥೆಯನೂ ॥೧॥ ಪೊಡವಿ ಜನರರಿವಂತೆ ವರ ಯಕ್ಷಗಾನ ಪರಿ । ವಿಡಿದು ದಕ್ಷಿಣ ಕನ್ನಡದ ಜಿಲ್ಲೆಯುಪ್ಪಿನಂ । ಗಡಿಯೆನಿಪ ತಾಲೂಕಿನ ಮರಮಾಗಣೆಯೊಳಿಹ ಪಡ್ನೂರೆನಿಪ ಗ್ರಾಮದಿ ॥ ಬಿಡದೆ ಪರಿಶೋಭಿಪಜ್ಜನ ಗದ್ದೆಯಲ್ಲಿರ್ಪ । ಪೊಡವಿ ಸುರಕುಲಜ ಸುಬ್ರಾಯಾಖ್ಯ ಭೂಸುರಂ । ಪಡೆದ ಬಾಲಕ ಶಂಕ್ರನಾರಾಯಣಾಖ್ಯನಾಂಹರಿದಯದಿ ಗೈದೆನಿದನೂ ॥೨॥

॥ ಭಾಮಿನಿ ॥

ಪೇಳಿದೀ ಕೃತಿಯೊಳಗೆ ತಪ್ಪಿರೆ । ಶೀಲರಿದ ತಿದ್ದುವುದು ದಯದಿಂ। ಮೇಲೆ ಹಂಸಕ್ಷೀರನ್ಯಾಯದಿ ಬೇಡಿಕೊಳತಿಹೆನು । ಬಾಲದುರ್ಗಾಧವಸದಾಶಿವ । ಶೀಲಲಾಮ ಮುಕುಂದ ಶ್ರೀವನ । ಮಾಲಕೃಷ್ಣರ ನಮಿಪೆ ಪಾಲಿಸಲೆನ್ನ ನನವರತ ॥೧॥

ರಾಗ ॥ ಮೊಹನ ॥ ಝುಂಪೆತಾಳ

॥ ಮಂಗಳಪದ ॥

ಮಂಗಲಂ ಕರಿಮುಖಗೆ । ಮಂಗಲಂ ಹರಿಸಖಗೆ । ಮಂಗಲಂ ವಿಧಿಮನೋಹರೆ ವಾಣಿಗೆ ॥ ಮಂಗಲಂ ಲೋಕಮಾತೆಗೆ ಮಾಹಾರ್ಣವ ಸುತೆಗೆಮಂಗಲಂ ಬಾಲದುರ್ಗೆಗೆ ಭರ್ಗಗೆ ॥೧॥ ಮಂಗಲಂ ಶ್ರೀರುಂಡ ಮಾಲಗಣ ಪಾಲನಿಗೆ। ಮಂಗಲಂ ವಿಬುಧ ಮನುಮುನಿವರ್ಗಕೇ॥ ಮಂಗಲಂ ಗುರು ರಾಘವೇಂದ್ರ, ಭಾರತಿಯರಿಗೆ। ಮಂಗಲಂ ಸಕಲ ಚೈತನ್ಯಾತ್ಮಗೆ ॥೨॥ ದೇವದೇವೇಶನಿಗೆ। ದೇವಪತಿ ಪೋಷನಿಗೆ। ದೇವಾರಿ ವಂಶ ಸಂಹಾರಕನಿಗೇ॥ ದೇವಮುನಿ ನಮಿತಭೂ । ದೇವ ನೆನಿಸಿದ ವಾಸು । ದೇವ ದೇವಕಿತನಯ ಶ್ರೀ ಕೃಷ್ಣಗೇ ॥೩॥ ಜಯ ಮಂಗಲಂ । ನಿತ್ಯ ಶುಭಮಂಗಲಂ ॥

ಅಂತುಪದ ೪೭೫ ಕ್ರಂ ಶುಭಮಸ್ತು - ಶ್ರೀರಸ್ತು